ರಾಯಚೂರು ಪರಿಸರದ ಕನ್ನಡ-ತೆಲುಗು ದ್ವಿಭಾಷಿಕತೆ, ಸಮಾಜೋಭಾಷಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಆಂಶಿಕ ಪದವಿಗಾಗಿ
ಸಲ್ಲಿಸುತ್ತಿರುವ ನಿಬಂಧ

ಸಂಶೋಧಕರು
ಯರಿಯಪ್ಪ

ಮಾರ್ಗದರ್ಶಕರು
ಡಾ. ಅಶೋಕಕುಮಾರ
ಪ್ರವಾಚಕರು

ಭಾಷಾಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೮

ರಾಯಚೂರು ಪರಿಸರದ ಕನ್ನಡ-ತೆಲುಗು ದ್ವಿಭಾಷಿಕತೆ, ಸಮಾಜೋಭಾಷಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಆಂಶಿಕ ಪದವಿಗಾಗಿ
ಸಲ್ಲಿಸುತ್ತಿರುವ ನಿಬಂಧ

ಸಂಶೋಧಕರು
ಯರಿಯಪ್ಪ

ಮಾರ್ಗದರ್ಶಕರು
ಡಾ. ಅಶೋಕಕುಮಾರ
ಪ್ರವಾಚಕರು

ಭಾಷಾಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೮

ಸಂಶೋಧಕರ ಪ್ರಮಾಣ ಪತ್ರ

ರಾಯಚೂರು ಪರಿಸರದ ಕನ್ನಡ-ತೆಲುಗು ದ್ವಿಭಾಷಿಕತೆ, ಸಮಾಜೋಭಾಷಿಕ ಅಧ್ಯಯನ ಎಂಬ ನಿಬಂಧವನ್ನು ಡಾ.ಅಶೋಕಕುಮಾರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಭಾಷಾ ನಿಕಾಯದ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ :

ಯರಿಯಪ್ಪ 06/10/08
ಸಂಶೋಧಕ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರ ದೃಢೀಕರಣ ಪತ್ರ

ರಾಯಚೂರು ಪರಿಸರದ ಕನ್ನಡ-ತೆಲುಗು ದ್ವಿಭಾಷಿಕತೆ, ಸಮಾಜೋಭಾಷಿಕ ಅಧ್ಯಯನ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಯರಿಯಪ್ಪ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಅಶೋಕಕುಮಾರ
ಪ್ರವಾಚಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ :

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದ ಭಾಷಾಧ್ಯಯನ ವಿಭಾಗದಲ್ಲಿ ಎಂ.ಫಿಲ್. ಮಾಡಲು ಅನುವು ಮಾಡಿಕೊಟ್ಟ ಕುಲಪತಿಗಳಾದ ಡಾ.ಎ.ಮುರಿಗೆಪ್ಪ ಅವರಿಗೆ, ಹಿಂದಿನ ಕುಲಪತಿಗಳಾಗಿದ್ದ ಡಾ.ಕೆ.ವಿ. ನಾರಾಯಣ ಅವರಿಗೆ ಮತ್ತು ಕುಲಸಚಿವರಾದ ಡಾ.ಹಿ.ಚಿ.ಬೋರಲಿಂಗಯ್ಯ ಅವರಿಗೆ ಮತ್ತು ಅಧ್ಯಯನಾಂಗದ ನಿರ್ದೇಶಕರು ಹಾಗೂ ಗುರುಗಳಾದ ಡಾ.ಡಿ.ಪಾಂಡುರಂಗ ಬಾಬು ಅವರಿಗೆ,

ಎಂ.ಪಿಲ್. ಪ್ರಬಂಧ ರಚನೆಯ ಪ್ರತಿಹಂತದಲ್ಲೂ ನನ್ನನ್ನು ಪ್ರೋತ್ಸಾಹಿಸಿ, ಆತ್ಮೀಯತೆಯಿಂದ ಮಾರ್ಗದರ್ಶನ ನೀಡಿದ ಕನ್ನಡ ಭಾಷಾಧ್ಯಯನ ವಿಭಾಗದ ಪ್ರವಾಚಕರು ಹಾಗೂ ನನ್ನ ಗುರುಗಳಾದ ಡಾ.ಅಶೋಕಕುಮಾರ ಅವರಿಗೆ,

ಕನ್ನಡ ಭಾಷಾಧ್ಯಯನ ವಿಭಾಗದಲ್ಲಿ ಸಂಶೋಧನೆಗೆ ಸಂಬಂಧಿಸಿದಂತೆ ಸೂಕ್ತ ಸಲಹೆಗಳನ್ನು ನೀಡುತ್ತಾ, ಅಧ್ಯಯನಕ್ಕೆ ಸಹಕಾರ ನೀಡಿದ ವಿಭಾಗದ ನನ್ನ ಗುರುಗಳಾದ ಡಾ.ಸಾಂಬಮೂರ್ತಿ ಅವರಿಗೆ ಹಾಗೂ ಮುಖ್ಯಸ್ಥರಾದ ಡಾ.ಪಿ.ಮಹಾದೇವಯ್ಯ ಅವರಿಗೆ ಹಾಗೂ ಸಿಬ್ಬಂದಿ ವರ್ಗದವರಾದ ಶ್ರೀ ವೀರೇಶ ಮತ್ತು ಶ್ರೀ ಮಾರಯ್ಯ ಅವರಿಗೆ,

ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಅಧ್ಯಯನಕ್ಕೆ ಆಸಕ್ತಿ ಮೂಡಿಸಿದಂತ ನನ್ನ ಗುರುಗಳಾದ ಡಾ.ಸಿ.ಬಿ.ಚಿಲಕರಾಗಿ, ಡಾ.ಎ.ರಘುರಾಂ ಮತ್ತು ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನನ್ನೆಲ್ಲಾ ಗುರುಗಳಿಗೆ,

ನಿಬಂಧ ರಚನೆ ಮಾಡಲು ಅನುಕೂಲ ಮಾಡಿಕೊಟ್ಟಂತ ಕನಕಗಿರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರಾದ ಡಾ.ಎನ್.ಜಿ.ಹೆಬಸೂರ ಅವರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಮತ್ತು ಸಿಂಧನೂರು ಸರಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಚಾರ್ಯರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ,

ಬಾಲ್ಯದಿಂದಲೂ ಬೆಳಸಿ, ಕೂಲಿ ಮಾಡಿ ನನ್ನನ್ನು ಉನ್ನತ ವ್ಯಾಸಂಗ ಮಾಡಲು ಪ್ರೋತ್ಸಾಹಿಸಿದಂತ ನನ್ನ ಜೀವ, ಆತ್ಮ ದೇವತೆಯಾದ ನನ್ನ ತಾಯಿ ಶ್ರೀಮತಿ ಬೀಸಮ್ಮನವರಿಗೆ, ಅಧ್ಯಯನ ಸಂದರ್ಭದಲ್ಲಿ ಸಹಕಾರ ಸಹಾಯ ಮಾಡಿದಂತಹ ಸಹೋದರರಾದ ಶರಣಪ್ಪ, ಗಂಗಾಧರ, ನಾರಾಯಣ ಅವರಿಗೆ ಮತ್ತು ಅಕ್ಕನಾದ ದುರ್ಗಮ್ಮ ಮಾಮನಾದ ಶರಣಪ್ಪ ಕೆ., ಅಳಿಯಂದಿರಾದ ಮಂಜು, ಗೋವಿಂದ ನನ್ನ ಅಣ್ಣನ ಮಕ್ಕಳಾದ ಶಿಲ್ಪ, ಗೌರಮ್ಮ, ಭಾಗ್ಯಮ್ಮ ಮೌನೇಶನನ್ನು ನೆನೆಯುತ್ತೇನೆ.


ಬಾಲ್ಯದಿಂದಲೂ ನನಗೆ ವಿದ್ಯೆ ಕಲಿಯಲು ಪ್ರೋತ್ಸಾಹಿಸಿದ ಬೆಳಗುರ್ಕಿಯ ಹಿರಿಯರು ಆದ ಶ್ರೀ ಹನುಮಂತಯ್ಯ ಶೆಟ್ಟಿ ಮತ್ತು ಮಕ್ಕಳು ಇವರಿಗೆ, ನನ್ನಳ್ಳಿಯ ಹಿರಿಯರು ಆದ ಶ್ರೀ ಹನುಮನಗೌಡ ಬೆಳಗುರ್ಕಿ ಅವರಿಗೆ, ಬೆಳಗುರ್ಕಿಯ ಬಾಲ್ಯದ ಗೆಳೆಯರಾದ ಭೀಮಣ್ಣ ನಾಯಕ, ಮಲ್ಲಿಕಾರ್ಜುನ, ಪಂಪಾರೆಡ್ಡಿ ಕುರುಕುಂದಿ, ಭೀಮಣ್ಣ ಹಡಪದ, ಲಕ್ಷ್ಮೀಪತಿ ಬೋವಿ ಅವರಿಗೆ ಹಾಗೂ ಬೆಳಗುರ್ಕಿಯ ಸಮಸ್ತ ಬಂಧುಗಳಿಗೆ ಮತ್ತು ಆತ್ಮೀಯರಿಗೆ,

ಅಧ್ಯಯನ ಸಂದರ್ಭದಲ್ಲಿ ಸಹಕರಿಸಿದ ನನ್ನ ಸ್ನೇಹಿತರಾದ ವಾಗೀಶ, ಹುಲಿಯಪ್ಪ ಸಂಡೂರು, ಕುಪ್ಪೇರಾವ್, ಸೋಮಕ್ಕ, ವಿಪ್ಲವಿ, ವೀರಾಕ್ಷಿ, ವೆಳ್ಳಿಮಾ, ಹುಲಿಗೆಮ್ಮ, ಲಾವಣ್ಯ, ಬಸವರಾಜ, ಉತ್ತಂಗಿ ವೀರೇಶ, ಯು.ಸೀತಾರಾಮಯ್ಯ, ನಿರಂಜನ ರಾ.ನ., ತಿಪ್ಪೇಶಪ್ಪ ಬಿ., ಶಂಕಲಿಂಗಯ್ಯ ಎಂ., ಎಚ್.ಗವಿಸಿದ್ಧಪ್ಪ, ಶಂಕ್ರಪ್ಪ ಗುರಿಕಾರ, ಸುಧಾಕರ, ವೀರೇಶ ಜಾನೇಕಲ್, ಜಯಶಂಕರ್, ಆರ್.ಭವ್ಯ, ಬೋರಮ್ಮ ಗಂಜ್ಯಾಳ, ಅಂಜಲಿ, ಉಮಾ, ರವಿ ಗೋಮ್ಯಾ, ಪಂಡೀತ ಬಿ.ಕೆ., ಗುರುಲಿಂಗಯ್ಯ, ರಾಮಲಿಂಗಪ್ಪ, ನಾಗರಾಜ, ಹುಲಿಯಪ್ಪ, ಕಾಳಿಂಗ, ಗೋವಿಂದ ರಾಥೋಡ್, ಶಂಕ್ರಪ್ಪ ಕುರುಕುಂದಿ, ತಿರುಪತಿ, ಅಲಬನೂರು, ಶಾಂತ ವೀರಾಗ್ನಿ(ಸಹನಾ), ಅಧ್ಯಯನ ಸಂದರ್ಭದಲ್ಲಿ ಅನಿಕೇತನ ವಸತಿ ನಿಲಯದ ಸ್ನೇಹಿತರಿಗೆ ಹಾಗೂ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ನನ್ನೆಲ್ಲ ಸ್ನೇಹಿತರಿಗೆ ಹಾಗೂಎ ಅಕ್ಷರ ಸಂಯೋಜಿಸಿದ ಶ್ರೀಮತಿ ಬಿ.ರಶ್ಮಿ ಮತ್ತು ಎ.ಎಂ.ಕೃಪಾಶಂಕರ್ ಅವರಿಗೆ,

ಕೃತಜ್ಞತೆಗಳು

ಯರಿಯಪ್ಪ


ರಾಯಚೂರು ಜಿಲ್ಲೆ



ಕೃಷ್ಣಾ ನದಿ
ಕೃಷ್ಣಾ ನದಿ
ಭೀಮಾ ನದಿ
ಆಂಧ್ರ ಪ್ರದೇಶ
ಗುಲ್ಬರ್ಗ ಜಿಲ್ಲೆ
ದೇವದುರ್ಗ
ಹಿರೇರಾಯಕುಂಪಿ
ಕೂಡ್ಲೂರು
ದೇವಸೂಗೂರು
ಜಾಲಹಳ್ಳಿ
ಚಂದನಕೇರಿ
ವೀರಗೋಟ
ಗುರುಗುಂಟ
ಜಲದುರ್ಗ
ಗಬ್ಬೂರು
ಅರಕೆರ
ಬಿಜಾಪುರ ಜಿಲ್ಲೆ
ನವಿಲೆ
ಹಟ್ಟಿ
ಆನ್ವರಿ
ಸಿರಿವಾರ
ಕಲ್ಮಾಲ
ರಾಯಚೂರು
ಮಟಿಯಾಬಾದ್
ಲಿಂಗಸೂಗೂರು
ಕರಡಿಕಲ್ಲ್
ಕವಿತಾಳ
ಮಲ್ಲಟ
ಬಲ್ಲಟಗಿ
ಕಲ್ಲೂರು
ಬಾಗಲವಾಡ
ಮಾನ್ವಿ
ಕುರುಡಿ
ಸುಂಕೇಶ್ವರ
ಇಡಪನೂರು
ಮುದಗಲ್
ಕನ್ನಾಪಿ
ಮಸ್ಕಿ
ಭೋಗಾವತಿ
ಬಳಗಾನೂರು
ತುಂಗಭದ್ರಾ ನದಿ
ಮಂತ್ರಾಲಯ ರಸ್ತೆ
ಆಂಧ್ರ ಪ್ರದೇಶ
ಮಸ್ಕಿ ಹಳ್ಳ
ದೇವರಗುಡಿ
ಸಿಂಧನೂರು
ಒಳಬಳ್ಳಾರಿ
ಬಳ್ಳಾರಿ ಜಿಲ್ಲೆ
ಕೊಪ್ಪಳ ಜಿಲ್ಲೆ
ಜಾಲಿಹಾಳು
ರೌಡಗುಂದೆ
ಸಾಲಗುಂದೆ
ಬೇವಿನಹಳ್ಳಿ
ಮುಕುಂದಿ


ರಾಯಚೂರು ತಾಲೂಕು

ರಾಯಚೂರು ಜಿಲ್ಲೆ



ಮಾನ್ವಿ ತಾಲೂಕು

ರಾಯಚೂರು ಜಿಲ್ಲೆ



ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಪೀಠಿಕೆ

ಕನ್ನಡ ಭಾಷೆ, ಸಂಸ್ಕೃತಿ ನಾಗರಿಕತೆಯನ್ನು ಹೊತ್ತು ನಿಂತ ಹಲವು ಜಿಲ್ಲೆಗಳಲ್ಲಿ ರಾಯಚೂರು ಜಿಲ್ಲೆಯೂ ಒಂದು. ಪ್ರಾಚೀನ ಕಾಲದಿಂದಲೂ ಎಡೆದೊರೆ ನಾಡು ಯಡೆದೊರೆಯಿರ್ಚಾಸಿರ, ಎಡೆದೊರೆ ೨೦೦೦, ಮಧ್ಯಕಾಲದಲ್ಲಿ ರಾಯಚೂರು ದೋ-ಅಬ್ ಎಂಬುದಾಗಿ ಗುರುತಿಸಲ್ಪಟ್ಟಿತ್ತು. ಅನೇಕ ರಾಜ ಮನೆತನಗಳ ಈ ಪ್ರದೇಶವನ್ನು ಆಳಿದ್ದು ಈಗ ಇಲ್ಲಿ ಇತಿಹಾಸವಾಗಿದೆ.

ಕೃಷ್ಣ ತುಂಗಭದ್ರ ನದಿಗಳು ಈ ಜಿಲ್ಲೆಯ ಮೇರೆಯಾಗಿರುವುದು ಮಾತ್ರವಲ್ಲದೆ ಇಲ್ಲಿನ ಜನರಾಡುವ ಭಾಷೆ, ಜನಜೀವನ ಪ್ರಮುಖ ಪಾತ್ರವಹಿಸುತ್ತದೆ. ಅಂತೆಯೇ ಶಾಸನಗಳ್ಲಲಿ ಕೃಷ್ಣನದಿಯನ್ನು 'ಪೆರ್ದೊರೆ' ಎಂದು ತುಂರ್ಗಾಭದ್ರನದಿಯನ್ನು 'ಕಿರಿದೊರೆ' ಎಂದು ಕರೆದಿವೆ. ಈ ಎರಡು ನದಿಗಳ ಮಧ್ಯ ಇರುವ ಪ್ರದೇಶವನ್ನು ದೋ-ಅಬ್ ಎಂದು ಕರೆಯುತ್ತಾರೆ. 'ದೋ ಆಬ್ ' ಎಂದರೆ ಎರಡು ನದಿಗಳ ಮಧ್ಯ ಇರುವ ಭೂ ಪ್ರದೇಶವನ್ನು ಸೂಚಿಸಲಿಕ್ಕೆ ಈ ಪದವನ್ನು ಬಳಸಲಾಗುತ್ತದೆ.

ಯಾವುದೇ ಒಂದು ಸಮುದಾಯವು ಅಭಿವೃದ್ಧಿ ಹೊಂದಬೇಕಾದರೆ ಆ ಪ್ರದೇಶದ ಭಾಷೆ ಪ್ರಮುಖ ಪಾತ್ರವಹಿಸುತ್ತದೆ. ಭಾಷೆಯ ಮೂಲಕ ಅವರ ಆಶೋತ್ತರಗಳನ್ನು ವ್ಯಕ್ತಪಡಿಸಬಹುದು. ಒಂದು ನಿರ್ದಿಷ್ಟವಾದ ಸಮುದಾಯದಲ್ಲಿ ವಾಸವಾಗಿರುವ ಸಮುದಾಯವು ತನ್ನದೇ ಆದ ಭಾಷೆಯನ್ನು ರೂಢಿಸಿಕೊಂಡಿರುತ್ತದೆ. ಇಲ್ಲಿನ ಭಾಷೆ ಸಮಾಜದಿಂದ ಸಮಾಜಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಇರುವ ಧ್ವನ್ಯಾತ್ಮಕ ಮತ್ತು ಬಳಕೆ ಹಾಗೂ ರಚನಾತ್ಮಕ ಬದಲಾವಣೆಯನ್ನು ಕಾಣುತ್ತೇವೆ.

ಬ್ರಿಟಿಷರು ಭಾರತವನ್ನು ಬಿಟ್ಟು ಹೋದ ಮೇಲೆ ಕನ್ನಡ ಭಾಷೆಯನ್ನು ಮಾತನಾಡುವ ಜನರು ಹಲವು ಆಡಳಿತ ಪ್ರದೇಶಗಳಲ್ಲಿ ಹಂಚಿ ಹೋಗಿದ್ದರು. ಹಳೆಯ ಮೈಸೂರು ಎಂದು ಕರೆಯಲಾಗುತ್ತಿರುವ ಪ್ರದೇಶ ರಾಜರ ಆಳ್ವಿಕೆಗೆ ಮತ್ತು ಬ್ರಿಟೀಷರ ಪರೋಕ್ಷ ಹಿಡಿತಕ್ಕೆ ಸಿಲುಕಿತ್ತು. ಪಾಳೆಗಾರರು ಸಂಸ್ಥಾನಿಕರು ಆಳುತ್ತಿದ್ದ ಚಿಕ್ಕಪುಟ್ಟ ರಾಜ್ಯಗಳು ಇದ್ದವು. ಹೈದ್ರಾಬಾದ್ ನಿಜಾಮರ ಆಡಳಿತಕ್ಕೆ ಗುಲ್ಬರ್ಗಾ, ರಾಯಚೂರು, ಬೀದರ್, ಬಿಜಾಪೂರ ಮುಂತಾದ ಕೆಲವು ಪ್ರದೇಶಗಳು ಸೇರಿದ್ದವು. ಕನ್ನಡ ಮಾತಾಡುವ

ಜನರೆಲ್ಲರನ್ನು ಒಗ್ಗೂಡಿಸಿ ರಾಜ್ಯವನ್ನು ನಿರ್ಮಿಸಬೇಕೆಂಬ ಚಳುವಳಿಯ ಅಪೇಕ್ಷೆಯಂತೆ ನವೆಂಬರ್ ೧೯೫೬ರಲ್ಲಿ 'ಕರ್ನಾಟಕ ರಾಜ್ಯ'ವು ಅಧಿಕೃತ ಮನ್ನಣೆ ಪಡೆಯಿತು.

ಚಾರಿತ್ರಿಕವಾಗಿ ಕನ್ನಡ ಮಾತಾಡುತ್ತಿದ್ದ ಜನರು ಇದ್ದ ಪ್ರದೇಶ ಮತ್ತು ಕನ್ನಡದ ಅರಸರು ಆಳ್ವಿಕೆ ನಡೆಸುತ್ತಿದ್ದ ಭೂ ಪ್ರದೇಶ ಎಂಬ ಘಟಕಗಳು ಸೇರಿಕೊಳ್ಳುತ್ತಿವೆ. ಏಕೀಕರಣದ ತಾತ್ವಿಕತೆಯಲ್ಲಿ ಕನ್ನಡಿಗರ ಒಗ್ಗೂಡುವಿಕೆಯ ಜೊತೆಗೆ ಭೂ ಪ್ರದೇಶದ ಕಲ್ಪನೆಯೂ ಸೇರಿಕೊಂಡಿತ್ತು. ಹಳೆಯ ಕಾವ್ಯಗಳನ್ನು ಚಾರಿತ್ರಿಕ ದಾಖಲೆಗಳನ್ನು ಉಲ್ಲೇಖಿಸಿ ಕನ್ನಡ ನಾಡಿನ ವ್ಯಾಪ್ತಿ ಎಷ್ಟಿತ್ತು ಎಂಬುದನ್ನು ಮೇಲಿಂದ ಮೇಲೆ ಜನರ ಗಮನಕ್ಕೆ ತರುವ ಯತ್ನಗಳು ನಡೆದಿವೆ. ಈ ಭೂ ಪ್ರದೇಶ ಚಾರಿತ್ರಿಕವಾಗಿ ಕನ್ನಡದ ವ್ಯಾಪ್ತಿಯ ಪ್ರದೇಶ ಎಂದು ಹೇಳಿದರೂ ವಾಸ್ತವವಾಗಿ ಕನ್ನಡದ ಅರಸರ ಆಳ್ವಿಕೆಯ ಪ್ರದೇಶಗಳಾಗಿದ್ದವು. ಅಂದರೆ ಕನ್ನಡ ಮತ್ತು ಇತರ ಭಾಷೆಗಳನ್ನಾಡುವ ಜನರು ವಾಸಿಸುತ್ತಿದ್ದರು. ಕನ್ನಡವಷ್ಟೇ ಅಲ್ಲದೆ ಬೇರೆ ಭಾಷಿಕ ಸಮಾಜವನ್ನು ಅವುಗಳು ನೆಲೆಸಿರುವ ನಿರ್ದಿಷ್ಟ ಭೂ ಪ್ರದೇಶವನ್ನು ಊಹಿಸುವುದು ಕಷ್ಟವಾಗಿದೆ.

ಭೌಗೋಳಿಕವಾಗಿ ರೂಪುಗೊಂಡ ಕರ್ನಾಟಕದಲ್ಲಿ ಕನ್ನಡ ಭಾಷೆಯು ಕಳೆದ ಐವತ್ತು ವರ್ಷಗಳಲ್ಲಿ ಏನೆಲ್ಲ ಪರಿವರ್ತನೆಯಾಗಿದೆ ಎಂಬುದನ್ನು ಈಗ ನೋಡಬೇಕಾಗಿದೆ. ಯಾವುದೇ ಭಾಷೆಗೆ ಸಂಬಂಧಿಸಿದಂತೆ ಐವತ್ತು ವರ್ಷಗಳ ಅವಧಿ ತುಂಬಾ ಕಿರಿದಾಗಿದ್ದು ಕನ್ನಡ ನಮಗೆಲ್ಲ ತಿಳಿದಂತೆ ಸರಿಸುಮಾರು ೨೦ ಶತಮಾನಗಳ ಬಳಕೆಯನ್ನು ಕಂಡಿರುವ ಭಾಷೆ. ಈ ಭಾಷೆಯಲ್ಲಿ ನಡೆದಿರುವ ಪರಿವರ್ತನೆಗಳು ಅಪಾರ. ಆದ್ದರಿಂದ ರಾಯಚೂರು ಪರಿಸರದಲ್ಲಿ ಯಾವ ರೀತಿ ಪರಿವರ್ತನೆಗಳು ಆಗಿವೆ ಎಂಬುದನ್ನು ನೋಡಬಹುದಾಗಿದೆ.

ಅಧ್ಯಯನದ ಉದ್ದೇಶ

ಕರ್ನಾಟಕದಲ್ಲಿ ಹೆಚ್ಚು ಹೆಚ್ಚು ಜನರು ಕನ್ನಡ ಭಾಷೆಯನ್ನು ಮಾತಾಡುತ್ತಿದ್ದರೂ ಅವರೆಲ್ಲ ಒಂದೇ ವಿಧದಲ್ಲಿ ಮಾತನಾಡದೇ ಇರುವುದು ಕಾಣುತ್ತೇವೆ. ಪ್ರದೇಶದಿಂದ ಪ್ರದೇಶಕ್ಕೆ ಭಾಷೆ ಆಡು ನುಡಿಯಲ್ಲಿ ಭಿನ್ನವಾಗಿರುವುದನ್ನು ಕಾಣುತ್ತೇವೆ. ಬರಹ ರೂಪದಲ್ಲಿ ಇಂತಹ ವ್ಯತ್ಯಾಸಗಳನ್ನು ಕಾಣದಿದ್ದರೂ ಮಾತಿನ ರೂಪದಲ್ಲಿ ಅದು ಅನೇಕ ಬಗೆಯಲ್ಲಿರುವುದನ್ನು ಗಮನಿಸುತ್ತೇವೆ. ಅಂತೆಯೂ ರಾಯಚೂರಿನ ಪರಿಸರದ ಭಾಷೆಯೂ ಬಳಕೆಯ ದೃಷ್ಟಿಯಿಂದ ವಿಶಿಷ್ಟಪೂರ್ಣವಾಗಿದೆ. ಈ ಪ್ರದೇಶದ ಕನ್ನಡ ಭಾಷೆಯ ಸ್ವರೂಪವನ್ನು ಇಲ್ಲಿನ ಜನರಾಡುವ ಭಾಷೆಯ ಹೊಸ ವಿಚಾರಗಳನ್ನು ಈ ಪ್ರದೇಶದ ಭಾಷೆಯ ಬಳಕೆ ಹಾಗೂ ರಚನೆಯನ್ನು ಮತ್ತು ವಾಕ್ಯರಚನೆಯ ಬಗ್ಗೆ ತಿಳಿಯಬಹುದಾದ ಅನೇಕ ಅಂಶಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಭಾಷೆಯ ವ್ಯತ್ಯಾಸಗಳನ್ನು ಗಮನಿಸುವುದಕ್ಕೆ ಇಲ್ಲಿನ ಭೂ ಪ್ರದೇಶವು ಅತೀ ಮುಖ್ಯವಾಗಿರುತ್ತದೆ. ರಾಯಚೂರು ಕೆಲವು ಪ್ರದೇಶಗಳನ್ನು ಬೆಟ್ಟ ಗುಡ್ಡಗಳು ಸುತ್ತುವರಿದಿವೆ. ಕೃಷ್ಣ ಮತ್ತು ತುಂಗಭದ್ರ ನದಿಗಳು ಎಡ ಬಲಗಳಲ್ಲಿ ಹರಿದಿರುವುದರಿಂದ ಇಲ್ಲಿ ಹೆಚ್ಚು ಹೆಚ್ಚು ನೀರಾವರಿ ಪ್ರದೇಶವನ್ನು ಆವರಿಸಿದೆ. ಈ ಕಾರಣದಿಂದ ರಾಯಚೂರು ಪ್ರದೇಶಕ್ಕೆ ಪಕ್ಕದ ಆಂಧ್ರದ ಗಡಿಭಾಗದವರು ಇಲ್ಲಿ ವಲಸೆ ಬಂದದ್ದು. ಇಲ್ಲಿ ಭಾಷಿಕವಾಗಿ ಕೂಡು ಕೊಳ್ಳುವಿಕೆ ನಡೆದಿದೆ ಇದರಿಂದ ತೆಲುಗು ಭಾಷೆಯ ಪ್ರಭಾವವು ರಾಯಚೂರು ಕನ್ನಡದ ಮೇಲೆ ಆಗಿರುವುದನ್ನು ಗಮನಿಸಬಹುದಾಗಿದೆ. ರಾಯಚೂರು ಪ್ರಾಂತ್ಯವು ನಿಜಾಮರ ಆಡಳಿತಕ್ಕೆ ಒಳಪಟ್ಟಿದ್ದರಿಂದ ಉರ್ದು ಪ್ರಭಾವವು ರಾಯಚೂರು ಕನ್ನಡದ ಮೇಲೆ ಆಗಿರುವುದನ್ನು ಇಲ್ಲಿ ಗಮನಿಸಬಹುದು. ಇವೆರಡು ಭಾಷೆಗಳ ಜೊತೆಗೆ ಆಧುನಿಕತೆ ಪ್ರಭಾವದಿಂದ ತಂತ್ರಜ್ಞಾನದ ಫಲವಾಗಿ ಇಂಗ್ಲೀಶ್ ಕೂಡ ಇಲ್ಲಿನ ಜನರ ಭಾಷೆಯಲ್ಲಿ ಸಮ್ಮಿಳಿತವಾಗಿದೆ. ಇದೆಲ್ಲವುಗಳ ಸಮ್ಮಿಲನದಿಂದ ಇಲ್ಲಿನ ಭಾಷೆಯನ್ನು ಬೇರೆ ಜಿಲ್ಲೆಗಳಿಗೆ ತುಲನಾತ್ಮಕವಾಗಿ ಅಧ್ಯಯನ ಮಾಡಬಹುದಾಗಿದೆ.

ಸಾಮಾನ್ಯವಾಗಿ ಸಾಮಾಜಿಕ ಅಂತರವೂ ಹೆಚ್ಚಾದಂತೆ ಭಾಷೆಯ ಅಂತರವೂ ಹೆಚ್ಚಾಗಿರುವುದು ಕಂಡುಬರುತ್ತದೆ. ಈ ದೃಷ್ಟಿಯಿಂದ ಇಲ್ಲಿ ಸಾಮಾಜಿಕ ಅಂತರವೂ ಭಿನ್ನವಾಗಿರುವುದರಿಂದ ಇಲ್ಲಿನ ಜಾತಿ, ವೃತ್ತಿ, ಲಿಂಗ, ಆಧಾರಿತ ಅನೇಕ ಸಮೂದಾಯಗಳಲ್ಲಿನ ಭಾಷಿಕ ವ್ಯತ್ಯಾಸಗಳನ್ನು ಕಾಣಬಹುದಾಗಿದೆ. ಆದ್ದರಿಂದ ಇಲ್ಲಿನ ಭಾಷೆಯನ್ನು ಸಮಾಜಮುಖಿಯಾಗಿ ಯಾವ ರೀತಿಯಾಗಿ ಬದಲಾವಣೆ ಮತ್ತು ಬಳಕೆಯಾಗುತ್ತದೆ ಎಂಬುದನ್ನು ತಿಳಿಸುವುದು ಮುಖ್ಯ ಉದ್ದೇಶವಾಗಿದೆ.

“ರಾಯಚೂರು ಪರಿಸರದ ಕನ್ನಡ-ತೆಲುಗು ದ್ವಿಭಾಷಿಕತೆ ಹಾಗೂ ಸಮಾಜೋ ಭಾಷಿಕ ಅಧ್ಯಯನ’ ಎಂಬುದು ನನ್ನ ಸಂಪ್ರಬಂಧದ ಮುಖ್ಯ ವಿಷಯವಾಗಿದೆ. ಕನ್ನಡದಲ್ಲಿ ದ್ವಿಭಾಷಿಕ ಅಧ್ಯಯನಗಳಾಗಿರುವುದು ಕಡಿಮೆ ಪ್ರಮಾಣದಲ್ಲಿ ಅದರಲ್ಲೂ ಸಮಾಜೋ ಭಾಷಿಕ ಅಧ್ಯಯನಗಳು ನಡೆದಿರುವುದು ಇನ್ನೂ ಕಡಿಮೆ. ದ್ವಿಭಾಷಿಕತೆಯಲ್ಲಾದ ಅಧ್ಯಯನಗಳು ಹೆಚ್ಚಾಗಿ ವರ್ಣನಾತ್ಮಕ ಮಾದರಿಯಲ್ಲಿ ನಡೆದಿರುವ ಅಧ್ಯಯನಗಳು ಕಂಡುಬಂದಿವೆ. ಈ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಾಯಚೂರು ಪರಿಸರದಲ್ಲಿನ ಕೆಲವು ಸಮಾಜಗಳನ್ನಿಟ್ಟುಕೊಂಡು ಕನ್ನಡದೊಂದಿಗೆ ತೆಲುಗು ಯಾವ ರೀತಿ ಸಂಪರ್ಕವಾಗಿದೆ ಹಾಗೂ ವ್ಯವಹಾರಿಕ ವಲಯದಿಂದ ಕನ್ನಡ-ತೆಲುಗು ಹೇಗಿವೆ ಎಂಬುದನ್ನು ಮತ್ತು ಕೆಲವು ಜಾತಿಗಳನ್ನು ಸಾಮಾಜಿಕ ಸಂಪರ್ಕ ಏಕೆ ಕಡಿಮೆಯಾಗಿದೆ. ಭಾಷಾ ಕೊಡುಕೊಳ್ಳುವಿಕೆಯನ್ನು ಕುರಿತು ಸಮಾಜದ ಸಂಸ್ಕೃತಿಯನ್ನು ಕಟ್ಟಿಕೊಳ್ಳುವಲ್ಲಿ ಎರಡು ಭಾಷೆಗಳು ಹೇಗೆ ಭಿನ್ನವಾಗಿವೆ ಎಂದು ತಿಳಿಯಲು ಪ್ರಸ್ತುತ ಅಧ್ಯಯನ ನಾನು ತೆಗೆದುಕೊಂಡಿದ್ದೇನೆ. ರಾಯಚೂರು ಪ್ರದೇಶವು ಮೊದಲಿನಿಂದಲೂ ಕರ್ನಾಟಕ-ಆಂಧ್ರ ಗಡಿ ಭಾಗದಲ್ಲಿರುವುದರಿಂದ ಇಲ್ಲಿನ ಅನೇಕ ಕುಟುಂಬಗಳು ವಲಸೆ ಬಂದಿರುವುದಕ್ಕೆ ಇಲ್ಲಿ ತೆಲುಗು ಮಾತೃ ಭಾಷಿಕರೇ ಸಾಕ್ಷಿ. ಆಪ್ತ ವಲಯದಲ್ಲಿ

ಭಾಷಾ ಸಂಗೋಪನೆ ಮಾಡಿ ವ್ಯವಹಾರಿಕ ಕ್ಷೇತ್ರಕ್ಕೆ ತೆರಳಿದಾಗ ಕನ್ನಡದೊಂದಿಗೆ ವ್ಯವಹರಿಸುವ ಸಂದರ್ಭಗಳು ಹಾಗೂ ಕನ್ನಡದ ಮೇಲೆ ತೆಲುಗು ಭಾಷೆಯ ಪ್ರಭಾವ ಆಗಿರುವುದು ತಿಳಿಯುತ್ತದೆ. ದ್ವಿಭಾಷಿಕ ಸಮುದಾಯಗಳಲ್ಲಿ ಭಾಷೆಯನ್ನು ಭಿನ್ನ ಆಯಾಮಗಳ ಮೂಲಕ ಅಧ್ಯಯನ ನಡೆಯುವ ಅಗತ್ಯವಿದೆ.

'ರಾಯಚೂರು ಮಾನ್ವಿ ಪರಿಸರದ ತೆಲುಗು-ಕನ್ನಡ ಧ್ವಿಭಾಷಿಕತೆ ಹಾಗೂ ಸಮಾಜೋಭಾಷಿಕ ಅಧ್ಯಯನ' ಈ ಸಂಪ್ರಬಂಧವನ್ನು ಕುರಿತು ಏಳು ಅಧ್ಯಯವನ್ನು ಮಾಡಿಕೊಳ್ಳಲಾಗಿದೆ. ಇವುಗಳ ಸ್ವರೂಪತೆಯ ಆಧಾರ ಮೇಲೆ ಅಧ್ಯಯನ ಮಾಡಲಾಗಿದೆ.

ಒಂದನೇ ಅಧ್ಯಾಯದಲ್ಲಿ ರಾಯಚೂರು ಮಾನ್ವಿ ಪರಿಸರದ ಕನ್ನಡ ಉದ್ದೇಶವನ್ನು ಚರ್ಚಿಸಲಾಗಿದೆ. ಅಧ್ಯಯನದ ವ್ಯಾಪ್ತಿ ಎಷ್ಟು ಎಂಬುದನ್ನು ಈ ಅಧ್ಯಯನದಲ್ಲಿ ತಿಳಿಸಲಾಗಿದೆ.

ಅಧ್ಯಾಯ ಎರಡಲ್ಲಿ ಇಲ್ಲಿಯವರೆಗೆ ನಡೆದ ದ್ವಿಭಾಷಿಕತೆ ಹಾಗೂ ಸಾಮಾಜಿಕ ಭಾಷಾ ಶಾಸ್ತ್ರೀಯವಾಗಿ ನಡೆದ ಅಧ್ಯನಗಳ ಸಮೀಕ್ಷೆಯನ್ನು ಮಾಡಲಾಗಿದೆ. ಇಲ್ಲಿ ಸಂಶೋಧನೆಗಳು ವಿವಿಧ ದೃಷ್ಟಿಕೋನಗಳಲ್ಲಿ ನಡೆದಿರುವ ಅಧ್ಯಯನಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಆಯ್ಕೆ ಮಾಡಿಕೊಂಡ ವಿಷಯದ ಅಂದರೆ ರಾಯಚೂರು ಮಾನ್ವಿ ಪರಿಸರದ ಐತಿಹಾಸಿಕ ಹಿನ್ನೆಲೆಯನ್ನು, ಪ್ರಮುಖವಾಗಿ ಚಾರಿತ್ರಿಕ, ಭೌಗೋಳಿಕ, ರಾಜಕೀಯ ಇತಿಹಾಸವನ್ನು ಉಪ ಅಧ್ಯಾಯಗಳನ್ನಾಗಿ ಮಾಡಿಕೊಂಡು ವಿವರಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ರಾಯಚೂರು ಮಾನ್ವಿ ಪರಿಸರದಲ್ಲಿನ ಕನ್ನಡದ ಭಾಷಿಕ ಸಂರಚನೆಯನ್ನು ಕುರಿತು ಅಂದರೆ ಭಾಷಾ ಬಳಕೆಯ ದೃಷ್ಟಿಯಿಂದ ಮತ್ತು ರಚನೆಯ ದೃಷ್ಠಿ ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ರಾಯಚೂರು ಮಾನ್ವಿ ಪರಿಸರದ ಕನ್ನಡ ತೆಲುಗು ದ್ವಿಭಾಷಿಕತೆಯನ್ನು ಕುರಿತು ಹಾಗೂ ವರ್ಗ, ಜಾತಿ, ಕುಟುಂಬ, ಸಮಾಜ, ಲಿಂಗ, ವಯಸ್ಸನ್ನು ಆಧರಿಸಿ ದ್ವಿಭಾಷಿಕ ಪರಿಸರವು ರೂಪುಗೊಂಡ ಬಗೆ ಮತ್ತು ಭಾಷಿಕ ವ್ಯತ್ಯಾಸಗಳನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಆರರಲ್ಲಿ ಭಾಷಾ ಸಂಪರ್ಕ ಕುರಿತು ಹೇಳಲಾಗಿದೆ. ಪರಸ್ಪರ ಭಿನ್ನವಾಗಿರುವ ಸಾಮಾಜಿಕರಲ್ಲಿ ಮತ್ತು ದ್ವಿಭಾಷಿಕದಂತಹ ಪರಿಸರದಲ್ಲಿ ಭಾಷಿಕ ಸಂಬಂಧ ಹೊಂದಿದ ಬಗೆಯೂ ಭಾಷಾ ಸಂಪರ್ಕ ನಡೆಯುವ ಕ್ರಿಯೆ ಹಾಗೂ ಇದರಿಂದ ಭಾಷಿಕ ಸಂವಹನದ ಸ್ವಭಾವದಿಂದ ಆಗಿರುವಂತ ಪಲ್ಲಟಗಳು ಮತ್ತು ಭಾಷಾ ಸಂಗೋಪನೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಚಾರಿತ್ರಿಕವಾಗಿ ರಾಯಚೂರು ಪರಿಸರದಲ್ಲಿನ ಭಾಷೆಯಲ್ಲಿ ಹಲವು ರಾಜ ಮನೆತನಗಳು ಸವಾರಿ ಮಾಡಿವೆ. ಮುಖ್ಯವಾಗಿ ಬ್ರಿಟಿಷರು, ನಿಜಾಮರು, ಬಹುಮನಿ ಸುಲ್ತಾನರು ಹಾಗೂ ವಿಜಯನಗರದ ಅರಸರು ಮುಂತಾದವರ ಆಡಳಿತದ ಫಲವಾಗಿ ಇಲ್ಲಿ ಅನೇಕ ಭಾಷೆಗಳು ಒತ್ತಾಯ ಪೂರ್ವಕವಾಗಿಯೂ, ಅನಿವಾರ್ಯತೆಯಿಂದಾಗಿಯೂ ತೆಲುಗು, ಉರ್ದು, ಹಿಂದಿ ಮುಂತಾದ ಭಾಷೆಗಳ ಮಧ್ಯ ರಾಯಚೂರಿನಲ್ಲಿ ಕನ್ನಡವು ಯಾವ ರೀತಿ ಸಂಗೋಪನೆಯಾಗುತ್ತಿದೆ ಎಂಬುದನ್ನು ಮತ್ತು ಬೇರೆ ಭಾಷೆಗಳಿಗೆ ಹೋಲಿಸಿದರೆ ರಾಯಚೂರು ಮಾನ್ವಿ ಪರಸರದ ಭಾಷೆ ಹೇಗೆ ಭಿನ್ನವಾಗಿದೆ ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಏಳರಲ್ಲಿ ಅಧ್ಯಯನದ ಫಲಿತಗಳನ್ನು ಹಾಗೂ ಸಮಸ್ಯೆಗಳನ್ನು ಕಾರಣಗಳನ್ನು ಗುರುತಿಸಿ ಒಟ್ಟಾರೆ ಈ ನಿರ್ಬಂಧನೆಯ ಆಶಯವನ್ನು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.

ವ್ಯಾಪ್ತಿ

ರಾಯಚೂರು ಜಿಲ್ಲೆಯ ಭೌಗೋಳಿಕವಾಗಿ ವಿಸ್ತಾರವಾಗಿರುವುದರಿಂದ ಅಧ್ಯಯನ ವ್ಯಾಪ್ತಿಯನ್ನು ರಾಯಚೂರು, ಮಾನ್ವಿ ತಾಲ್ಲೂಕುಗಳಿಗೆ ಸೀಮಿತಗೊಳಿಸಿಕೊಳ್ಳಲಾಗಿದೆ. ಇವು ಆಂಧ್ರದ ಗಡಿ ಭಾಗದಲ್ಲಿರುವುದರಿಂದ ಈ ಎರಡು ತಾಲ್ಲೂಕನ್ನು ಮಾತ್ರ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವು ರಾಯಚೂರು ಪರಿಸರದ ಕನ್ನಡ-ತೆಲುಗು ದ್ವಿಭಾಷಿಕತೆಯನ್ನು ಸಾಮಾಜಿಕ ಭಾಷಾ ಶಾಸ್ತ್ರದ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಂಡಿದೆ.

ಭಾರತದಲ್ಲಿ ಅನೇಕ ಜಾತಿ, ಉಪಜಾತಿ, ಧರ್ಮ, ಸಂಸ್ಕೃತಿ ಆಚಾರ ವಿಚಾರ ಉಡುಗೆ ತೊಡುಗೆ ಎಲ್ಲವೂ ವೈವಿಧ್ಯಮಯವಾಗಿದೆ. ಇವೆಲ್ಲವು ಒಂದು ಭಾಷೆ ಕಲಿಕೆಯ-ಬಳಕೆಯ ಬೆಳವಣಿಗೆಗೆ ಕಾರಣವಾಗಿರುವುದರಿಂದ ಭಾಷಿಕ ಅಧ್ಯಯನಗಳನ್ನು ಕೈಗೊಳ್ಳುವವರಿಗೆ ಇಲ್ಲಿನ ಭಾಷಿಕ ಪರಿಸರದ ಅವಶ್ಯಕತೆ ಇದೆ.

ಕನ್ನಡದಲ್ಲಿ ಸಮಾಜೋಭಾಷಿಕ ನೆಲೆಯಲ್ಲಾದ ಅಧ್ಯಯನಗಳು ಕಡಿಮೆ ಪ್ರಮಾಣದಲ್ಲಿದೆ. ಆದ್ದರಿಂದ ಈ ಅಧ್ಯಯನವನ್ನು ಸಮಾಜೋ ಭಾಷಾ ಶಿಸ್ತಿಗೆ ಅನ್ವಯಿಸಿ ಅಧ್ಯಯನ ಮಾಡುವುದು ಇಲ್ಲಿ ವಿಧಾನವಾಗಿದೆ. ಅಧ್ಯಯನವನ್ನು ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸಿ ಅಲ್ಲಿ ಇರುವಂತ ಸಾಮಾಜಿಕ ಭಾಷಿಕ ಭಿನ್ನಾಂಶಗಳನ್ನು ಬಳಸಿಕೊಂಡು ಕ್ಷೇತ್ರಕಾರ್ಯ ಮಾಡಲಾಗಿದೆ. ಅಂದರೆ ಲಿಂಗ, ವಯಸ್ಸು, ಜಾತಿ, ವರ್ಗ, ಕುಟುಂಬ ಶಿಕ್ಷಣ ಇವುಗಳನ್ನು ಆಧಾರಗಳಾಗಿ ಇಟ್ಟುಕೊಂಡು ಪ್ರಶ್ನಾವಳಿಗಳ ಮೂಲಕ ಸಂದರ್ಶನ ಮಾಡಲಾಗಿದೆ.

ಈ ಅಧ್ಯಯನದಲ್ಲಿ ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯನ್ನು ಇಟ್ಟುಕೊಂಡು ಪ್ರಶ್ನಾವಳಿಗಳಿಗೆ ಉತ್ತರಗಳನ್ನು ಕಂಡುಕೊಳ್ಳಲಾಗಿದೆ. ಪ್ರಶ್ನೆಗಳ ಸ್ವರೂಪ ಒಟ್ಟಾರೆಯಾಗಿ ಹೀಗಿದೆ. ರಾಯಚೂರಿನ ದ್ವಿಭಾಷಿಕ ಸ್ವರೂಪ ಎಂತಹದ್ದು? ಇಲ್ಲಿ ಯಾವ ಕಾರಣಗಳಿಗಾಗಿ ದ್ವಿಭಾಷಿಕತೆ ಉಂಟಾಗಿದೆ? ದ್ವಿಭಾಷಿಕತೆಯ ಪ್ರಮಾಣದಲ್ಲಿ ಲಿಂಗಾಧಾರಿತ ಭಿನ್ನತೆಗಳಿವೆಯೇ? ಜಾತಿಗಳಲ್ಲಿ ಇದು ಭಿನ್ನವಾಗಿದೆಯೇ? ವೃತ್ತಿಗಳ ಸ್ವರೂಪ ಎಂತಹದ್ದು? ಬೇರೆ ದ್ವಿಭಾಷಿಕ ಸಂದರ್ಭಗಳಿಗಿಂತ ರಾಯಚೂರು ದ್ವಿಭಾಷಾ ಸಂದರ್ಭ ಹೇಗೆ ಭಿನ್ನವಾಗಿದೆ? ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಆಗುತ್ತಿರುವ ಬದಲಾವಣೆಗಳಿಂದಾಗಿ ಇಲ್ಲಿನ ದ್ವಿಭಾಷಾ ಪಲ್ಲಟಗಳು ಹೇಗೆ ಆಗುತ್ತಿದೆ? ವಯಸ್ಸಿಗೆ ಅನುಗುಣವಾಗಿ ತಲೆಮಾರುಗಳಲ್ಲಿ ಆಗುತ್ತಿರುವ ಬದಲಾವಣೆಗಳು ಎಂಥಹದ್ದು ಎಂಬ ಮುಂತಾದ ಪ್ರಶ್ನೆಗಳನ್ನಿಟ್ಟುಕೊಂಡು ಚರ್ಚಿಸಲಾಗಿದೆ.

ಅಧ್ಯಯನಕ್ಕೆ ರಾಯಚೂರು ಹಾಗೂ ಮಾನ್ವಿ ತಾಲೂಕುಗಳನ್ನು ಆಯ್ಕೆ ಮಾಡಿಕೊಂಡಿದ್ದು ಭಾಷಾ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಇಲ್ಲಿ ಅನೇಕ ಆವರಣಗಳನ್ನು ಬಳಸಲಾಗಿದೆ. ಹಾಗೂ ಮಾಹಿತಿಗಳನ್ನು ಕೋಷ್ಟಕಗಳನ್ನು ರಚಿಸಿಕೊಳ್ಳಲಾಗಿದೆ. ದ್ವಿಭಾಷಿಕರಿಂದ ದೊರೆತ ಮಾಹಿತಿಯ ಅಂಕಿ ಅಂಶಗಳು, ಸಮಾಜೋ ಭಾಷಿಕ ಭಿನ್ನಾಂಶಗಳು ಜೊತೆಗೆ ಪ್ರಸ್ತುತ ವಿದ್ಯಮಾನಗಳಿಂದ ರಾಯಚೂರು ದ್ವಿಭಾಷಾ ಪರಿಸರದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ ಹಾಗೂ ಭಾಷಾ ತಜ್ಞರಿಂದ ಹಾಗೂ ಮಾರ್ಗದರ್ಶಕರಿಂದ ಚರ್ಚಿಸಿ ಅವರು ನೀಡಿದ ಚೌಕಟ್ಟುಗಳನ್ನು ಹಾಗೂ ಅಧ್ಯಯನಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಚರ್ಚಿಸಲಾಗಿದೆ.

ಅಡಿಟಿಪ್ಪಣಿ

೧. ಕೆ.ವಿ.ನಾರಾಯಣ, ೨೦೦೬, ಕನ್ನಡ ಜಗತ್ತು ಅರ್ಧಶತಮಾನ, ಪು.೨

೨. ಮೃತ್ಯುಂಜಯ ಹೊರಕೇರೆ(ಸಂ), ೨೦೦೫, ರಾಯಚೂರು ಜಿಲ್ಲಾದರ್ಶನ, ಪ್ರ.ಸಂ.೧, ೨

ಅಧ್ಯಾಯ ೨

ಅಧ್ಯಯನದ ಸಮೀಕ್ಷೆ

೨

ಅಧ್ಯಯನದ ಸಮೀಕ್ಷೆ

ಭಾರತ ಮತ್ತು ಕರ್ನಾಟಕ ಸಂದರ್ಭದಲ್ಲಿ ದ್ವಿಭಾಷಿಕ ಅಧ್ಯಯನಗಳು ನಡೆದಿದ್ದು ತೀರಾ ಕಡಿಮೆ ಕರ್ನಾಟಕವು ಬಹುಮುಖ ಸಂಸ್ಕೃತಿಯನ್ನು ಹೊಂದಿದ್ದು, ಅದರಲ್ಲಿ ಬಹುಭಾಷಾ ಪರಿಸರವಿರುವ ಸಂದರ್ಭದಲ್ಲಿ ಕನ್ನಡದಲ್ಲಿ ದ್ವಿಭಾಷಿಕತೆ ಕುರಿತು ಅಧ್ಯಯನಗಳು ತೀರ ಕಡಿಮೆ ಆದ್ದರಿಂದ ರಾಯಚೂರು ಪರಿಸರದ ಕನ್ನಡ ತೆಲುಗು ದ್ವಿಭಾಷಿಕತೆ ಅಧ್ಯಯನವನ್ನು ಕೈಗೊಂಡಿದ್ದೇನೆ.

ಪ್ರಸ್ತುತ ಅಧ್ಯಯನದಲ್ಲಿ ಕನ್ನಡದ ಹಾಗೂ ಇತರೆ ಭಾಷೆಗಳೊಂದಿಗೆ ಇದುವರೆಗೆ ನಡೆದ ಅಧ್ಯಯನಗಳು ನನ್ನ ಅಧ್ಯಯನಕ್ಕೆ ಪೂರಕವಾಗಿವೆ. ಹಾಗೂ ನನ್ನ ಅಧ್ಯಯನವು ಯಾವ ರೀತಿ ಭಿನ್ನವಾಗಿ ಕೈಗೊಳ್ಳಬಹುದು ಎನ್ನುವುದಕ್ಕಾಗಿ ಅಧ್ಯಯನದ ಸಮೀಕ್ಷೆಯನ್ನು ಮಾಡಿದ್ದೇನೆ.

ಕನ್ನಡ-ತೆಲುಗು, ಕನ್ನಡ-ಮರಾಠಿ, ಕನ್ನಡ-ಹಿಂದಿ, ಕನ್ನಡ-ಉರ್ದು, ಕನ್ನಡ-ತಮಿಳು, ಕನ್ನಡ-ಮಲೆಯಾಳಂ ಹೀಗೆ ಕನ್ನಡದೊಂದಿಗೆ ಬೇರೆ ಭಾಷೆಗಳ ನಡುವಿನ ಭಾಷಿಕ ವ್ಯತ್ಯಾಸಗಳ ದ್ವಿಭಾಷಿಕ ಬಳಕೆ, ರಚನೆ, ಪ್ರಯೋಗದ ದೃಷ್ಟಿಕೋನದಲ್ಲಿ ಅಧ್ಯಯನಗಳಲ್ಲಿ ನಡೆದಿರುವುದು ಈ ಸಮೀಕ್ಷೆಯ ಸಂದರ್ಭದಲ್ಲಿ ಹೆಚ್ಚು ಕಂಡುಬಂದಿದೆ. ಅದಕ್ಕಾಗಿ ನನ್ನ ಅಧ್ಯಯನವು ಇವುಗಳಿಗೆ ಹೊರತುಪಡಿಸಿ ಯಾವ ರೀತಿ ಮುಂದೆ ಕೈಗೊಳ್ಳಬಹುದು ಎಂಬುದನ್ನು ತೋರಿಸಿಕೊಟ್ಟಿವೆ. ಆದ್ದರಿಂದ ಸಮೀಕ್ಷೆಯು ಅಧ್ಯಯನಕ್ಕೆ ಅತ್ಯಂತ ಮುಖ್ಯವಾದುದು.

ವ್ಯಕ್ತಿಯು ಸಮಾಜದೊಂದಿಗೆ ಬಾಳಲು ಮುಖ್ಯವಾಗಿ ಭಾಷೆಯು ಜೀವಂತ ಸಂವಹನ ಕ್ರಿಯೆಯ ಮೂಲಕ ಅಭಿವ್ಯಕ್ತಿಪಡಿಸುವ ಮಾಧ್ಯಮವಾಗಿದೆ. ಭಾಷೆಯು ಸಮಾಜದಲ್ಲಿ ಸಂದರ್ಭಕ್ಕೆ ತಕ್ಕಂತೆ ಭಾಷಿಕರು ಭಾಷೆಯನ್ನು ಬಳಸುತ್ತಾರೆ. ಯಾವುದೇ ಒಂದು ಭಾಷಾ ಸಮುದಾಯದಲ್ಲಿ ಭಾಷಾ ಕಲಿಕೆ ಮತ್ತು ಬಳಕೆಯ ಪ್ರಕ್ರಿಯೆಗಳನ್ನು ಅರ್ಥಮಾಡಿಕೊಳ್ಳಲು ಸಮಾಜೋಭಾಷಿಕ ಅಂಶಗಳ ಪರಿಜ್ಞಾನದ ಅವಶ್ಯವಿದೆ.

ಒಂದು ಸಮುದಾಯದಲ್ಲಿ ಬಳಸುವ ಭಾಷೆ ಸಂಕೀರ್ಣವಾದದ್ದು. ಅದು ಹಲವಾರು ವೈವಿಧ್ಯತೆಗಳಿಂದ ಕೂಡಿರುತ್ತದೆ. ಸಮುದಾಯದಲ್ಲಿ ಬೇಕಾದಷ್ಟು ಮಾತಿನ ಶೈಲಿಗಳಿರುತ್ತವೆ. ಅವು ಒಂದೇ

ಸಮಾನಾಗಿರುವುದಿಲ್ಲ. ವ್ಯಕ್ತಿಯಲ್ಲಿಯೂ ಕೂಡ ಭಾಷಾ ಬಳಕೆ ಸಮನಾಗಿರುವುದಿಲ್ಲ. ಭಾಷಾ ವ್ಯವಹಾರ ಒಂದಕ್ಕೊಂದು ಸಂಬಂಧವಿರುವ ಒಂದು ಮಾನಸಿಕ ಕ್ರಿಯೆ. ಸಾಮಾಜಿಕ ಅಂಶಗಳು ದಿನ ನಿತ್ಯದ ಭಾಷಾ ಬಳಕೆಯನ್ನು ನಿಯಂತ್ರಿಸುತ್ತಿರುತ್ತವೆ. ಸಾಮಾಜಿಕ ಗುಂಪು ಭಾಷೆಯನ್ನು ಪಡೆಯುವ ಕ್ರಿಯೆ ಜೀವನ ಪೂರ್ತಿ ನಡೆಯುತ್ತಿರುತ್ತದೆ. ಭಾಷೇತರ ಉಪಕರಣಗಳು ಭಾಷೆಯ ಜೊತೆಗೆ ಸಮ್ಮಿಲಿತವಾಗಿ ಭಾಷಾ ಪ್ರಕ್ರಿಯೆ ನಡೆಯುತ್ತಿರುತ್ತವೆ. ಆದ್ದರಿಂದ ಸಮಾಜಕ್ಕೂ ಭಾಷೆಗೂ ಇರುವ ಎಲ್ಲಾ ತೆರನಾದ ಸಂಬಂಧಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಭಾಷಾ ಶಾಸ್ತ್ರದ ಅನ್ವಯಿಕ ಶಾಖೆಯಾಗಿ ಸಾಮಾಜಿಕ ಭಾಷಾ ಶಾಸ್ತ್ರ ಬೆಳಕಿಗೆ ಬಂದಿದೆ.

"ಭಾಷಾ ವಿಜ್ಞಾನವು ಒಂದು ಶಾಖೆ ಭಾಷೆಯಲ್ಲಿ ಹುದುಗಿರುವ ಸಾಮಾಜಿಕ ಅಂಶಗಳ ವಿವರಗಳನ್ನು ಒದಗಿಸುತ್ತದೆಯೋ ಅದೇ ಸಾಮಾಜಿಕ ಭಾಷಾ ಶಾಸ್ತ್ರ" ಎಂದು ಹಾ.ಮಾ.ನಾಯಕರು ಅಭಿಪ್ರಾಯಪಟ್ಟಿದ್ದಾರೆ. ಇಂತಹ ಸಾಮಾಜಿಕ ವಿವರಗಳನ್ನೊಳಗೊಂಡ ಭಾಷಿಕ ಅಧ್ಯಯನವನ್ನು ಮೊದಲು ಪ್ರಾರಂಭವಾದದ್ದು ಪಾಶ್ಚ್ಯಾತ್ಯ ದೇಶಗಳಲ್ಲಿ ಅಮೇರಿಕಾ(ನ್ಯೂಯಾರ್ಕ), ಫ್ರಾನ್ಸ್, ಜಪಾನ್, ರಷ್ಯಾ, ಇಂಗ್ಲೆಂಡ್ ನಂತಹ ದೇಶಗಳಲ್ಲಿ ಟ್ರಡ್ಗಿಲ್, ರೈನ್ ಮತ್ತು ಗಿಲ್ಸ, ವಿಲಿಯಂ ಬ್ರೈಟ್ ಫ್ರಾಂಕ್ಲಿಂಗ್ ಸೌತವತ್, ಹೆಡ್ಸನ್, ಸಸೂರು ಮುಂತಾದ ಭಾಷಾ ತಜ್ಞರು ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದ್ದಾರೆ.

ಭಾರತದಲ್ಲಿ ಸಾಮಾಜಿಕ ಭಾಷಾಶಾಸ್ತ್ರದ ನೆಲೆಯಲ್ಲಿ ದ್ರಾವಿಡ ಭಾಷೆಗಳಿಗೆ ಸಂಬಂಧಿಸಿದಂತೆ ತಮಿಳುನಾಡು ವಿಶ್ವವಿದ್ಯಾಲಯದ ಭಾಷಾ ಶಾಸ್ತ್ರದ ವಿಭಾಗಗಳು, ಕೇರಳ ವಿಶ್ವವಿದ್ಯಾಲಯದ ಭಾಷಾಶಾಸ್ತ್ರ ವಿಭಾಗಗಳು, ಆಂಧ್ರಪ್ರದೇಶ ವಿಶ್ವವಿದ್ಯಾಲಯದ ಭಾಷಾಶಾಸ್ತ್ರದ ವಿಭಾಗಗಳು ಕರ್ನಾಟಕ ವಿಶ್ವವಿದ್ಯಾಲಯ, ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯ ಅಡಿಯಲ್ಲಿ ನಡೆದಿರುವ ಅಧ್ಯಯನಗಳು. ಮರಾಠಿ ಉರ್ದು ಮತ್ತು ಕನ್ನಡಕ್ಕೆ ಸಂಬಂಧಿಸಿದಂತೆ ಪುಣೆಯ ಡೆಕ್ಕನ್ ಕಾಲೇಜು ಮಾಡಿರುವ ಕೆಲವು ಅಧ್ಯಯನಗಳನ್ನು ಹೆಸರಿಸಬಹುದಾಗಿದೆ. ಈ ನಿಟ್ಟಿನಲ್ಲಿ ಗುಂಪರ್ಜ್, ವಿಲ್‌ಸನ್ ಮೆಕ್ ಕೊರ್ಮಾಕ್, ಬ್ರೈಟ್, ರಾಮಾನುಜನ್, ಡಿ.ಎನ್. ಶಂಕರಭಟ್ಟ, ಎಂ.ಎಲ್.ಅಪ್ಟೆ, ಪಿ.ಬಿ.ಪಂಡಿತ್ ಎಂ.ಎಸ್ .ಪಿಳ್ಳೈ ಯು.ಪಿ.ಉಪಾಧ್ಯಾಯ ಮುಂತಾದವರು ಸಾಮಾಜಿಕ ಭಾಷಾಶಾಸ್ತ್ರವನ್ನು ಪ್ರಾರಂಭಿಕ ಅಧ್ಯಯನಗಳನ್ನು ಮಾಡಿ ಮುಂದಿನ ಸಾಮಾಜಿಕ ಭಾಷಾ ಶಾಸ್ತ್ರದ ಅಧ್ಯಯನಗಳಿಗೆ ದಾರಿ ತೋರಿದ್ದಾರೆ.

ಭಾರತದಲ್ಲಿ ಸಾಮಾಜಿಕ ಭಾಷಾಶಾಸ್ತ್ರದ ಅಧ್ಯಯನಕ್ಕೆ ವಿಪುಲವಾದ ಸಾಮಗ್ರಿಗಳನ್ನು ಒಳಗೊಂಡಿದ್ದರೂ ಸಹ ಸಮಾಜೋಭಾಷಿಕ ಅಧ್ಯಯನ ವಿಪುಲವಾಗಿ ಬೆಳೆದಲ್ಲಿ ಇದಕ್ಕೆ ಹಲವು ಕಾರಣಗಳಿರಬಹುದು. ಸಮಾಜದಲ್ಲಿ ಭಾಷೆಯ ಬಳಕೆಯ ಕುರಿತಂತೆ ಮಾಡುವ ಅಧ್ಯಯನವು ಸಾಮಾಜಿಕ ಭಾಷಾಶಾಸ್ತ್ರಕ್ಕೆ ಸಂಬಂಧಿಸಿದ್ದಾಗಿದೆ. ಆದರೆ ಭಾರತದಲ್ಲಿ ಬಹುಪಾಲು ವರ್ಣಾನಾತ್ಮಕ ನೆಲೆಯಲ್ಲಿಯೇ

ಆಗಿವೆ. ವರ್ಣನಾತ್ಮಕ ನೆಲೆಯಲ್ಲಿ ಆಗಿರುವಷ್ಟು ಸಾಮಾಜಿಕ ಭಾಷಾಶಾಸ್ತ್ರದ ನೆಲೆಯಲ್ಲಿ ನಡೆದಿಲ್ಲ ಎಂದು ಹೇಳಬಹುದು.

'ಭಾರತದಲ್ಲಿರುವ ಸಮಾಜೋಭಾಷಿಕ ಅಧ್ಯಯನ ತಮ್ಮ ಗುರುತಿನ ಹುಡುಕಾದಲ್ಲಿದೆ. ಅಧ್ಯಯನ ಮಾದರಿಗಳನ್ನು ಸಿದ್ಧಾಂತಗಳನ್ನು ಇಲ್ಲಿನ ಅಧ್ಯಯನಗಳು ರೂಪಿಸಿಕೊಂಡಿಲ್ಲ. ಇದಕ್ಕೆ ಕಾರಣಗಳೇನಿರಬಹುದೆಂಬ ಪ್ರಶ್ನೆಗೆ ಊಹೆಗಳನ್ನು ಮಾಡಿಕೊಂಡು ಲಕ್ಷಣಗಳನ್ನು ಗುರುತಿಸಿದ್ದಾರೆ. ನಿರ್ದಿಷ್ಟವಾದ ವಿಶೇಷವಾದ ಅಧ್ಯಯನಗಳು ಇಡೀ ಪ್ರಕ್ರಿಯೆಯ ಒಟ್ಟು ರೂಪವನ್ನು ಕಡೆಗಣಿಸಿದೆ. ಸಮಾಜೋಭಾಷಿಕ ಸಿದ್ದಾಂತಗಳನ್ನು ಮತ್ತು ವಿಧಿ ವಿಧಾನಗಳನ್ನು ತಿಳಿದಿರಬೇಕು. ಬೇರೆ ದೇಶದಲ್ಲೂ ಈ ಸಮಸ್ಯೆ ಇದೆ. ಆದರೆ ಇಲ್ಲಿ ಯಾವುದೇ ಅಂಕಿ-ಅಂಶಗಳನ್ನು ಸಂಗ್ರಹಿಸದೆ ಸಾಧರಣಗೊಳಿಸುವುದು ಅಧ್ಯಯನ ಚೌಕಟ್ಟಿಲ್ಲದೆ ಸ್ಫೂರ್ತಿಗೊಳಗಾಗಿ ಸಾಮಾನ್ಯಗೊಳಿಸುವುದು ಸ್ಥಿತಿಯ ಸ್ವರೂಪ ಬಾಹುಳ್ಯತೆ, ಸಂಕೀರ್ಣ, ಸ್ವರೂಪಗಳನ್ನು ಅರಿತಿಲ್ಲದಿರುವುದು ವೈವಿಧ್ಯತೆಗಳ ಪ್ರತಿರೂಪ. ಅವುಗಳ ಜೊತೆಗೆ ಇರುವಂತಹದ್ದು ಸಮಾಜೋಭಾಷಿಕ ಪರಿಕಲ್ಪನೆಗಳನ್ನು ಇರುವುದು" ಎಂಬ ವಿಚಾರಗಳನ್ನು ಮೆಹರೋತ್ರ (೧೯೯೮)ರವರು ಚರ್ಚಿಸಿದ್ದಾರೆ.

ಇಂದು ಸಾಮಾಜಿಕ ಭಾಷಾಶಾಸ್ತ್ರ ಆನ್ವಯಿಕ ಭಾಷಾಶಾಸ್ತ್ರದ ಒಂದು ಪ್ರಮುಖ ಅಂಗವಾಗಿ ರೂಪುಗೊಂಡಿದೆ. ಭಾಷೆಯನ್ನು ಆಧುನೀಕರಣ ಸೌಲಭ್ಯಗಳಿಗೆ ಅಳವಡಿಸಿಕೊಳ್ಳಲು ಯತ್ನಿಸಿದಂತೆಲ್ಲ ಭಾಷಾ ಶಾಸ್ತ್ರಜ್ಞರಿಗೆ ಫಲಾಫಲ ನಿರ್ಧಾರಕ್ಕೆ ಸಾಮಾಜಿಕ ಭಾಷಾಶಾಸ್ತ್ರ ಅನಿವಾರ್ಯವಾಗಿದೆ. ಯಾವುದೇ ರಾಷ್ಟ್ರದ ಭಾಷಿಕ ಸಮಸ್ಯೆಗಳ ಹಿನ್ನೆಲೆಯಲ್ಲಿ ಸಾಮಾಜಿಕ ಭಾಷಾಶಾಸ್ತ್ರದ ಪಾತ್ರ ಅತ್ಯಂತ ಮಹತ್ವದ್ದು, ಭಾಷೆಯನ್ನು ಆಧುನೀಕ ದೃಷ್ಟಿಕೋನಗಳಿಗೆ, ಸವಲತ್ತುಗಳಿಗೆ ತಕ್ಕಂತೆ ಬೆಳೆಸುವುದು, ಅಳವಡಿಸುವುದು, ಆಧುನೀಕರಣಗೊಳಿಸುವುದು ಮೊದಲಾದ ಉದ್ದೇಶಗಳನ್ನು ಸಾಮಾಜಿಕ ಭಾಷಾಶಾಸ್ತ್ರ ಇಟ್ಟುಕೊಂಡಿದೆ. ಬಹುಭಾಷಿಕ ರಾಷ್ಟ್ರಗಳಲ್ಲಿ ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತರ ಭಾಷಿಕ ಸಮಸ್ಯೆಗಳನ್ನು ಪರಿಶೀಲಿಸುವಲ್ಲಿ ಶಿಕ್ಷಣ, ಆಡಳಿತಕ್ಕೆ ಅನುಗುಣವಾಗಿ ಅಧಿಕೃತ ಭಾಷೆಯೊಂದನ್ನು, ನಿಯೋಜಿಸುವುದರಲ್ಲಿ ಇದರ ಪಾತ್ರ ಮಹತ್ತರವಾದದ್ದು. ಜೊತೆಗೆ ಭಾಷೆಯ ಶಿಷ್ಟೀಕರಣ, ಲಿಪಿ ಸುಧಾರಣೆ, ಭಾಷಿಕ ಯೋಜನೆ ಇತ್ಯಾದಿ ಸಂದರ್ಭಗಳಲ್ಲಿ ಸಾಮಾಜಿಕ ಭಾಷಾ ಶಾಸ್ತ್ರದ ಅಗತ್ಯವಿದೆ ಎಂದು ಸೋಮಶೇಖರಗೌಡರು ಅಭಿಪ್ರಾಯಪಡುತ್ತಾರೆ.

ಸಾಮಾಜಿಕ ಭಿನ್ನಾಂಶಗಳು

ಪ್ರತಿಯೊಂದು ಭಾಷಿಕ ಸಮುದಾಯವು ಭಾಷೆಯನ್ನು ಬಳಸುವಾಗ ಹಲವು ವ್ಯತ್ಯಾಸಗಳನ್ನು ಕಾಣುತ್ತದೆ. ಈ ವ್ಯತ್ಯಾಸಗಳು ವ್ಯಕ್ತಿಯಿಂದ ವ್ಯಕ್ತಿಗೆ ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿರುತ್ತವೆ.

[illegible]

ಈ ಭಿನ್ನತೆಗಳನ್ನು ಗುರುತಿಸಲು ಬಳಸುವ ಅಂಶಗಳೇ ಸಾಮಾಜಿಕ ಭಿನ್ನಾಂಶಗಳೆಂದು ಕರೆಯಲಾಗಿದೆ. ಸಾಮಾಜಿಕ ಭಾಷಾಶಾಸ್ತ್ರದಲ್ಲಿ ಈ ಸಾಮಾಜಿಕ ಭಿನ್ನಾಂಶಗಳು ಮುಖ್ಯವಾಗುತ್ತವೆ. ವಿಲಿಯಂ ಲೆಬೋವ್ ಅವರು ಸಾಮಾಜಿಕ ಭಿನ್ನಾಂಶ ಎಂಬ ಪರಿಕಲ್ಪನೆಯನ್ನು ಹುಟ್ಟು ಹಾಕಿ, ಅಮೇರಿಕಾದ ಪೆಟೋರಿಕನ್ಸ್ ಅಧ್ಯಯನದಲ್ಲಿ ಸಾಮಾಜಿಕ ಭಿನ್ನಾಂಶದಿಂದಾಗಿ ಭಾಷೆ ಬಳಕೆಯಲ್ಲಿ ಉಂಟಾಗುವ ಹಲವು ಅಂಶಗಳನ್ನು ದಾಖಲಿಸಿದ್ದಾರೆ. ಪಶ್ಚಿಮದಲ್ಲಿ ನಡೆದ ಅನೇಕ ಭಾಷಾಧ್ಯಯನಗಳಲ್ಲಿ ಹಲವು ಬಗೆಯ ಸಾಮಾಜಿಕ ಭಿನ್ನಾಂಶಗಳು ಹೇಗೆ ಸಾಮಾಜಿಕ ಭಾಷಿಕ ವ್ಯತ್ಯಾಸಕ್ಕೆ ಕಾರಣವಾಗುತ್ತವೆ. ಭಾಷೆಯ ಬಳಕೆಯು ನೆಲೆಗಳ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತವೆ ಎನ್ನುವ ಹಲವು ವಿಚಾರಗಳನ್ನು ಭಾಷಾಧ್ಯಾಯನಗಳಲ್ಲಿ ತಿಳಿದುಕೊಳ್ಳಲಾಗಿದೆ.

ಭಾರತದಲ್ಲಿ ನಡೆದಿರುವ ಬಹುಪಾಲು ಭಾಷಾಧ್ಯಯನಗಳಲ್ಲಿ ಮುಖ್ಯವಾದ ಅಧ್ಯಯನಗಳೆಲ್ಲ ಜಾತಿಯನ್ನು ಸಾಮಾಜಿಕ ಭಿನ್ನಾಂಶವಾಗಿ ನೋಡಲಾಗಿದೆ. ಇನ್ನೂ ಕೆಲವು ಅಧ್ಯಯನಗಳಲ್ಲಿ ಲಿಂಗ, ವಯಸ್ಸು, ಶಿಕ್ಷಣವನ್ನು ಒಂದೊಂದೇ ಭಿನ್ನಾಂಶವನ್ನು ಸಾಮಾಜಿಕ ಭಿನ್ನಾಂಶವಾಗಿಟ್ಟುಕೊಂಡು ಅಧ್ಯಯನ ಮಾಡಿದ್ದಾರೆ. ಇವುಗಳ ಜೊತೆಗೆ ನಗರ, ಗ್ರಾಮೀಣ, ವರ್ಗ ಅವಿಭಕ್ತ ಅಣುಕುಟುಂಬಗಳೆಂಬ ಇನ್ನು ಕೆಲವು ಸಾಮಾಜಿಕ ಭಿನ್ನಾಂಶಗಳನ್ನು ತೆಗೆದುಕೊಂಡು ಅಧ್ಯಯನ ಮಾಡಿದರೆ ಹೆಚ್ಚಿನ ಸಂಗತಿಗಳನ್ನು ಭಾಷೆಯ ಕಲಿಕೆ ಬಳಕೆಯ ನೆಲೆಗಳಲ್ಲಿ ತಿಳಿಯಬಹುದಾಗಿದೆ. ಅಲ್ಲದೇ ಭಾಷಾಧ್ಯಯನದ ಮೂಲಕ ಸಮಾಜದ ಸಂರಚನೆ, ಲಕ್ಷಣ, ಸ್ವರೂಪವನ್ನು ತಿಳಿಯಬಹುದಾಗಿದೆ.

ಸಮಾಜೋ ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ನಡೆದ ಕನ್ನಡದ ಅಧ್ಯಯನಗಳ ಸಮೀಕ್ಷೆ

ಕನ್ನಡದ ಸಂದರ್ಭಗಳಲ್ಲಿ ಸಮಾಜೋಭಾಷಿಕ ಅಧ್ಯಯನಗಳು ಕಡಿಮೆ ಪ್ರಮಾಣದಲ್ಲಿ ಆಗಿವೆ. ೧೯೫೦ ದಶಕಗಳಿಂದ ಇಚೆಗೆ ವ್ಯವಸ್ಥಿತವಾಗಿ ಸಾಮಾಜಿಕ ಭಾಷಾಶಾಸ್ತ್ರದ ಅಧ್ಯಯನಗಳು ಪ್ರಾರಂಭವಾದವು. ಹೆಚ್ಚಿನ ಅಧ್ಯಯನಗಳು ವರ್ಣನಾತ್ಮಕ ನೆಲೆಯಲ್ಲಿಯೇ ಆಗಿವೆ. ಕನ್ನಡದಲ್ಲಿ ಸಮಾಜೋ ಭಾಷಿಕ ಅಧ್ಯಯನವು ಪ್ರಮುಖವಾಗಿ ಪ್ರಾರಂಭವಾಗಿದ್ದು, ಟಿ.ಎಸ್.ಸತ್ಯನಾಥರವರು (೧೯೮೨) "ದೇಹಲಿ ಕನ್ನಡಿಗರು ಒಂದು ಸಮಾಜೋಭಾಷಿಕ ಅಧ್ಯಯನ" ಪ್ರಾರಂಭವಾಯಿತು. ಇದು ದೆಹಲಿಯಲ್ಲಿರುವ ಕನ್ನಡಿಗರ ಮನೆ ಮತ್ತು ಒಳ ಗುಂಪುಗಳಲ್ಲಿ ಕನ್ನಡವನ್ನು, ಸಾಂಸ್ಥಿಕವಲ್ಲದ ಆವರಣಗಳಲ್ಲಿ ಹಿಂದಿಯನ್ನು ಸಂಸ್ಥೆಗಳಲ್ಲಿ ಇಂಗ್ಲೀಷನ್ನು ಬಳಸಿದ್ದು, ಹೊಸ ತಲೆಮಾರಿನಲ್ಲಿ ಕನ್ನಡ ಬಳಸುವ ಮನೆ ಆವರಣದಲ್ಲಿಯೂ ಇಂಗ್ಲೀಶ್ ಭಾಷೆ ಬಳಕೆಯಾಗಲು ಪ್ರಾರಂಭಿಸಿದೆಯಾದ್ದರಿಂದ ದೆಹಲಿಯಲ್ಲಿನ ಕನ್ನಡಿಗರಲ್ಲಾಗುತ್ತಿರುವ ಭಾಷಾ ಪಲ್ಲಟವನ್ನು ಸತ್ಯನಾಥರವರ ಅಧ್ಯಯನ ತಿಳಿಸುತ್ತದೆ.

ಮಾಕರ್‌ಮಾಕ್(೧೯೬೦-೬೮) ಅವರು ಧಾರವಾಡ ಕನ್ನಡದ ಬಗೆಗಿನ ಅಧ್ಯಯನದಲ್ಲಿ ಬ್ರಾಹ್ಮಣ, ಬ್ರಾಹ್ಮಣೇತರ ಹರಿಜನರಲ್ಲಿ ಭಾಷಿಕ ಭಿನ್ನತೆಗಳನ್ನು ಗುರುತಿಸಿದ್ದಾರೆ. ಡಿ.ಎನ್ .ಶಂಕರಭಟ್ಟರು ಪ್ರಭೇದ

ಪ್ರತಿನಿಧಿಸುವ ನಿಯಮಗಳ ಮೇಲೆ ಮೈಸೂರು ಜಿಲ್ಲೆಯ ಜಾತಿ ಪ್ರಭೇದಗಳ ಬಗೆಗಿನ ಅಧ್ಯಯನದಲ್ಲಿ ಬ್ರಾಹ್ಮಣ ಅಸ್ಪೃಶ್ಯ ಮತ್ತು ಇತರ ಜಾತಿಗಳ ಭೌಗೋಳಿಕ ಪ್ರಬೇದಗಳನ್ನು ಬೇಧಿಸುತ್ತದೆ ಎಂದು ಅಧ್ಯಯನ ಮಾಡಿದ್ದಾರೆ. ರಾಮಾನುಜಂ (೧೯೬೮) ಅವರು ಮೈಸೂರು ನಗರದ ಕನ್ನಡದ ಬಗೆಗಿನ ಅಧ್ಯಯನದಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರ ಪ್ರಭೇದಗಳು ಚಾರಿತ್ರಿಕವಾಗಿ ಹೇಗೆ ಬದಲಾಗಿವೆ ಎನ್ನುವುದನ್ನು ಹೇಳಿದ್ದಾರೆ. ಮಂಗೇಶ, ವ್ಹಿ.ನಾಡಕರ್ಣಿ(೧೯೭೫) ಅವರು ಸಂಶೋಧನಾ ಲೇಖನದಲ್ಲಿ ಕೊಂಕಣಿ ಕನ್ನಡ ಭಾಷೆಯ ದ್ವಿಭಾಷಿಕ ಪರಿಣಾಮಗಳಲ್ಲಿ ವ್ಯಾಕರಣ ಹಂತಗಳಲ್ಲಿ ಆಗಿರುವ ಬದಲಾವಣೆಯನ್ನು ಮುಂದಿಟ್ಟಿದ್ದಾರೆ. ಎಂ.ಚಿದಾನಂದ ಮೂರ್ತಿಯವರು 'ವಾಗರ್ಥ'(೧೯೮೧) ಮುಖ್ಯವಾಗಿ ಸಾಮಾಜಿಕ ಭಾಷಾ ವಿಜ್ಞಾನದ ನೆಲೆಯಲ್ಲಿನ ಅಧ್ಯಯನವಾಗಿದೆ. ಎಸ್.ಎನ್.ಶ್ರೀಧರ್ (೧೯೯೫) ಕನ್ನಡದ ಮಾಹಿತಿಯನ್ನು ಬಳಸಿ, ಇಂಗ್ಲೀಶ್‌ನಲ್ಲಿ ಬರೆದಿರುವ ಲೇಖನಗಳನ್ನು ಕನ್ನಡಕ್ಕೆ ಅನುವಾದ ಮಾಡಿ "ಇಂದಿನ ಕನ್ನಡ ರಚನೆ ಮತ್ತು ಬಳಕೆ" ಎಂಬ ನಿಬಂಧವನ್ನು ರಚಿಸಿದ್ದಾರೆ. ಇದು ಸಾಮಾಜಿಕ ಭಾಷಾಶಾಸ್ತ್ರದ ಬಗೆಗಿನ ಕೆಲವು ಕಲ್ಪನೆಗಳನ್ನು ಕನ್ನಡದಲ್ಲಿ ಬಳಸಿರುವುದಲ್ಲದೆ, ನುಡಿಮಿಶ್ರಣ, ನುಡಿ ಪಲ್ಲಟ, ಭಾಷಾ ಆಧುನೀಕರಣ ಮುಂತಾದ ವಿಷಯಗಳನ್ನು ಚರ್ಚಿಸಿದ್ದಾರೆ. ಎಂ.ಎಂ.ಕಲ್ಬುರ್ಗಿಯವರು ಕನ್ನಡ ನಾಮ ವಿಜ್ಞಾನ(೧೯೮೧)ದಲ್ಲಿ ನಾಮ ವಿಧಗಳನ್ನು ಕುರಿತಂತೆ ಅಧ್ಯಯನ ಮಾಡಿದ್ದಾರೆ. ಈ ಅಧ್ಯಾಯನವು ಸಾಮಾಜಿಕ ಭಾಷಾಶಾಸ್ತ್ರದ ಅಂಶಗಳನ್ನು ತಿಳಿಸುತ್ತದೆ. ಸಿ.ಪಿ.ನಾಗರಾಜರವರು (೧೯೯೪) "ಕನ್ನಡ ಬಯ್ಗುಳಗಳ ಅಧ್ಯಯನ" ಎಂಬ ಮಹಾ ಪ್ರಬಂಧದಲ್ಲಿ ಮಂಡ್ಯ ಜಿಲ್ಲೆಯಲ್ಲಿರುವ ಕನ್ನಡ ಭಾಷಿಕರು ವಿವಿಧ ಸಾಮಾಜಿಕ ಸಂದರ್ಭಗಳಲ್ಲಿ ಕನ್ನಡ ಬಯ್ಗುಳಗಳನ್ನು ಹೇಗೆ ಬಳಸುತ್ತಾರೆ ಎಂಬುದನ್ನು ಸಾಮಾಜಿಕ ಭಿನ್ನಾಂಶಗಳಿಂದ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಕೆ.ಮುಥಾಲಿಕ್ (೧೯೯೮) ಅವರ ಸಂಶೋಧನ ಮಹಾಪ್ರಬಂಧದಲ್ಲಿ "ಬಾಗಲಕೋಟೆ ಕನ್ನಡದಲ್ಲಿ ಕಂಡುಬರುವ ಭಾಷಿಕ ಭಿನ್ನತೆಗೆ ಶಿಕ್ಷಣ, ಲಿಂಗ, ನಾಗರೀಕರಣ ಇತ್ಯಾದಿ ಸಾಮಾಜಿಕ ಭಿನ್ನಾಂಶಗಳನ್ನು ಒಂದೇ ಜಾತಿ ವಲಯದಲ್ಲಿ ಭಾಷಿಕ ಭಿನ್ನತೆಗೆ ಕಾರಣವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಡಾ.ಪಿ.ಮಹಾದೇವಯ್ಯ(೧೯೯೯) ಅವರು ಮೈಸೂರು ನಗರದ ಮುಸ್ಲಿಂ ಕನ್ನಡದ ಬಗೆಗಿನ ಸಾಮಾಜಿಕ ಭಾಷಾ ವೈಜ್ಞಾನಿಕ ಅಧ್ಯಯನದಲ್ಲಿ ಲಿಂಗ, ಶಿಕ್ಷಣ, ವೃತ್ತಿ ಮತ್ತು ವಯಸ್ಸನ್ನು ಸಾಮಾಜಿಕ ಭಿನ್ನಾಂಶವಾಗಿಟ್ಟುಕೊಂಡು ಮುಸ್ಲಿಂ ಕನ್ನಡದ ರಚನೆಯ ಬಗೆಗೆ ವಿಶ್ಲೇಷಿಸಿದ್ದಾರೆ. ಎನ್ .ಚಾಮರಾಜು ಅವರು ಚಾಮರಾಜ ನಗರದ ಮತ್ತು ಕೊಳ್ಳೇಗಾಲದ ಗಡಿ ಪ್ರದೇಶದ ದ್ವಿಭಾಷಿಕತೆಯನ್ನು ಕುರಿತು ಸಾಮಾಜಿಕ ಭಾಷಾಶಾಸ್ತ್ರದ ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. "ಕಲಬುರ್ಗಿ ಮುಸಲ್ಮಾನರ ಕನ್ನಡ" (೧೯೯೧) ಸಂಗಮೇಶ ಸವದತ್ತಿ ಮಠರವರು ಅಧ್ಯಯನ ಮಾಡಿದ್ದಾರೆ. ಶಾಲಿನಿ ರಘುನಾಥ ಅವರು ಹವ್ಯಕ ಮತ್ತು ಹಾಲಕ್ಕಿ ಕನ್ನಡದ ಜನಾಂಗಗಳ ಮೂಲ ಸಂಸ್ಕೃತಿ ಮತ್ತು ಭಾಷೆ ಕುರಿತು ಸಂಶೋಧನೆಯಲ್ಲಿ ಲಿಂಗ, ವಯಸ್ಸು, ವೃತ್ತಿ,

ಶಿಕ್ಷಣ, ಗ್ರಾಮೀಣ ಮತ್ತು ನಗರ ಮುಂತಾದ ಸಾಮಾಜಿಕ ಭಿನ್ನಾಂಶಗಳೊಂದಿಗೆ ಭಾಷಿಕ ಅಂಶಗಳನ್ನು ತುಲನೆ ಮಾಡಿ ವಿಶ್ಲೇಷಿಸುತ್ತಾರೆ. ಯು.ಪಿ.ಉಪಾಧ್ಯಾಯ ಅವರು ನಂಜನಗೂಡಿನ ಕನ್ನಡ(೧೯೬೮) ಸಂಶೋಧನಾ ವರದಿಯಲ್ಲಿ ಭಾಷಿಕ ವ್ಯತ್ಯಯಗಳನ್ನು ಜಾತಿ ಆಧರಿಸಿ ವಿವಿಧ ಭಾಷಿಕ ಹಂತಗಳಲ್ಲಿ ಗುರುತಿಸಿದ್ದಾರೆ. ಅಲ್ಲದೆ ತಮ್ಮ ಸಂಶೋಧನ ಪ್ರಬಂಧದಲ್ಲಿ ಬೇರೆ ಬೇರೆ ಕನ್ನಡ ಪ್ರಾದೇಶಿಕ ಉಪಭಾಷೆಗಳನ್ನು ವಿವಿಧ ಭಾಷಿಕ ಹಂತಗಳಲ್ಲಿ ತೌಲನಿಕವಾಗಿ ಅಧ್ಯಯನ ಮಾಡಿದ್ದಾರೆ.

ಇತ್ತೀಚಿನ ಅನೇಕ ಸಂಶೋಧನೆಗಳು ಸಮಾಜೋ ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ಅಧ್ಯಯನಗಳು ನಡೆದಿದೆ. ಬೀದರ್ ಕನ್ನಡ ಸಾಮಾಜಿಕ ಹಾಗೂ ಪ್ರಾದೇಶಿಕ ಪ್ರಭೇದಗಳು ಶ್ರೀನಿವಾಸ ಬೇಂದ್ರೆ ಅವರ ಅಪ್ರಕಟಿತ ಪ್ರಬಂಧವಾಗಿದೆ. ಮತ್ತು ಬಳ್ಳಾರಿ ಪರಿಸರದ ದ್ವಿಭಾಷಿಕತೆ ಹಾಗೂ ಸಮಾಜೋಭಾಷಿಕ ಅಧ್ಯಯನ(೨೦೦೭) ಡಾ. ಭಾಗ್ಯಲಕ್ಷ್ಮಿ ಎಂ. ಹೀಗೆ ಇತ್ತೀಚಿನ ಹಲವಾರು ಸಂಶೋಧನೆಗಳಿವೆ.

ದ್ವಿಭಾಷೆಯನ್ನು ಕುರಿತು

ಭಾಷೆಯೊಂದನ್ನು ಬಳಸದ ಮಾನವ ಸಮುದಾಯವನ್ನು ಅಥವಾ ಒಂದು ಬಳಸುವ ಸಮುದಾಯವಿಲ್ಲದ ಜೀವಂತ ಭಾಷೆಯನ್ನು ಕಾಣುವುದು ಅಸಾಧ್ಯ ಇಂಥ ಸಂದರ್ಭದಿಂದ ಒಂದು ಮಾನವ ಸಮುದಾಯಕ್ಕೆ ಒಂದು ಜೀವಂತ ಭಾಷಾ ಎಂಬ ಸೂತ್ರ ರಚಿಸಬೇಕಾಗುತ್ತದೆ. ಆದರೆ ವಾಸ್ತವವೇ ಬೇರೆಯಾಗಿರುತ್ತದೆ. ಒಂದು ಭಾಷೆಯನ್ನು ಆಡುವ ಜನರು ಒಂದಕ್ಕಿಂತ ಹೆಚ್ಚು ಸಮುದಾಯಗಳಲ್ಲಿ ಭೂ ಪ್ರದೇಶಗಳಲ್ಲಿ ಕಾಣಸಿಗುವಂತೆ, ಒಂದೇ ಸಮುದಾಯದಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳು ಬಳಕೆಯಾಗುತ್ತಿರುವುದು ಕಂಡುಬರುತ್ತದೆ. ರಾಜಕೀಯ ಕಾರಣಗಳಿಂದ ನಡೆಯುವ ಆಡಳಿತ ವಲಯ ವಿಸ್ತರಣೆಗಳು ಸಮುದಾಯಗಳ ಜನರ ಬೇರೆ ಬೇರೆ ಭೂಪ್ರದೇಶಗಳಿಗೆ ಹೋಗಿ ನೆಲೆಸುವುದು, ವಲಸೆಗಳು ಇತ್ಯಾದಿಗಳಿಂದಾಗಿ ಭಾಷಾ ಸಮುದಾಯ ಬೆರೆಯುವುದು ಅನಿವಾರ್ಯವಾಗುತ್ತದೆ. ಇಂತಹ ಪರಿಸ್ಥಿತಿ ಬಹು ಹಿಂದಿನಿಂದಲೂ ಉಂಟಾಗಿರುವುದಕ್ಕೆ ಪುರಾವೆಗಳಿವೆ.

ಒಂದು ಸಮುದಾಯದಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳು ಬಳಕೆಯಾಗುವ ಸಂದರ್ಭವಿದ್ದಾಗ ಅದನ್ನೊಂದು ಬಹುಭಾಷಿಕ ಸನ್ನಿವೇಶ ಎನ್ನುತ್ತೇವೆ. ಎರಡು ಭಾಷೆಗಳನ್ನು ಸರಳವಾಗಿ ಅರ್ಥೈಸಬಲ್ಲ ಹಾಗೂ ಗ್ರಹಿಸಬಲ್ಲ ಮತ್ತು ಅಭಿವ್ಯಕ್ತವುಳ್ಳ ಪರಿಸರಕ್ಕೆ ದ್ವಿಭಾಷಿಕ ಸನ್ನಿವೇಶ ಎನ್ನುತ್ತೇವೆ ಇಂಥ ಸನ್ನಿವೇಶದಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಕಲಿತು ಬಳಸಬೇಕಾದ ಅವಕಾಶ, ಒತ್ತಾಯಗಳು ಉಂಟಾಗುತ್ತವೆ. ಜನರು ಹೀಗೆ ಎರಡು ಭಾಷೆಗಳನ್ನು ಕಲಿತು ಬಳಸತೊಡಗಿದಾಗ ಆ ಪರಿಸರದಲ್ಲಿ ದ್ವಿಭಾಷಿಕತೆ ಇದೆ ಎನ್ನುತ್ತೇವೆ. ಇದು ಸಮೂದಾಯಿಕ ದ್ವಿಭಾಷಿಕತೆ ಉದಾ : ಕರ್ನಾಟಕದ ಕೋಲಾರ ಜಿಲ್ಲೆಯಲ್ಲಿ ಕೆಲವು ತಾಲ್ಲೂಕುಗಳಲ್ಲಿ ಕನ್ನಡ ತೆಲುಗು ಈ ಎರಡು ಭಾಷೆಗಳನ್ನು ಕುರಿತು ಬಳಸುವ

ಜನರು ಹಲವಾರು ಚ.ಕಿ.ಮೀ ಪ್ರದೇಶಗಳಲ್ಲಿ ಹರಡಿಕೊಂಡಿದ್ದಾರೆ. ಹಾಗಾಗಿ ಇದೊಂದು ದ್ವಿಭಾಷಿಕ ಪ್ರದೇಶ. ದ್ವಿಭಾಷಿಕ ಪ್ರದೇಶದಲ್ಲಿ ಎಲ್ಲಾ ಜನರೂ ದ್ವಿಭಾಷಿಕರಾಗುವುದಿಲ್ಲ. ದ್ವಿಭಾಷಿಕತೆ ಎನ್ನುವುದು ದ್ವಿಭಾಷಿಕ ಪ್ರದೇಶದ ನಿರ್ದಿಷ್ಟ ಪ್ರದೇಶದ ನಿರ್ದಿಷ್ಟ ಪ್ರಮಾಣದ ಜನರಲ್ಲಿ ಕಾಣಸಿಗುವ ಬಾಷಾ ಲಕ್ಷಣವಾಗಿದೆ. ದ್ವಿಭಾಷಿಕತೆ ಸಾಂಸ್ಕೃತಿಕ ರಾಜಕೀಯ ಸ್ಥಾನಮಾನಗಳಿಗೆ ಅನುಗುಣವಾಗಿ ಸನ್ನಿವೇಶಗಳು ಉಂಟಾಗುತ್ತವೆ. ದ್ವಿಭಾಷಿಕರಾದವರು ತಮ್ಮ ಭಾಷಾ ಸಾಮರ್ಥ್ಯಗಳನ್ನು ಬಳಸುವ ವಿಧಾನವನ್ನು ಅವಲಂಬಿಸಿ ಸ್ವಭಾಷಿಕತೆಯನ್ನು ಬೇರೆ ಬೇರೆ ಬಗೆಗಳು ಉಂಟಾಗುತ್ತವೆ.

ದ್ವಿಭಾಷಿಕರು ಎರಡೂ ಭಾಷೆಗಳನ್ನು ಒಟ್ಟಾಗಿ ಕಲಿಯುವುದು ಒಂದು ಮಾದರಿಯಾದರೆ ಒಂದು ಭಾಷೆಯನ್ನು ಕಲಿತು ಆನಂತರ ಇನ್ನೊಂದು ಭಾಷೆಯನ್ನು ಕಲಿಯುವುದು ಇನ್ನೊಂದು ಮಾದರಿ. ಚಿಕ್ಕಮಕ್ಕಳು ದ್ವಿಭಾಷಿಕ ಪರಿಸರದಲ್ಲಿ ಭಾಷೆಯನ್ನು ಕಲಿಯಲು ಪ್ರಾರಂಭಿಸಿದರೆ ಅವರು ಎರಡು ಭಾಷೆಯನ್ನು ಒಂದೇ ಸಲಕ್ಕೆ ಕಲಿಯುವ ಅವಕಾಶಗಳಿರುತ್ತವೆ. ಇಂಥ ಮಕ್ಕಳಲ್ಲಿ ಯಾವುದು ಮೊದಲ ಭಾಷೆ, ಯಾವುದು ಎರಡನೇ ಭಾಷೆ ಎಂದು ಹೇಳುವುದು ಕಷ್ಟ. ಔಪಚಾರಿಕವಾಗಿ ಮನೆ ಭಾಷೆ, ಹೊರಗಿನ ಭಾಷೆ ಎಂದು ವಿಂಗಡಿಸುವುದುಂಟು ಎಷ್ಟೋ ಸಂದರ್ಭಗಳಲ್ಲಿ ಎರಡು ಭಾಷೆಗಳು ಮನೆ ಭಾಷೆಯಾಗಿರುವುದರಿಂದ ದ್ವಿಭಾಷಿಕರಾಗಬಹುದು. ಅಂದರೆ ಮಗು ಎರಡೂ ಭಾಷೆಗಳನ್ನು ಮನೆಯೊಳಗೆ ದೊರೆತ ಭಾಷಾ ಸಂದರ್ಭಗಳಿಂದ ಕಲಿಯುವುದು ಎರಡು ಬೇರೆ ಬೇರೆ ಭಾಷೆಗಳನ್ನಾಡುವ ತಂದೆ ತಾಯಿಯರಿದ್ದರೆ ಅವರ ಮಗು ತಂದೆ ಮತ್ತು ಅವರ ಬಂಧುಗಳ ಮೂಲಕ ಒಂದು ಭಾಷೆಯನ್ನು ತಾಯಿ ಮತ್ತು ಅವರ ಬಂಧುಗಳ ಮೂಲಕ ಮತ್ತೊಂದು ಭಾಷೆಯನ್ನು ಕಲಿಯುತ್ತದೆ. ಆದ್ದರಿಂದ ಆ ಮಗುವಿಗೆ ಎರಡು ಮನೆ ಭಾಷೆಗಳೇ ಆಗಿರುತ್ತವೆ.

ದ್ವಿಭಾಷಿಕರು ಎರಡೂ ಭಾಷೆಗಳಲ್ಲಿ ಪ್ರಾವೀಣ್ಯವನ್ನು ಪಡೆದುಕೊಳ್ಳುವ ವಿವಿಧ ಹಂತಗಳನ್ನು ಭಾಷಾಶಾಸ್ತ್ರಜ್ಞರು ಗುರುತಿಸಿದ್ದಾರೆ. ಮೊದಲ ಹಂತದಲ್ಲಿ ಕ್ಷೀಣ ದ್ವಿಭಾಷಿಕತೆ ಎನ್ನುತ್ತಾರೆ. ಈ ಹಂತದಲ್ಲಿ ಎರಡು ಭಾಷೆಗಳಲ್ಲಿ ಅಥವಾ ಎರಡನೇ ಭಾಷೆಯಲ್ಲಿ ಭಾಷಿಕ ಕೌಶಲಗಳು ಇನ್ನೂ ಆರಂಭದ ಹಂತದಲ್ಲೇ ಇರುತ್ತವೆ. ಕೇಳುವ/ಓದುವ ಸಾಮಾರ್ಥ್ಯ ಎರಡನೇ ಹಂತ. ಇಲ್ಲಿ ಉತ್ಪಾದನ ಕೌಶಲಗಳು ದ್ವಿಭಾಷಿಕರಿಗೆ ಒದಗುವುದಿಲ್ಲ. ಮುಂದಿನ ಹಂತದಲ್ಲಿ ಎರಡೂ ಭಾಷೆಗಳಲ್ಲೂ ಎಲ್ಲಾ ಕೌಶಲಗಳೂ ಒದಗಿರುತ್ತವೆ. ಅವುಗಳ ಬಳಕೆಯಲ್ಲಿ ದ್ವಿಭಾಷಿಕರು ಸರಿಸಮ ಭಾವವನ್ನು ಪ್ರಕಟಿಸುವುದು. ಆದರೆ ಆ ಕೌಶಲಗಳು ಅವರಿಗೆ ಲಭ್ಯವಾಗುತ್ತವೆ. ಎರಡು ಭಾಷೆಗಳ ಸಾಮರ್ಥ್ಯಗಳನ್ನು ಅಡೆತಡೆಗಳಿಲ್ಲದೆ ಬಳಸಿದರೆ ಸಮ ದ್ವಿಭಾಷಿಕತೆಯೂ ಉಂಟಾಗುತ್ತದೆ.

೨೦ನೇ ಶತಮಾನದಿಂದೀಚೆಗೆ ಉಂಟಾದ ಜಾಗತೀಕರಣದ ಪ್ರಕ್ರಿಯೆಯಿಂದ ದ್ವಿಭಾಷಿಕತೆಯ ಸ್ವರೂಪ ಮತ್ತು ಪರಿಣಾಮಗಳು ತೀವ್ರವಾಗಿ ಬದಲಾಗುತ್ತಿವೆ. ಕನ್ನಡ-ಮರಾಠಿ, ಕನ್ನಡ-ತೆಲುಗು, ಕನ್ನಡ-

ತುಳು, ಕನ್ನಡ-ತಮಿಳು ದ್ವಿಭಾಷಿಕತೆಗಿಂತ ಕನ್ನಡ-ಇಂಗ್ಲೀಶ್, ತೆಲುಗು-ಇಂಗ್ಲೀಶ್, ತಮಿಳು-ಇಂಗ್ಲೀಶ್ ಈ ರೀತಿಯ ಪಲ್ಲಟಗಳು ಜಾಗತೀಕರಣ ಸಂದರ್ಭದಲ್ಲಿ ಹೆಚ್ಚಾಗಿ, ಇಂಗ್ಲೀಶ್ ಭಾಷೆಯ ಕಡೆಯ ಭಾಷಿಕರು ಪಲ್ಲಟಗೊಳ್ಳುತ್ತಿದ್ದಾರೆ. ದ್ವಿಭಾಷಿಕರಾದವರಲ್ಲಿ ತಮ್ಮ ಶೈಕ್ಷಣಿಕ ಹಂತದ ಸಾಧನೆಗಾಗಿ ಸಾಕ್ಷರತೆಯ ಕೌಶಲಗಳನ್ನು ಇಂಗ್ಲೀಶ್ ನಲ್ಲಿ ಪಡೆಯುವುದು ಹೆಚ್ಚಾಗುತ್ತಿರುವುದರಿಂದ ತಮ್ಮ ಸ್ವಭಾಷೆಗಳು ಕೇವಲ ಮೌಖಿಕ ಭಾಷೆಗಳಾಗಿ ಉಳಿದುಕೊಳ್ಳುವಂತಾಗಿದೆ. ಇದರ ಪರಿಣಾಮಗಳನ್ನು ಮುಂದೆ ನೋಡಬೇಕಾಗಿದೆ. ಈ ನಿಟ್ಟಿನಲ್ಲಿ ಕೆಲವು ಭಾರತೀಯ ಭಾಷೆಗಳೂ ತಮ್ಮ ಭಾಷೆಯನ್ನು ಜಾಗತಿಕ ಮಟ್ಟದಲ್ಲಿ ಕಾಯ್ದುಕೊಳ್ಳಲು ಹಲವಾರು ಹೊಸತಂತ್ರಗಳನ್ನು ಭಾಷೆಯ ಆಧುನಿಕೋತ್ತರ ಪ್ರಕ್ರಿಯೆಗಳಿಗೆ ಸಿದ್ಧಪಡಿಸಿಕೊಳ್ಳುವಲ್ಲಿ ಕಾರ್ಯೋನ್ಮುಖವಾಗಿದೆ.

ದ್ವಿಭಾಷಿಕರಾದವರಲ್ಲಿ ಎರಡು ಭಾಷೆಯಲ್ಲಿನ ಭಾಷಿಕ ಸಾಮರ್ಥ್ಯವನ್ನು ಎಲ್ಲಾ ಸಂದರ್ಭಗಳಲ್ಲೂ ಒಂದೇ ರೀತಿ ಇರುವುದಿಲ್ಲ. ಉದಾ : ಬ್ರಿಟನ್ನಿನಲ್ಲಿರುವ ಪಂಜಾಬಿ ಭಾಷಿಕರಲ್ಲಿ ಪಂಜಾಬಿಯನ್ನು ಮಾತಾನಾಡುವ ಮಟ್ಟದಲ್ಲಿ ಅರ್ಥಮಾಡಿಕೊಳ್ಳುತ್ತಾರೆ. ಆದರೆ ಬರೆಯುವ ಗುರುಮುಖಿ ಲಿಪಿಯನ್ನು ಅರ್ಥ ಮಾಡಿಕೊಳ್ಳಲಾಗುವುದಿಲ್ಲ. ಇಂತಹ ದ್ವಿಭಾಷಿಕರಲ್ಲಿ ಮಾತಾನಾಡುವ ಮತ್ತು ಗ್ರಹಿಸುವ ಸಾಮಾರ್ಥ್ಯ ಉನ್ನತ ಮಟ್ಟದಲ್ಲಿರುತ್ತದೆ. ಓದುವ ಮತ್ತು ಬರೆಯುವ ಕೌಶಲ ಇರುವುದಿಲ್ಲ ಜೊತೆಗೆ ಬೇರೆ ಬೇರೆ ಬಾಷೆಯ ಉಚ್ಚಾರವೂ ಸಹ ಭಿನ್ನವಾಗಿದೆ.

ದ್ವಿಭಾಷಿಕರು ಯಾರು? ಎನ್ನುವ ಪ್ರಶ್ನೆಗೆ ಹಲವಾರು ಭಾಷಾ ತಜ್ಞರು ಅನೇಕ ವಾಕ್ಯಗಳನ್ನು ನೀಡಿದ್ದಾರೆ. ''ತನ್ನ ಮಾತೃಭಾಷೆಯ ಮೇಲೆ ತೋರುವಂತದ್ದೇ ಪ್ರಭುತ್ವವನ್ನು ಎರಡನೇ ಬಾಷೆಯ ಮೇಲೆಯೂ ತೋರಬಲ್ಲ ವ್ಯಕ್ತಿಯೇ ದ್ವಿಭಾಷಿಕನೆನಿಸಿಕೊಳ್ಳುತ್ತಾನೆ'' ಎಂದು ಬ್ಲೂಮ್ ಫಿಲ್ಡ್ (೧೯೩೩) ಅವರ ಹೇಳಿಕೆ ಒಂದು ತುದಿಯಲ್ಲಿದ್ದರೆ, ''ಎರಡನೆಯ ಬಾಷೆಯಲ್ಲಿ ಅವರ ಹೇಳಿಕೆ ಒಂದು ತುದಿಯಲ್ಲಿದ್ದರೆ, ''ಎರಡನೆಯ ಭಾಷೆಯಲ್ಲಿ ಓದುವ, ಬರೆಯುವ, ಮಾತನಾಡುವ ಹಾಗೂ ಅರ್ಥ ಮಾಡಿಕೊಳ್ಳಬಲ್ಲ ಈ ನಾಲ್ಕು ತೆರನಾದ ಸಾಮರ್ಥ್ಯಗಳಲ್ಲಿ ಯಾವುದಾದರೊಂದರಲ್ಲಿಯಾದರೂ ಪರಿಣತನಾಗಿದ್ದರೆ ದ್ವಿಭಾಷಿಕನೆಂದು ಕರೆಯಬಹುದು'' ಎಂಬ ಮಾಕನ್ ಮಾರ(೧೯೬೭) ಅವರ ಹೇಳಿಕೆ ಇನ್ನೊಂದು ತುದಿಯಲ್ಲಿದೆ. ಇವುಗಳ ಮಧ್ಯ ''ಒಂದು ಭಾಷೆಯು ಜೊತೆ ಜೊತೆಗೆ ಇನ್ನೊಂದು ಭಾಷೆಯನ್ನು ಬಳಸುವ ರೂಢಿಯೇ ದ್ವಿಭಾಷಿಕತೆ'' ಎಂದು ವೆನ್‌ರಿಖ್(೧೯೫೩) ''ಎರಡನೇ ಭಾಷೆಯಲ್ಲಿ ಅರ್ಥಪೂರ್ಣ ವಾಕ್ಯಗಳನ್ನು ಹೊರಡಿಸಬಲ್ಲ ವ್ಯಕ್ತಿಯೇ ದ್ವಿಭಾಷಿಕನೆಂದು ಹೇಳುವ ನಿರ್ವಚನಗಳೂ ಇವೆ. ಇವುಗಳೆಲ್ಲ ಭಾಷೆಯ ಮೇಲಿನ ಪ್ರಭುತ್ವವನ್ನೊ ಅಥವಾ ಬಳಕೆಯಲ್ಲಿ ತೋರುವ ವೈಚಿತ್ರವನ್ನೊ ಗಮನಿಸಿ ಹೇಳಿದ ನಿರ್ವಚನಗಳಿವೆ. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ದ್ವಿಭಾಷಿಕತೆಯೆಂಬುದು ಕೇವಲ ಎರಡು ಭಾಷೆಗಳು ಒಂದೆಡೆ ಸೇರುವುದು ಮಾತ್ರವಲ್ಲ ಒಂದು ಸಮಾಜ ತನ್ನ ಜನರಲ್ಲಿ ಇನ್ನೊಂದು

ಭಾಷೆಯನ್ನು ಕಲಿಯುವ ಇಚ್ಛೆಯನ್ನು ಅವಶ್ಯಕತೆಯನ್ನೂ ಉಂಟು ಮಾಡುತ್ತದೆ. ಯುನೆಸ್ಕೋ ವರದಿ(೧೯೬೫) ಆದ್ದರಿಂದ ಒಬ್ಬ ವ್ಯಕ್ತಿಯಲ್ಲಿ ಅಥವಾ ಒಂದು ಸಮಾಜದಲ್ಲಿ ದ್ವಿಭಾಷಿಕತೆ ಕಾಣಿಸಿಕೊಂಡಾಗ ಅದಕ್ಕೆ ಕಾರಣವಾಗಿರಬಹುದಾದ ಸಾಮಾಜಿಕ ಸಂದರ್ಭಗಳನ್ನು ಗಮನಿಸದೆ ಕೇವಲ ಭಾಷೆಗೆ ಸಂಬಂಧಿಸಿದಂತೆ ಮಾತ್ರ ಅಧ್ಯಯನ ನಡೆಸುವುದು ಅಷ್ಟೇನು ಉಪಯುಕ್ತವಾದುದ್ದಲ್ಲ(ಡೈಬೋಲ್ಡ್ (೧೯೬೪) ಎಂಬ ಅಭಿಪ್ರಾಯವೂ ಇದೆ.

"ಎರಡು ಭಾಷೆಗಳನ್ನು ಬಲ್ಲ ವ್ಯಕ್ತಿಯೇ ದ್ವಿಭಾಷಿಕನೆಂಬುದು ಸರಳವಾದ ನಿರ್ವಚನ. ಕಲಿಯುವಿಕೆ ಎಂಬುದು ಅನೇಕ ಹಂತಗಳ ಮೂಲಕ ನಡೆಯುವ ಒಂದು ಮಾನಸಿಕ ಪ್ರಕ್ರಿಯೆಯಾಗಿದೆ. ದ್ವಿಭಾಷಿಕತೆ ಒಬ್ಬ ವ್ಯಕ್ತಿಯಿಂದ ಹಿಡಿದು ಇಡೀ ಸಮಾಜವನ್ನು ಒಳಗೊಳ್ಳುವಂತೆ ವಿವಿಧ ಪ್ರಮಾಣದಲ್ಲಿ ಕಾಣಿಸಿಕೊಳ್ಳಬಹುದಾದ್ದರಿಂದ ಎರಡು ಭಾಷೆಗಳ ಬಳಕೆ ಹಾಗೂ ಅದನ್ನು ನಿಯಂತ್ರಿಸುವ ಸಂದರ್ಭಗಳು ಅನೇಕ ರೀತಿಯದ್ದಾಗಿರುವುದು. ದ್ವಿಭಾಷಿಕತೆಗೆ ಭಾಷೆಗಳ ಕಲಿಕೆಯಿಂದ ಅಂತರ್ಗತವಾದ ಭಾಷಾ ಸಾಮಾರ್ಥ್ಯ ಹಾಗೂ ಅವುಗಳ ಪ್ರತ್ಯಕ್ಷ ಬಳಕೆ ಎಂಬ ಎರಡು ಮುಖಗಳಿದ್ದು, ಅವುಗಳ ನಡುವಿನ ಸಂಬಂಧ ಸರಳವಾದುದ್ದಲ್ಲ" - ಕೃಷ್ಣ ಪರಮೇಶ್ವರ ಭಟ್ಟ(೧೯೯೫:೦೨)

ದ್ವಿಭಾಷಿಕತೆ ಬಗೆಗೆ ನಡೆದಿರುವ ಅಧ್ಯಯನಗಳು

ದ್ವಿಭಾಷಿಕತೆಯನ್ನು ಕುರಿತಂತೆ ಯುರೋಪ್ ರಾಷ್ಟ್ರಗಳಲ್ಲಿ ೩ನೇ ಶತಮಾನದಲ್ಲಿ ಅಧ್ಯಯನಗಳಾಗಿವೆ ಎಂದು ಎ.ಕೆ.ಶ್ರೀವಾಸ್ತವ ಅವರು ಲೇಖನವೊಂದರಲ್ಲಿ ಹೇಳುತ್ತಾರೆ. ಆದರೆ ಆಧಾರಗಳನ್ನು ಕೊಟ್ಟಿಲ್ಲ. ಆಧುನಿಕ ಭಾಷಾಶಾಸ್ತ್ರ ಏಕಭಾಷಾ ದೃಷ್ಟಿಯಿಂದ ಕೆಲಸ ಮಾಡುತ್ತಿದೆ. ಭಾಷಾ ಸಮುದಾಯದಲ್ಲಿ ಸಂಪೂರ್ಣವಾಗಿ ಆದರ್ಶ ಕೇಳುಗ ಮತ್ತು ಆಡುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಏಕಘನಾಕೃತಿಯ ಭಾಷೆಯನ್ನು ಅಧ್ಯಯನ ಮಾಡುತ್ತಿರುವುದಕ್ಕೆ ವಿರುದ್ಧವಾಗಿ ರೋಮನ್ ಜಾಕೋಬ್ ಸ್ ೧೯೫೩ರಲ್ಲಿ ಭಾಷಾ ಶಾಸ್ತ್ರದ ಮೂಲ ಸಮಸ್ಯೆ 'ದ್ವಿಭಾಷಿಕತೆ' ಎಂದು ಗುರುತಿಸಿದ್ದಾರೆ. ದ್ವಿಭಾಷಿಕತೆ ಮತ್ತು ಭಾಷಾ ಸಂಪರ್ಕ ಕ್ಷೇತ್ರದ ಆಯಾಮಗಳ ಚರ್ಚೆ ೧೯೪೦-೫೦ ದಶಕಗಳಲ್ಲಿ ಕೆನಡಾ ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ಮುಖ್ಯವಾಗಿ ಲೀಪೋಲ್ಡ್, ಐನರ್ ಹೆಗನ್, ಯುರಿನ್ ವೆನ್ನಿಖ್, ವಿಲಿಯಂ ಮ್ಯಾಕೆ ಪ್ರಮುಖರು. ರಂಜತ್ (೧೯೧೩) ಅವರು ತನ್ನ ಮಗ ಲೂಹಿಯ ಫ್ರೆಂಚ್ ಮತ್ತು ಜರ್ಮನ್ ದ್ವಿಭಾಷಿಕತೆಯ ವಿವರಗಳನ್ನು ಹಿಡಿದಿಟ್ಟಿದ್ದಾರೆ. ಲೀಪೋಲ್ಡ್ (೧೯೩೯-೪೯) ಅವರು ೧೦ ವರ್ಷಗಳ ಅಧ್ಯಯನದಲ್ಲಿ ಮಗುವಿನ ಜರ್ಮನ್ ಮತ್ತು ಇಂಗ್ಲಿಶ್ ದ್ವಿಭಾಷಿಕತೆಯ ಬಗೆಗಿನ ವಿವರಗಳನ್ನು ಡೈರಿಯಲ್ಲಿ ಬರೆದಿದ್ದಾರೆ. ವಿಶಾಲವಾದ ಪರಿಸರದಲ್ಲಿ ಮಗುವಿನ ದ್ವಿಭಾಷಿಕತೆಯ ಬೆಳವಣಿಗೆಯ ದಾಖಲೆ, ಎರಡು ಭಾಷೆಗಳ ಪ್ರತ್ಯೇಕತೆ ಯಾರ ಜೊತೆ ಮಾತನಾಡುವಾಗ ಅದರ ಪಾತ್ರ ಯಾವ ರೀತಿಯ ಪ್ರಭಾವ ಪರಿಣಾಮವನ್ನು ಮಗುವಿನ ಮೇಲೆ ಬೀರುತ್ತದೆ. ದ್ವಿಭಾಷಾ ಸಾಮಾರ್ಥ್ಯದ

ಅಸಮಾನತೆಯ ಅಂಶ, ಪ್ರಬಲ ಭಾಷೆ, ದುರ್ಬಲ ಭಾಷೆಯ ಮೇಲೆ ಬೀರುವ ಪರಿಣಾಮಗಳ ಬಗೆಗೆ ಈ ಅಧ್ಯಯನದಲ್ಲಿ ಹೆಚ್ಚು ಒತ್ತುಕೊಟ್ಟಿದ್ದಾರೆ.

ದ್ವಿಭಾಷಿಕತೆಯನ್ನು ಕುರಿತಂತೆ ೧೯೧೩ ರಿಂದ ೧೯೫೩ರ ಮಧ್ಯೆ ಹಲವಾರು ಅಧ್ಯಯನಗಳು ಹಲವಾರು ದೃಷ್ಟಿಕೋನಗಳಿಂದ ನಡೆದಿದೆ. ರಾಷ್ಟ್ರೀಯತೆ, ರಾಷ್ಟ್ರಪ್ರಭುತ್ವ ಅಲ್ಪಸಂಖ್ಯಾತ ಭಾಷಾ ಸಮುದಾಯಗಳ ಬಗೆಗೆ ಭಾಷಾ ಬದಲಾವಣೆ ಭಾಷಾ ಶುದ್ಧತೆ, ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಇದರ ಒಟ್ಟು ಚಿತ್ರಣ Vildolce(೧೯೬೩) ಸಿಗುತ್ತದೆ. ಯಾರಿಲ್ ವೆನ್ರಿಖ್ (೧೯೫೩)ರ ಅಧ್ಯಯನ ದ್ವಿಭಾಷಿಕತೆಯ ಅಧ್ಯಯನ ವ್ಯಾಪ್ತಿ ವಿಧಾನಗಳನ್ನು ವಿವರಿಸುವ ಪ್ರಭಾವಶಾಲಿಯಾದ ಅಧ್ಯಯನವಾಗಿದೆ. ದ್ವಿಭಾಷಿಕತೆಯ ಅಧ್ಯಯನಕ್ಕೆ ಸೈದ್ಧಾಂತಿಕ ಚೌಕಟ್ಟನ್ನು ಇದು ನೀಡುತ್ತದೆ. ರೋಮನ ಜಾಕೊಬ್ ಸನ್ ಮತ್ತು ಆಂಡ್ರೆ ಮಾರ್ಟಿನೆಟ್‌ರ ಯುರೋಪಿನ ಸಂರಚನಾ ವಾದ ಈತನ ಮೇಲೆ ಪ್ರಭಾವ ಬೀರಿದೆ. ಸ್ವಿಜರ್‌ಲ್ಯಾಂಡ್‌ನಲ್ಲಿರುವ ರೋಮನ್ ಮತ್ತು ಜರ್ಮನ್ ದ್ವಿಭಾಷಿಕರನ್ನು ಆಧರಿಸಿದ ಈ ಅಧ್ಯಯನವು ದ್ವಿಭಾಷಿಕತೆಯ ಬಗೆಗಿನ ಎಲ್ಲಾ ವಿಷಯಗಳನ್ನು ಕುರಿತು ಹಲವಾರು ದೃಷ್ಟಿಕೋನಗಳಿಂದ ಪರಿಚಯ ಮಾಡಿಕೊಡುತ್ತದೆ. ಇದರಲ್ಲಿ ಬಹಳ ಮುಖ್ಯವಾದದ್ದು. ದ್ವಿಭಾಷಿಕ ವರ್ಗೀಕರಣ, ೧೯೫೧ರಲ್ಲಿನ ತನ್ನ ಎದ್ದಿಷ್ ಅಮೆರಿಕನ್ ಭಾಷೆಯ ಅನುಭವಗಳನ್ನು ಇಲ್ಲಿ ಸೇರಿಸಿದ್ದಾರೆ.

ವಿನರ್ ಹೆಗನ್ (೧೯೫೩) ಅವರು ಅಮೇರಿಕಾದಲ್ಲಿನ ನಾರ್ವೆಯನ್ ಭಾಷೆಯ ಬಗೆಗೆ ೩೦ರ ದಶಕ ಮತ್ತು ೪೦ರ ದಶಕದಲ್ಲಿ ನಡೆಸಿದ ಕ್ಷೇತ್ರಕಾರ್ಯವನ್ನು ಅಧರಿಸಿ ಸಂಶೋಧನೆಯಲ್ಲಿ ದ್ವಿಭಾಷಿಕರ ನಡುವಳಿಕೆಗಳ ಸ್ಥೂಲ ಸರ್ವೇಕ್ಷಣೆ ಮಾಡಿದ್ದಾರೆ. ಅಮೇರಿಕಾದ ಸಂರಚನಾವಾದ ಪ್ರಭಾವಿಸಿರುವ ಅಮೇರಿಕನ್ ಮತ್ತು ಸ್ಕ್ಯಾಂಡಿನಿವಾಸ್ ಪ್ರಭೇದ ವಿಜ್ಞಾನದ ಮಾದರಿ ಸೈದ್ಧಾಂತಿಕ ಚೌಕಟ್ಟು ಮತ್ತು ಕ್ಷೇತ್ರಕಾರ್ಯವನ್ನು ಆಧರಿಸಿ ಇದನ್ನು ವಿಶ್ಲೇಷಿಸಲಾಗಿದೆ. ಸ್ವೀಕರಣ ಪ್ರಕ್ರಿಯೆ ಧ್ವನಿಮಾ, ವ್ಯಾಕರಣ ಹಂತಗಳ ಬಗೆಗೂ ಸಮಾಜೋಭಾಷಿಕ ಆಯಾಮಗಳ ಬಗೆಗೆ ಅಧ್ಯಯನ ಮಾಡಿದ್ದಾರೆ.

ಮ್ಯಾಕೆ (೧೯೭೨) ಫ್ರೆಂಚ್ ಕೆನಡಾ ದ್ವಿಭಾಷಿಕತೆಯ ಅಧ್ಯಯನದಲ್ಲಿ ದ್ವಿಭಾಷಿಕತೆಯನ್ನು ಮರುವ್ಯಾಖ್ಯಾನಕ್ಕೆ ಒಳಪಡಿಸಬೇಕೆಂದು ಹೇಳಿದ್ದಾರೆ. ೧೯೬೨-೬೫ರಲ್ಲಿ ದ್ವಿಭಾಷಿಕತೆಯನ್ನು ಮಾಪನ ಮಾಡುವುದರ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ೧೯೭೦ರ ಲೇಖನದಲ್ಲಿ ದ್ವಿಭಾಷಿಕ ಶಿಕ್ಷಣದ ವರ್ಗೀಕರಣವನ್ನು ಕುರಿತು ಬರೆದಿದ್ದಾರೆ.

೧೯೭೦ರ ಲೇಖನದಲ್ಲಿ ದ್ವಿಭಾಷಿಕತೆ ಬಳಕೆಯ ಸಂದರ್ಭದಲ್ಲಿ ನುಡಿ ಮತ್ತು ಸಂದೇಶದ ನಡುವಿನ ಸಂಬಂಧವನ್ನು ನಿರ್ಧರಿಸಲು ಕೆಲವು ಪರೀಕ್ಷೆಗಳನ್ನು ಅಭಿವೃದ್ಧಿ ಪಡಿಸಿದ್ದಾರೆ.

ಪಾರಡೀಸ್ (೧೯೭೮)ರ ದ್ವಿಭಾಷಿಕತೆಯ ಪ್ರಶ್ನೆಯನ್ನು ನರವ್ಯೂಹ ಭಾಷಾಶಾಸ್ತ್ರದ ಭಾಷಾ ಆವಸ್ಥೆಯ ಅಧ್ಯಯನದ ಜೊತೆ ಜೋಡಿಸಿದ್ದಾರೆ. ಇವರು ಆಸ್ಟ್ರೇಲಿಯಾದಲ್ಲಿ ದ್ವಿಭಾಷಿಕತೆ ಮತ್ತು ನುಡಿ

ಪಲ್ಲಟದ ಬಗೆಗೆ ಅಧ್ಯಯನ ಮಾಡಿದ್ದಾರೆ. ಮೈಕ್ಲ್ಯನ್ (೧೯೬೭)ರ ಆಸ್ಟ್ರೇಲಿಯಾದಲ್ಲಿನ ಜರ್ಮನ್ ಡಚ್ ವಲಸಿಗರ ಅಧ್ಯಯನದಲ್ಲಿ ಭಾಷಾ ಮಿಶ್ರಣ ಪರಿಕಲ್ಪನೆಯನ್ನು ಮನಶಾಸ್ತ್ರ ಮತ್ತು ಸಮಾಜೋಭಾಷಿಕ ಅಂಶಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಕ್ಲೈನ್ ಮತ್ತು ಡಿಟ್ ಮಾರ್ (೧೯೭೯) ಅವರು ಬಹಳ ವಿಭಿನ್ನ ದೃಷ್ಟಿಕೋನದಿಂದ ವಲಸಿಗ ಸಮೂದಾಯದ ದ್ವಿಭಾಷಿಕತೆಯನ್ನು ಕುರಿತಂತೆ ಕೆಲಸ ಮಾಡಿದ್ದಾರೆ. ಮುಖ್ಯವಾಗಿ ಅವರು ದ್ವಿಭಾಷಿಕ ಕಲಿಕೆಯ ಸಂದರ್ಭಗಳಲ್ಲಿ ಭಾಷೆಯ ಮೇಲಾಗುವ ಸಾಮಾಜಿಕ ಅಂಶಗಳನ್ನು ಅಧ್ಯಯನ ಮಾಡಿದ್ದಾರೆ ಲೆಪೇಜ್ (೧೯೮೫).

ಮನಶ್ಯಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು, ಶಿಕ್ಷಣ ತಜ್ಞರು ಮತ್ತು ಅಂತರಾಷ್ಟ್ರೀಯ ಅಧ್ಯಯನಗಳು ದ್ವಿಭಾಷಿಕತೆಯನ್ನು ನೋಡುವ ಸಂದರ್ಭ ದೃಷ್ಟಿಕೋನಗಳು ಭಿನ್ನವಾಗಿವೆ. ಆದ್ದರಿಂದ ಮ್ಯಾಕೆ (೧೯೬೮) ದ್ವಿಭಾಷಿಕತೆ ಎನ್ನುವುದು. 'ಒಂದು ಭಾಷಾ ಪ್ರಕ್ರಿಯೆಯಲ್ಲಿ ಭಾಷೆಯ ಬಳಕೆ' ಎಂದಿದ್ದಾರೆ. ಅಲ್ಲದೇ ದ್ವಿಭಾಷಿಕತೆ ಎನ್ನುವುದು ಒಂದು ಸಾಮಾಜಿಕ ವಿದ್ಯಾಮಾನವೆಂಬಂತೆ ಸಾಮಾಜಿಕ ಸಂಘರ್ಷ ವಿನಿಮಯ ಸಮಾವೇಶಗಳನ್ನು ಸೂಚಿಸುವ ವಿಷಯವೆಂಬಂತೆ ಸಮಾಜ ವಿಜ್ಞಾನಿಗಳು ಗ್ರಹಿಸುತ್ತಾರೆ. ಮ್ಯಾಕನ್ ಮಾರ್ (೧೯೬೭-೬೯) ದ್ವಿಭಾಷಿಕತೆಯನ್ನು ಅಳೆಯಲು ಹಲವಾರು ಪರೀಕ್ಷೆಗಳನ್ನು ಬಳಸಿದನು. ಅವುಗಳೆಂದರೆ ೧. ರೇಟಿಂಗ್ ಸ್ಕೇರ್ಸ್ ೨. ಫ್ಲೋಯೆನ್ಸಿ ಟೆಸ್ಟ್ ೩. ಫ್ಲೆಕ್ಸಿಬಿಲಿಟಿ ಟೆಸ್ಟ್ಸ್ ಮತ್ತು ೪. ಡೊಮ್ಯೊನೆನ್ಸ ಟೆಸ್ಟ್ಸ ಈ ಪರೀಕ್ಷೆಗಳನ್ನು ಒಳಗೊಂಡಿದ್ದವು.

ಕೊಪರ್ ೧೯೭೧ ಸ್ಪ್ಯಾನಿಶ್ ಇಂಗ್ಲೀಶ್ ದ್ವಿಭಾಷಿಕರನ್ನು ಅಧ್ಯಯನ ಮಾಡುವಾಗ ರೇಟಿಂಗ್‌ಸ್ಕಲ್ ಜೊತೆಗೆ ಆವರಣಗಳಲ್ಲಿ ಭಾಷಾ ಬಳಕೆಯ ವ್ಯತ್ಯಾಸವನ್ನು ಗುರುತಿಸಿದ್ದಾರೆ. ಯಾವುದೇ ಸಮಾಜದಲ್ಲಿ ಎರಡು ಭಾಷೆಗಳು ಬಳಕೆಯಾಗುತ್ತಿದ್ದರೆ, ಆ ಎರಡು ಭಾಷೆಗಳಿಗೆ ಬೇರೆ ಬೇರೆ ಕಾರ್ಯಗಳು, ಸ್ಥಾನಮಾನಗಳು ಇರುತ್ತವೆ. ಆದ್ದರಿಂದ ಆ ಎರಡು ಭಾಷೆಗಳನ್ನೂ ದ್ವಿಭಾಷಿಕರು ಸಮ ಪ್ರಮಾಣದಲ್ಲಿ ಬಳಸಲಾರರು. ದ್ವಿಭಾಷಿಕತೆಯ ಬಗೆಗೆ ಅಧ್ಯಯನ ನಡೆದಂತೆಲ್ಲ ಹೊಸ ಹೊಸ ವಿಧಾನಗಳಿಂದ ದ್ವಿಭಾಷಿಕತೆ ಪ್ರಮಾಣವನ್ನು ಪರಿಣಾಮವನ್ನು ಗುರುತಿಸಲಾಗಿದೆ.

ಭಾರತದ ಸಂದರ್ಭದಲ್ಲಿ ದ್ವಿಭಾಷಿಕತೆಯು ಸಹಜವಾದ ಪ್ರಕ್ರಿಯೆಯಾಗಿದೆ. ಅನೇಕ ಶತಮಾನಗಳಿಂದಲೂ ದ್ವಿಭಾಷಿಕತೆ ಭಾರತದ ಸಂದರ್ಭದಲ್ಲಿದ್ದು, ಸಾಹಿತ್ಯ ಗ್ರಂಥಗಳಲ್ಲಿ ದ್ವಿಭಾಷಿಕತೆಯು ಬಳಕೆಯಾಗಿರುವುದು ಕಾಣುತ್ತದೆ. ಆದರೆ ಸಮುದಾಯವೊಂದರಲ್ಲಿ ದ್ವಿಭಾಷಿಕತೆಯು ಹೇಗೆ ನೆಲೆಗೊಂಡಿತ್ತೆಂಬುದಕ್ಕೆ ಆಧಾರಗಳಿಲ್ಲ. ಭಾರತದಲ್ಲಿ ಬಹುಮಟ್ಟಿಗೆ ಗಡಿ ಪ್ರದೇಶಗಳಲ್ಲಿ ದ್ವಿಭಾಷಿಕತೆ ಹೆಚ್ಚಾಗಿ ಉಂಟಾಗಿದ್ದರೂ ಇತರೆಡೆಗಳಲ್ಲಿಯೂ ದ್ವಿಭಾಷಿಕತೆಯೂ ಆಧುನೀಕರಣ, ಉದಾರೀಕರಣ, ಜಾಗತೀಕರಣ ಪ್ರಕ್ರಿಯೆಗಳಿಂದಾಗಿ ಭಾರತದಲ್ಲಿ ಯಾವುದೇ ಭಾಷೆಯ ಭಾಷಿಕರು ದ್ವಿಭಾಷಿಕ, ಬಹುಭಾಷಿಕರಾಗುವ ಅವಶ್ಯಕತೆಗಳು ಮೊದಲಿಗಿಂತಲೂ ಇಂದು ಹೆಚ್ಚಾಗಿವೆ. ಭಾರತದಲ್ಲಿ ದ್ವಿಭಾಷಿಕತೆಯು

ಉಂಟಾಗುವುದು ಮುಖ್ಯವಾಗಿ ಎರಡು ವಿಧಗಳಲ್ಲಿ ಒಂದು ಸಾಮಾಜೀಕರಣದಿಂದ, ವಲಸಿಗರಿಂದಾಗಿ ಅಥವಾ ಶಿಕ್ಷಣದಿಂದಾಗಿ. ಸಾಮಾಜೀಕರಣದಿಂದಾಗಿ ಉಂಟಾಗಿರುವ ದ್ವಿಭಾಷಿಕತೆಯು ಅಧಿಕ ಪ್ರಮಾಣದಲ್ಲಿದೆ. ಇದು ಗಡಿ ಭಾಗಗಳಲ್ಲಿ ನೆಲಸಿರುವ ಭಾಷಿಕರಿಂದಾಗಿ, ವ್ಯಾಪಾರಕ್ಕಾಗಿ, ವೈವಾಹಿಕ ಸಂಬಂಧಗಳಿಗಾಗಿ ರಾಜಕೀಯ ಕಾರಣಗಳಿಗಾಗಿ ಹೀಗೆ ಅನೇಕ ಕಾರಣಗಳಿಗೆ ಉಂಟಾಗಿರುವುದರಿಂದ ಈ ದ್ವಿಭಾಷಿಕತೆ ಹೆಚ್ಚಾಗಿ ಸಾಮಾಜೀಕರಣದಿಂದಲೇ ಉಂಟಾಗುತ್ತದೆ. ಜಾಗತೀಕರಣ ಸಂದರ್ಭದಲ್ಲಿ ಸಮಾಜದಲ್ಲಿ ಉಂಟಾಗುತ್ತಿರುವ ಹಲವು ರೀತಿಯ ಬದಲಾವಣೆಯಿಂದಾಗಿ ಭಾಷಿಕರು ಶಿಕ್ಷಣದ ಸಂದರ್ಭಗಳಿಗೆ ಹೆಚ್ಚು ಒಳಗಾಗುತ್ತಿರುವುದರಿಂದ ಶೈಕ್ಷಣಿಕತೆಯಿಂದಾಗಿ ದ್ವಿಭಾಷಿಕರಾಗುವುದು ಇಂದಿನ ದಿನಗಳಲ್ಲಿ ಹೆಚ್ಚಾಗಿ ಕಾಣುತ್ತದೆ.

ಭಾರತದ ಸಂದರ್ಭದಲ್ಲಿ ೧೯೬೧ರ ಜನಗಣತಿಯ ವರದಿಯೂ ಪ್ರಕಟವಾದ ನಂತರ ಭಾರತದಲ್ಲಿ ದ್ವಿಬಹುಭಾಷಿಕತೆಯ ಬಗೆಗೆ ವಿಶೇಷವಾದ ಗಮನವನ್ನು ಹರಿಸಲಾಯಿತು. ಇಂಗ್ಲೀಶ್ ಭಾಷೆಯನ್ನು ಕಲಿತು ದ್ವಿಭಾಷಿಕರಾಗುವ ಸಂದರ್ಭಗಳು ನಗರಗಳಲ್ಲೆ ಅಧಿಕವಾಗಿವೆ. ಬುಡಕಟ್ಟು ಜನಾಂಗಗಳಲ್ಲಿ ಹಾಗೂ ವಲಸಿಗ ಭಾಷಾ ಅಲ್ಪಸಂಖ್ಯಾತರಲ್ಲಿ ಹೆಚ್ಚು ದ್ವಿಭಾಷಿಕರಾಗಿರುವುದನ್ನು ಅನೇಕ ಅಧ್ಯಯನಗಳು ಮತ್ತು ಭಾರತದ ಜನಗಣತಿಯ ಅಂಕಿ ಅಂಶಗಳು ತಿಳಿಸುತ್ತವೆ.

ಭಾರತದಲ್ಲಿ ದ್ವಿಭಾಷಾ ಸಂದರ್ಭಗಳನ್ನು ಕುರಿತಂತೆ ನಡೆದ ಅಧ್ಯಯನಗಳಲ್ಲಿ ಗುಂಫರ್ಜ(೧೯೬೪) ಅವರು ಹಿಂದಿ ಮತ್ತು ಪಂಜಾಬಿ ಭಾಷೆಯನ್ನು ಕುರಿತಂತೆ ಮಾಡಿದ ಅಧ್ಯಯನದಲ್ಲಿ ನುಡಿ ಮಿಶ್ರಣ ನುಡಿ ಪಲ್ಲಟ ಭಾಷಾ ಪ್ರಕ್ರಿಯೆಗಳನ್ನು ಗುರುತಿಸಲಾಗಿದೆ. ಗುಂಫರ್ಜ್ ಮತ್ತು ಮಿಲ್ಸನ್ (೧೯೭೧) ಅವರ ಕನ್ನಡ ಮರಾಠಿ, ಉರ್ದು ಭಾಷಾ ಸನ್ನಿವೇಶಗಳನ್ನು ಕುರಿತು ಅಧ್ಯಯನ ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಕುಪ್ಪವಾಕ್ ಗ್ರಾಮದಲ್ಲಿನ ಕನ್ನಡ ಮರಾಠಿ, ಉರ್ದು ಭಾಷಿಕರು ಬಳಸುವ ಭಾಷೆಯಿಂದಾಗಿ ಕನ್ನಡ ಭಾಷೆಯ ವ್ಯಾಕರಣ ಹಂತದಲ್ಲಾಗಿರುವ ಪ್ರಭಾವವನ್ನು ಈ ಅಧ್ಯಯನದಲ್ಲಿ ತೋರಿಸಿದ್ದಾರೆ. ದ್ವಿಭಾಷಿಕತೆಯನ್ನು ವಿವರಿಸುವ ಬಹುಪಾಲು ಬರೆಹಗಳು ಈ ಅದ್ಯಯನವನ್ನು ಮತ್ತೆ ಮತ್ತೆ ಉಲ್ಲೇಖಿಸುತ್ತವೆಯಲ್ಲದೆ, ಮುಂದಿನ ದ್ವಿಭಾಷಿಕ ಅಧ್ಯಯನಗಳಿಗೆ ಇದು ಪ್ರೇರಣೆಯನ್ನು ಒದಗಿಸಿದೆ. ಪಿ.ಬಿ.ಪಂಡಿತ್ (೧೯೭೨) ಅವರು ತಮಿಳುನಾಡಿಗೆ ವಲಸೆ ಬಂದು ನೆಲೆಸಿರುವ ಸೌರಾಷ್ಟ್ರೀಯರ ಬಗೆಗಿನ ಅಧ್ಯಯನದಲ್ಲಿ ಸೌರಾಷ್ಟ್ರೀಗಳು ಮಗ್ಗ ವ್ಯಾಪಾರಿಗಳಾಗಿದ್ದು ಇವರು ತಮಿಳು ಭಾಷೆಗೆ ಹೆಚ್ಚಿನ ಪಲ್ಲಟವನ್ನು ಹೊಂದಿದೆ. ತಮ್ಮ ಭಾಷೆಯನ್ನು ಉಳಿಸಿಕೊಂಡಿರುವುದರ ಜೊತೆಗೆ ಮಧುರೈ ಆಸುಪಾಸಿನಲ್ಲಿ ಮಾತಾನಾಡುವ ಸೌರಾಷ್ಟ್ರ ಭಾಷಿಕರು ತಮಿಳು ವ್ಯಾಕರಣ ಮಾದರಿಗಳನ್ನು ಸ್ವೀಕರಿಸುವುದನ್ನು ವಿಶದೀಕರಿಸುತ್ತವೆ. ಚಿಕ್ಕರಮನೆ(೧೯೭೧) ಅವರು ಮಹಾರಾಷ್ಟ್ರ ಮೈಸೂರು ಗಡಿ ಭಾಗದಲ್ಲಿ ಕೊಂಕಣಿ, ಕನ್ನಡ, ಮರಾಠಿ ಮನೆ ಭಾಷೆಯಾಗಿರುವ ಮಕ್ಕಳಲ್ಲಿ ತಮ್ಮ ಭಾಷೆಯಲ್ಲದ ಭಾಷೆಯಲ್ಲಿ ಶಿಕ್ಷಣವನ್ನು

ಕಲಿಯುವ ಸಂದರ್ಭಗಳಲ್ಲಿ ಉಂಟಾಗುವ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ದ್ವಿಭಾಷಿಕತೆಯನ್ನು ಕುರಿತಂತೆ ಕನ್ನಡದ ಸಂದರ್ಭದಲ್ಲಿ ಅಧ್ಯಯನಗಳು ಅತ್ಯಂತ ಕಡಿಮೆ. ಲೇಖನಗಳನ್ನು, ಕೆಲವು ಅಧ್ಯಯನಗಳನ್ನು ಇಲ್ಲಿ ಹೆಸರಿಸಬಹುದಾಗಿದೆ.

ಯು.ಪಿ.ಉಪಾಧ್ಯಾಯ(೧೯೭೧) ಅವರು 'ಬೀದರ್ ಜಿಲ್ಲೆಯ ಕನ್ನಡವನ್ನು ಕುರಿತಂತಹ ಸಂಶೋಧನಾ ಲೇಖನದಲ್ಲಿ ಉರ್ದು ಆಡಳಿತ ಭಾಷೆಯಾಗಿದ್ದ ಬೀದರ್ ಜಿಲ್ಲೆಯಲ್ಲಿ ಕನ್ನಡದ ಮೇಲೆ ಆಗಿರುವ ಉರ್ದುವಿನ ಪ್ರಭಾವವನ್ನು ವ್ಯಾಕರಣ ಹಂತದಲ್ಲಿ ಗಮನಿಸಿದ್ದಾರೆ. ಮಹೇಶ ವ್ಹಿ.ನಾಡಕರ್ಣಿ(೧೯೭೫)ರವರು ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಂಕಣಿ, ಕನ್ನಡ ದ್ವಿಭಾಷಿಕತೆಯನ್ನು ಕುರಿತಂತಹ ಸಂಶೋಧನೆಯಲ್ಲಿ ಲೇಖನದಲ್ಲಿ ಕನ್ನಡ ಕೊಂಕಣಿ ಸಂಪರ್ಕದಿಂದಾಗಿ ಕೊಂಕಣಿಯಲ್ಲಿನ ಸಾಪೇಕ್ಷ ರಚನೆಗಳು ಕನ್ನಡದಂತೆ ಬದಲಾಗಿರುವುದು ತಿಳಿದುಬರುತ್ತದೆ. ಡಾ.ಕೃಷ್ಣ ಪರಮೇಶ್ವರ ಭಟ್ಟ್(೧೯೮೫) ಅವರು ಕೋಲಾರ ಜಿಲ್ಲೆಯ ಕನ್ನಡ-ತೆಲುಗು ದ್ವಿಭಾಷಿಕತೆಯನ್ನು ಕುರಿತಂತೆ ಮಾಡಿರುವ ಅಧ್ಯಯನವು ಅತ್ಯಂತ ಪ್ರಮುಖವಾದದ್ದು. ಇಲ್ಲಿ ತೆಲುಗು ಭಾಷೆಯ ಪ್ರಭಾವ ಕನ್ನಡ ಭಾಷೆಯ ಮೇಲಾಗಿರುವುದನ್ನು ವ್ಯಾಕರಣ ಹಂತದಲ್ಲಿ ಗುರುತಿಸಿದ್ದಾರೆ. ಹೀಗೆ ಗುರುತಿಸುವಾಗ ಬ್ರಾಹ್ಮಣ-ಬ್ರಾಹ್ಮಣೇತರ ಪರಿಚಿತ-ಅಪರಿಚಿತ ವಿದ್ಯಾವಂತ-ಅವಿದ್ಯಾವಂತ ಎಂಬುದಾಗಿ ವಿಭಾಗ ಮಾಡಿಕೊಂಡು ಈ ಸಾಮಾಜಿಕ ಅಂಶಗಳನ್ನು ಭಾಷಿಕರ ಭಾಷೆಗಳ ಸಮಾವೇಶದಲ್ಲಿ ಉಂಟಾಗಿರುವ ವ್ಯತ್ಯಾಸವನ್ನು ಗುರುತಿಸಿದ್ದಾರೆ.

ಕರ್ನಾಟಕ ಭಾರತಿ ವಿಶೇಷ ಸಂಚಿಕೆಯಲ್ಲಿ ಮಹಾರಾಷ್ಟ್ರದ ಕನ್ನಡ ಆಂಧ್ರದ ಕನ್ನಡ, ಕೇರಳದ ಕನ್ನಡ, ತಮಿಳುನಾಡಿನ ಕನ್ನಡದ ಬಗೆಗೆ ಕೆ.ಜಿ.ಶಾಸ್ತ್ರಿ, ಜೆ.ರಾಮಸ್ವಾಮಿ, ಬಿ.ರಾಮಚಂದ್ರರಾವ್ ಇವರು ಬರೆದಿರುವ ಲೇಖನಗಳು ಕನ್ನಡ-ತೆಲುಗು, ಕನ್ನಡ-ಮರಾಠಿ, ಕನ್ನಡ-ತಮಿಳು, ಕನ್ನಡ-ಮಲೆಯಾಳಂ ದ್ವಿಭಾಷಾ ಸಂದರ್ಭಗಳ ಬಗೆಗೆ ಕೆಲವು ಮಾಹಿತಿಗಳನ್ನು ತಿಳಿಸುತ್ತವೆ.

ಎಸ್.ಎಸ್.ಅಂಗಡಿ(೨೦೦೦) ಕನ್ನಡ-ಮರಾಠಿ ದ್ವಿಭಾಷಿಕತೆಯನ್ನು ಕುರಿತು ಸ್ಥೂಲ ಸ್ವರೂಪವನ್ನು ಇದರಲ್ಲಿ ದ್ವಿಭಾಷಿಕತೆಯ ವಿವರಣೆ ನೀಡಿದ್ದಾರೆ. "ಆಂಧ್ರ-ಕರ್ನಾಟಕದ ಸರಹದ್ದಿನಲ್ಲಿ ಕನ್ನಡ" ಬಿ.ರಾಮಚಂದ್ರರಾವ್ ಅವರ ಲೇಖನದಲ್ಲಿ ಕನ್ನಡ-ತೆಲುಗು ದ್ವಿಭಾಷಾ ಸಂದರ್ಭದ ಬಗೆಗೆ ವಿವರವಾದ ಮಾಹಿತಿಯನ್ನು ಕೊಡುತ್ತಾರೆ.

ಡಾ.ಎಂ.ಭಾಗ್ಯಲಕ್ಷ್ಮಿ(೨೦೦೭) ಬಳ್ಳಾರಿ ಜಿಲ್ಲೆಯ ದ್ವಿಭಾಷಿಕರನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಇದರಲ್ಲಿ ದ್ವಿಭಾಷಿಕತೆಯ ಸಂರಚನೆ ದ್ವಿಭಾಷಿಕತೆಯ ಕಾರಣಗಳು ಪರಿಣಾಮಗಳು, ದ್ವಿಭಾಷಿಕತೆ ಉಂಟಾಗುವ ರೀತಿ ಮುಂತಾದ ವಿಷಯಗಳನ್ನು ವಿಶ್ಲೇಷಿಸಿದ್ದಾರೆ.

'ಕೋಲಾರ ಜಿಲ್ಲೆಯ ದ್ವಿಭಾಷಿಕತೆಯ ನೆಲೆಗಳು' ಎಂಬ ಅಧ್ಯಯನವನ್ನು ಕೆ.ನಾರಾಯಣ ಸ್ವಾಮಿ(೨೦೦೭) ಅವರು ಸಾಮಾಜಿಕ ಭಾಷಾ ವಿಜ್ಞಾನದ ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಇವರ ಅಧ್ಯಯನದಲ್ಲಿ ಸಾಮಾಜಿಕ ಭಾಷಾ ವಿಜ್ಞಾನ ಹಾಗೂ ದ್ವಿಭಾಷಿಕತೆಯ ಸಂಬಂಧಗಳನ್ನು ಕುರಿತು ಕೋಲಾರ ಜಿಲ್ಲೆಯ ದ್ವಿಭಾಷಿಕತೆಯ ಸಾಮಾಜಿಕ, ಭೌಗೋಳಿಕ ಪರಿಸರ ಭಾಷಿಕ ಪರಿಕಲ್ಪನೆಯಲ್ಲಿ ವಿವೇಚಿಸಿದ್ದಾರೆ. ಇಲ್ಲಿನ ದ್ವಿಭಾಷಿಕತೆ, ರಾಚನಿಕವಾಗಿರುವ ಸ್ವರೂಪ ಮತ್ತು ಶೈಕ್ಷಣಿಕ ಸಂದರ್ಭಗಳಲ್ಲಿ ದ್ವಿಭಾಷಿಕರ ಮಕ್ಕಳ ಬೆಳವಣಿಗೆ ಕಾರಣ ಹಾಗೂ ಪರಿಣಾಮಗಳನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

'ದ್ವಿಭಾಷಿಕತೆ'ಯನ್ನು ಕುರಿತು ಡಾ.ಕೆ.ವಿನಾರಾಯಣ ಅವರು ಅಧ್ಯಯನ ಮಾಡಿದ್ದಾರೆ. ಇದು ದ್ವಿಭಾಷಿಕರನ್ನು ಕುರಿತು ದ್ವಿಭಾಷಾ ಪರಿಸರವನ್ನು ಚರ್ಚಿಸಿದ್ದಾರೆ. ಇದರಲ್ಲಿ ದ್ವಿಭಾಷಿಕರೆಂದರೆ ಯಾರು? ದ್ವಿಭಾಷಿಕತೆಯ ಪ್ರಕಾರಗಳು, ದ್ವಿಭಾಷೆ ಮತ್ತು ಸಮಾಜ, ನುಡಿ ಬೆರಕೆ ಗುಡಿ ಜಿಗಿತ ಮುಂತಾದ ವಿಷಯಗಳನ್ನು ಕುರಿತು ಉದಾಹರಣೆಗಳೊಂದಿಗೆ ಸೂಕ್ಷ್ಮ ವಿಚಾರಗಳನ್ನು ತಿಳಿಸಿದ್ದಾರೆ.

'ಬಳ್ಳಾರಿ ಬಗರದ ದ್ವಿಭಾಷಿಕತೆಯ ವೈವಿಧ್ಯ' ಎಂಬ ಕಿರು ಪ್ರಬಂಧವನ್ನು ಎಸ್ .ಮಂಜುನಾಥ(೨೦೦೭) ಅವರು ಮಾಡಿರುವ ಅಧ್ಯಯನವು ತೆಲುಗು ಮತ್ತು ಉರ್ದು ಭಾಷಿಕರನ್ನು ಅನುಲಕ್ಷಿಸಿ ಅಧ್ಯಯನ ಮಾಡಿದ್ದಾರೆ.

ಕನ್ನಡದಲ್ಲಿ ಹೀಗೆ ಅನೇಕ ಬಿಡಿ ಲೇಖನಗಳು ಮತ್ತು ಕಿರು ಪ್ರಬಂಧಗಳ ಅಧ್ಯಯನ ಆಗಿರುವುದು ಕಂಡುಬರುತ್ತದೆ. ಇಲ್ಲಿ ಕೆಲವು ಮುಖ್ಯವಾದವುಗಳನ್ನು ಮಾತ್ರ ಹೆಸರಿಸಲಾಗಿದೆ.

ಭಾರತದಲ್ಲಿ ಅದರಲ್ಲೂ ಕನ್ನಡದಲ್ಲಿ ದ್ವಿಭಾಷಿಕತೆ ಕುರಿತು ಅಧ್ಯಯನಗಳು ತೀರಾ ಕಡಿಮೆ. ಬದಲಾಗುತ್ತಿರುವ ಇಂದಿನ ಸಾಮಾಜಿಕ ಸನ್ನಿವೇಶಗಳಲ್ಲಿ ಭಾಷಿಕರಲ್ಲಿ ಬದಲಾವಣೆಗಳು ಹುಟ್ಟುತ್ತಿದ್ದು ಬೇರೆ ಬೇರೆ ಭಾಷೆಗಳ ಸಂಪರ್ಕದಿಂದಾಗಿ ದ್ವಿಭಾಷಿಕ ಸನ್ನಿವೇಶಗಳು ಸೃಷ್ಟಿಯಾಗುತ್ತಿದ್ದು ದ್ವಿಭಾಷಾ ಸಂದರ್ಭಗಳ ಬಗೆಗೆ ಹೆಚ್ಚಿನ ಅಧ್ಯಯನ ಆಗುವುದು ಅಗತ್ಯವಿದೆ.

ಅಡಿಟಿಪ್ಪಣಿಗಳು

೧. Apte M.L and Meharotra, 1998 Interrogating'Indian Bilirgnilism in a Gupta R.S and Kailash 1998. **Studies of Indain Sociolinguistics,** creative Books New Delhi.

೨. ಕೃಷ್ಣಪರಮೇಶ್ವರ ಭಟ್ಟ ೧೯೯೫, ಪು.ಸಂ.೨, ಕನ್ನಡ-ತೆಲುಗು ದ್ವಿಭಾಷಿಕತೆಯ ಅಧ್ಯಯನ, ಕನ್ನಡ ಸಾಹಿತ್ಯಪರಿಷತ್, ಬೆಂಗಳೂರು

* 'ಡಾ.ಎಂ.ಭಾಗ್ಯಲಕ್ಷ್ಮಿ, ದ್ವಿಭಾಷಿಕರು' ಪು.ಸಂ.೪೫

ಅಧ್ಯಾಯ ೩

ರಾಯಚೂರು ಮಾನ್ವಿ ಪರಿಸರದ ಐತಿಹಾಸಿಕ ಹಿನ್ನೆಲೆ

೩.೧. ಚಾರಿತ್ರಿಕ

೩.೨. ರಾಜಕೀಯ

೩.೩. ಭೌಗೋಳಿಕ

೩.೪. ಭಾಷಿಕ ಪರಿಸರ

೩

ರಾಯಚೂರು ಮಾನ್ವಿ ಪರಿಸರದ ಐತಿಹಾಸಿಕ ಹಿನ್ನೆಲೆ

ಪ್ರಸ್ತಾವನೆ

ರಾಯಚೂರು ಜಿಲ್ಲೆಯ ಇತಿಹಾಸವು ಮಹತ್ವಪೂರ್ಣವಾದದ್ದು ಮತ್ತು ವಿಶಿಷ್ಟತೆಯಿಂದ ಕೂಡಿದ್ದಾಗಿದೆ. ಇಲ್ಲಿನ ಇತಿಹಾಸವು ನಮಗೆ ಅಧ್ಯಯನಕ್ಕೆ ಅನೇಕ ಪೂರಕ ಅಂಶಗಳನ್ನು ಒದಗಿಸುತ್ತದೆ. ಪ್ರಾಚೀನ ಇತಿಹಾಸದ ಮೂಲಾಧಾರಗಳಾದ, ಶಾಸನಗಳು, ನಾಣ್ಯಗಳು ಶಿಲ್ಪಕಲೆಗಳು ಹಸ್ತಪ್ರತಿಗಳು ಮುಂತಾದವುಗಳನ್ನು ಅಧ್ಯಯನ ಮಾಡಬೇಕಾದರೆ ಮುಖ್ಯವಾಗಿ ಶಾಸನಗಳು ಮತ್ತು ಹಸ್ತಪ್ರತಿಗಳ ಭಾಷೆಯನ್ನು ತಿಳಿಯಬೇಕಾಗುತ್ತದೆ. ಭಾಷೆಯ ಮೂಲಕ ಅದರಲ್ಲಿರುವ ದಾಖಲೆಗಳನ್ನು ಅರ್ಥ ಮಾಡಿಕೊಂಡು ಅಲ್ಲಿನ ಸಾಮಾಜಿಕ, ರಾಜಕೀಯ ಚರಿತ್ರೆಯ ಅಂಶಗಳನ್ನು ಖಚಿತ ಪಡಿಸಿಕೊಳ್ಳಲಾಗುವುದು.

ರಾಯಚೂರಿನ ಇತಿಹಾಸದಲ್ಲಿ ಅನೇಕ ರಾಜ ಮನೆತನಗಳು ಆಳ್ವಿಕೆ ನಡೆಸಿದ್ದಾರೆ. ಅವರು ತಮ್ಮ ಆಡಳಿತದ ಭಾಷೆಯನ್ನು ಸಾರ್ವಜನಿಕರ ಮೇಲೆ ಹೇರುತ್ತಲೇ ಬಂದಿದ್ದಾರೆ. ಉದಾ. ಹೈದ್ರಾಬಾದ್ ನಿಜಾಮನ ಕಾಲದಲ್ಲಿ ಉರ್ದು ಭಾಷೆಯ ಪ್ರಭಾವ ಉನ್ನತ ಮಟ್ಟದಲ್ಲಿದ್ದುದನ್ನು ಕಾಣಬಹುದು. ಈ ಉರ್ದು ಭಾಷೆಯು ಮೂಲ ಕನ್ನಡಿಗರ ಭಾಷೆಗೆ ರಚನಾತ್ಮಕವಾಗಿ ಯಾವ ರೀತಿ ಬದಲಾವಣೆ ತಂದಿದೆ ಮತ್ತು ಈ ಹಂತದಲ್ಲಿ ಕನ್ನಡದ ಮೂಲ ಭಾಷೆಯ ಅಥವಾ ದ್ರಾವಿಡ ಭಾಷೆಯ ಅಂಶಗಳು ಉಳಿಸಿಕೊಂಡು ಬಂದಿದೆಯೋ ಇಲ್ಲವೋ ಎನ್ನುವುದನ್ನು ಖಚಿತಪಡಿಸಿಕೊಳ್ಳಬಹುದು. ಮತ್ತು ಹಲವಾರು ವರ್ಷಗಳಿಂದ ಬೆಳೆಸಿಕೊಂಡು ಬಂದಿರುವಂಥ ಮೌಖಿಕ ಪರಂಪರೆಯಲ್ಲಿ ಆಗಿರುವಂತೆ ವ್ಯಾತ್ಯಾಸಗಳು ಮತ್ತು ಈಗ ಬಳಸುತ್ತಿರುವ ಮಾತಿನ ಸಂದರ್ಭದ ಬದಲಾವಣೆಯನ್ನು ಗಮನಿಸುವುದರೊಂದಿಗೆ ಮಾತಿನ ಸಂದರ್ಭಗಳು ರಚನೆ ಬಳಕೆಯ ವಿನ್ಯಾಸಗಳನ್ನು ತಿಳಿಯಬಹುದು.

ರಾಯಚೂರು ಪ್ರದೇಶದ ಕೆಲ ಕಾಲ ಘಟ್ಟದಲ್ಲಿ ಬೇರೆ ಅರಸು ಮನೆತನಗಳ ಆಳ್ವಿಕೆಗೆ ಒಳಪಟ್ಟಿದ್ದರಿಂದ ಅಲ್ಲಿನ ಭಾಷೆಯನ್ನು ಜನರು ಒಪ್ಪಿದ್ದರಿಂದ ಅಲ್ಲಿ ಹೆಚ್ಚಾಗಿ ಕನ್ನಡದಲ್ಲಿ ಹೇಳಿಕೊಳ್ಳುವಂತ ಸಾಹಿತ್ಯ ಹುಟ್ಟಲಿಲ್ಲ ನಂತರದಲ್ಲಿ ಈ ಸಾಹಿತ್ಯಕ ಬದಲಾವಣೆಯಾಗಿ ಈ ಸಾಹಿತ್ಯಕ್ಕೆ ಪೂರಕವಾಗಿ ಅಂಶಗಳನ್ನು ಗಮನಿಸಬಹುದು. ಅಂದರೆ ಸಾಹಿತ್ಯಕ ಐತಿಹಾಸಿಕ ರಾಜಕೀಯ ಅಂಶಗಳನ್ನು ಈ ಆಧಾರದ ಮೇಲೆ ತಿಳಿದುಕೊಳ್ಳಲು ಇಲ್ಲಿನ ರಾಜಕೀಯ ಆಡಳಿತದ ಮೂಲಕ ಭಾಷೆಯನ್ನು ಅಭ್ಯಾಸಿಸಬಹುದಾಗಿದೆ.

೩.೧. ಚಾರಿತ್ರಿಕ

ಐತಿಹಾಸಿಕ ಘನತೆಯಿಂದ ಕೂಡಿರುವ, ಪ್ರಸಿದ್ಧವಾದ ಪ್ರದೇಶ ರಾಯಚೂರು ಜಿಲ್ಲೆಯಾಗಿದೆ. ಭಾರತದ ಚರಿತ್ರೆಯಲ್ಲಿ ಕರ್ನಾಟಕದ ಚರಿತ್ರೆಯಲ್ಲಿ ರಾಯಚೂರು ಜಿಲ್ಲೆ ವಹಿಸುವ ಪಾತ್ರವು ಚಿರಸ್ಮರಣೀಯವಾದದ್ದು. ಈ ಜಿಲ್ಲೆಯ ಐತಿಹಾಸಿಕ ಹಿನ್ನೆಲೆಯು ಕ್ರಿ.ಪೂ.೨೦೦೦ ವರ್ಷಗಳಷ್ಟು ಹಳೆಯದಾಗಿದೆ ಹಳೆಯ ಶಿಲಾಯುಗದ ಸಂಸ್ಕೃತಿಯಿಂದ ಪ್ರಾರಂಭವಾಗಿ ಕರ್ನಾಟಕದ ಎಲ್ಲಾ ಮುಖ್ಯ ಅರಸು ಮನೆತನಗಳು ಆಳ್ವಿಕೆ ನಡೆಸಿದ್ದಾರೆ. ಬ್ರಿಟಿಷರ ಅಧಿಕಾರದ ವಿರುದ್ದ ಹಾಗೂ ಹೈದ್ರಾಬಾದ್ ನಿಜಾಮರ ದಬ್ಬಾಳಿಕೆ ಸರ್ಕಾರದ ವಿರುದ್ಧ ನಡೆದ ಸ್ವಾತಂತ್ರ ಸಂಗ್ರಮದಲ್ಲಿ ರಾಯಚೂರು ಮುಖ್ಯ ಪಾತ್ರವನ್ನು ವಹಿಸಿತ್ತು. ಜಿಲ್ಲೆಯ ಅನೇಕ ಭಾಗಗಳಲ್ಲಿ ದೊರೆತ ಶಿಲಾಶಾಸನಗಳು. ಅಳಿದುಳಿದು ನಿಂತಿರುವ ಕೋಟೆ-ಕೊತ್ತಲಗಳು ಹಾಗೂ ದೇವಸ್ಥಾನಗಳು ಈ ಜಿಲ್ಲೆಯ ಚಾರಿತ್ರಿಕ ಇತಿಹಾಸವನ್ನು ಹೇಳುತ್ತವೆ.

ರಾಯಚೂರು ಇಂದು ಜಿಲ್ಲಾ ಕೇಂದ್ರವಾಗಿದೆ. ರಾಯಚೂರಿಗೆ ಮುಂಚೆ ರಾಜಾವೂರ, ಪೆರ್ಮನರಾಚೂರು ಹಾಗೂ ರಾಚನೂರು ಎಂಬ ಹೆಸರಿತ್ತೆಂದು ಹೊಯ್ಸಳರ ಕಾಲದ ಕೆಲವು ಶಾಸನಗಳಿಂದ ತಿಳಿದುಬರುತ್ತದೆ. ಬೇಲೂರು ತಾಲೂಕಿನ ೧೧೬೧ನೇ ಇಸ್ವಿಗೆ ಹಾಗೂ ಒಂದನೇ ನರಸಿಂಹನ ಆಳ್ವಿಕೆಗೆ ಸಂಬಂಧಿಸಿದ ಹುಲಿಕೆರೆ ಶಾಸನದಲ್ಲಿ ಹೊಯ್ಸಳ ವಿಷ್ಣುವರ್ಧನ ದೊರೆಯು ಗೆದ್ದುಕೊಂಡ ಸ್ಥಳಗಳಲ್ಲಿ 'ರಾಚವೂರು' ಒಂದಾಗಿತ್ತೆಂದು ತಿಳಿದುಬರುತ್ತದೆ.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ೧೧೬೮ನೇ ಇಸ್ವಿ ಹಾಗೂ ಎರಡನೇ ಬಲ್ಲಾಳನ ಕಾಲಕ್ಕೆ ಸಂಬಂಧಿಸಿದ ಹಾಟ್ನಾ ಶಾಸನವು ವಿಷ್ಣುವರ್ಧನನು ಶೌರ್ಯದಿಂದ ಗೆದ್ದುಕೊಂಡ ಕೋಟೆಗಳಲ್ಲಿ "ಪೆರ್ಮನರಾಚವೂರು" ಮುಖ್ಯವಾಗಿತ್ತೆಂದು ಹೇಳಲಾಗಿದೆ. ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ೧೧೮೩ನೇ ಇಸ್ವಿಯ ಹೊಯ್ಸಳರ ಹಿರೇಹಳ್ಳಿ ಶಾಸನವು 'ರಾಚವೂರು' ವಿಷ್ಣುವರ್ಧನನು ಗೆದ್ದುಕೊಂಡ ಸ್ಥಳಗಳಲ್ಲಿ ಒಂದಾಗಿತ್ತೆಂದು ತಿಳಿದುಬರುತ್ತದೆ. 'ರಾಚ' ಇದನ್ನು ರಾಜ ಎಂಬ ಪದದಿಂದ ಆಯ್ದುಕೊಳ್ಳಲಾಗಿದೆ. "ರಾಚ" ಹಾಗೂ "ಊರು" ಸೇರಿ "ರಾಚನೂರು" ಎಂಬ ಹೆಸರು ಬಳಕೆಗೆ ಬಂದಿತು. ರಾಚನೂರು ರಾಜನ ವಾರು ಎಂಬ ಅರ್ಥವನ್ನು ಪಡೆದಿತ್ತು.

೧೩ನೇ ಶತಮಾನದಲ್ಲಿ ರಾಚವೂರು ಅಥವಾ ರಾಚನೂರು ಮೊಟಕುಗೊಂಡು ರಾಚೂರು ಎಂಬ ಪ್ರಸಿದ್ಧಿಗೆ ಬಂತು. ಈ ವಿಷಯವು ಕಾಕತೀಯ ದೊರೆ ಎರಡನೇ ಪ್ರತಾಪರುದ್ರನ ಕಾಲದ ರಾಯಚೂರು ಕೋಟೆಯ ಮೇಲೆ ಇರುವ ೧೨೯೪ನೇ ಇಸ್ವಿಯ ಶಾಸನದಿಂದ ಖಚಿತವಾಗಿದೆ. ಈ ಶಾಸನದಲ್ಲಿ ಈ ಸ್ಥಳಕ್ಕೆ 'ರಾಚೂರು' ಎಂದು ಕರೆಯಲಾಗಿದೆ. ರಾಚೂರು ಎಂಬ ಹೆಸರು ಈ ಜಿಲ್ಲೆಗೆ ವಿಜಯ ನಗರದ

ಕಾಲದಲ್ಲಿಯೂ ಮುಂದುವರೆದಿತ್ತು. ಆಂಧ್ರ ಪ್ರದೇಶದ ಮಹೆಬೂಬ ನಗರ ಜಿಲ್ಲೆಯ ಅಲಮ್ ಪುರದ ಎರಡು ಕನ್ನಡ ಶಾಸನಗಳು ಕೃಷ್ಣದೇವರಾಯನು ತನ್ನ ಉತ್ತರದ ದಿಗ್ವಿಜಯದಲ್ಲಿ 'ರಾಚೂರು'ನ್ನು ಗೆದ್ದುಕೊಂಡಿದ್ದನೆಂದು ತಿಳಿಸಿದೆ.

ಈ ಐತಿಹಾಸಿಕ ಹೆಸರು 'ರಾಚೂರು' ಅನೇಕ ಬದಲಾವಣೆಗಳನ್ನು ಹೊಂದಿ 'ರಾ' ಮತ್ತು ಚೂರುಗಳ ಮಧ್ಯೆ "ಯ" ಸೇರಿಕೊಂಡು ರಾಯಚೂರಾಗಿ ಮಾರ್ಪಡಾಗಿದೆ 'ರಾಯ' ಎಂದರೆ 'ರಾಜ' ರಾಯಚೂರು ಅಂದರೆ ರಾಜನ ಊರು ಎಂಬ ಅರ್ಥವನ್ನು ಹೊಂದಿದೆ. ಈ ಸ್ಥಳವು ಬಹಳ ಮುಖ್ಯವಾದ ಊರಾಗಿತ್ತೆಂಬುದು ತಿಳಿದುಬರುತ್ತದೆ. ಹಿಂದಿ ಹಾಗೂ ಉರ್ದು ಭಾಷೆಯಲ್ಲಿ 'ರಾಯ' ಪದಕ್ಕೆ ಸಮಾನಾದ ಪದವು 'ರೈ' ಎಂಬುದಾಗಿದೆ. ಉರ್ದು ಭಾಷೆಯ ಸ್ವಭಾವದಿಂದ ಈ ಸ್ಥಳಕ್ಕೆ "ರೈಚೂರು" ಹೆಸರು ಬಳಕೆಯಲ್ಲಿ ಬಂದಿರಬಹುದು.

ಮೌರ್ಯರ ಕಾಲದಿಂದ

ರಾಯಚೂರು ಜಿಲ್ಲೆಯ ಇತಿಹಾಸವು ಮೌರ್ಯರ ಕಾಲದಿಂದ ಪ್ರಾರಂಭವಾಗುತ್ತದೆ. ರಾಯಚೂರು ನಂದರ ಆಳ್ವಿಕೆಗೆ ಒಳಪಟ್ಟಿತ್ತೆಂದು ಊಹೆ ಇದೆ. ಈ ಜಿಲ್ಲೆಯಲ್ಲಿ ಅಶೋಕನ ಶಾಸನಗಳು ದೊರೆತಿವೆ. ಮಸ್ಕಿಯ ಶಾಸನದಲ್ಲಿ "ದೇವನಾಂಪ್ರೀಯ ಅಶೋಕ ಸಾ" ಎಂಬ ಹೆಸರನ್ನು ಕ್ರಿ.ಶ.೧೯೧೫ರಲ್ಲಿ ಬೇಡನ್ ಎಂಬ ಇಂಜಿನಿಯರರು ಮಸ್ಕಿಯ ಶಾಸನವನ್ನು ಶೋಧಿಸಿದ್ದಾರೆ. ಅಶೋಕನ ರಾಜ್ಯದ ಗಡಿ ಪ್ರಾಂತವಾದ ಸುವರ್ಣಗಿರಿಯು ರಾಯಚೂರು ಜಿಲ್ಲೆಯ ಕನಕಗಿರಿಯಾಗಿತ್ತೆಂದು ತಿಳಿದು ಬರುತ್ತದೆ. (ಇದು ಈಗ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿ ಬರುತ್ತದೆ.)

ಕ್ರಿ.ಶ.೫ನೇ ಶತಮಾನದಲ್ಲಿ ರಾಯಚೂರು ಜಿಲ್ಲೆ ಬನವಾಸಿ ಕದಂಬರ ಆಡಳಿತಕ್ಕೆ ಒಳಪಟ್ಟಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಕರಡಿಕಲ್ ಶಾಸನವು ರಾಯಚೂರಿನ ಭಾಗಗಳಾದ ಮುದ್ಗಲ್ ಹಾಗೂ ಕರಡಿಕಲ್ ಗಳು ಕದಂಬರ ಆಡಳಿತಕ್ಕೆ ಸಂಬಂಧಿಸಿದ್ದನ್ನು ತಿಳಿಸುತ್ತದೆ. ಬಾದಾಮಿಯ ಚಾಲುಕ್ಯರು ರಾಯಚೂರು ಜಿಲ್ಲೆಯ ಮೇಲೆ ಆಡಳಿತವನ್ನು ನಡೆಸಿದ್ದರು. ಐಹೊಳೆ ಶಾಸನವು ಎರಡನೇ ಪುಲಿಕೇಶಿಯು ಪಲ್ಲವರನ್ನು ಸೋಲಿಸಿ ರಾಯಚೂರನ್ನು ವಶಪಡಿಸಿಕೊಂಡಿದ್ದನೆಂದು ತಿಳಿಸಿದೆ.

ಕ್ರಿ.ಶ.೯೭೩ರ ಸುಮಾರಿಗೆ ರಾಷ್ಟ್ರಕೂಟರ ಕೊನೆಯ ಅರಸನಾದ ಎರಡನೇ ಕರ್ಕನನ್ನು ಸೋಲಿಸಿ ಚಾಲುಕ್ಯ ೨ನೇ ತೈಲಪನು ಕಲ್ಯಾಣದಲ್ಲಿ ತನ್ನ ಸಾರ್ವಭೌಮ ಅಧಿಕಾರವನ್ನು ಸ್ಥಾಪಿಸಿದ್ದನು. ಕಲ್ಯಾಣದ ಚಾಲುಕ್ಯರ ಅನೇಕ ಶಾಸನಗಳು ರಾಯಚೂರು ಜಿಲ್ಲೆಯ ಮಾನ್ವಿ, ಲಿಂಗಸ್ಗೂರು, ಸಿಂಧನೂರು ತಾಲೂಕುಗಳಲ್ಲಿ ದೊರೆತಿವೆ. ಸೋಮೇಶ್ವರ ಶಾಸನವು ಮಾನ್ವಿಯಲ್ಲಿ ಕಲ್ಯಾಣದ ಚಾಲುಕ್ಯರ ಪ್ರಸಿದ್ಧ

ಅರಸನಾದ ೬ನೇ ವಿಕ್ರಮಾದಿತ್ಯನ ಶಾಸನಗಳು ರಾಯಚೂರು ಜಿಲ್ಲೆಯ ಕಲ್ಲೂರು ಹಳ್ಳಿಗುಡಿ, ಕರಡಕಲ್ ಹಾಗೂ ಗಬ್ಬೂರುಗಳಲ್ಲಿ ದೊರಕಿವೆ.

ರಾಯಚೂರು ಪ್ರದೇಶವು ಕೆಲವು ಕಾಲ ಕಾಕತೀಯರಿಗೆ ಸೇರಿತ್ತೆಂಬ ಅಂಶವನ್ನು ತಿಳಿಸುವ ಏಕೈಕ ಶಾಸನವೊಂದು ರಾಯಚೂರಿನಲ್ಲಿ ದೊರೆತಿದೆ. ಕ್ರಿ.ಶ.೧೨೯೪ರ ಶಾಸನದಲ್ಲಿ ಕಾಕತೀಯ ರುದ್ರದೇವ ಆಳುತ್ತಿದ್ದಾಗ ಅವನ ಮಾಂಡಳೀಕ ಗೋನ ಗಾನಯರೆಡ್ಡಿಯೆಂಬುವನು ವರ್ಧಮಾನ ಪುರದಿಂದ ಆಳುತ್ತಿದ್ದಂತೆಯೂ ಅವನ ರಾಜ್ಯದ ರಕ್ಷಾಪುಣೆಯಾಗಿದ್ದ ವಿಶಾಲನಾಥ ಭೂಪಾಲರಾಚೂರಿ ಪಟ್ಟಣದಿಂದ ರಾಜ್ಯಭಾರ ಮಾಡುತ್ತ 'ಸರ್ವರಾಷ್ಟ್ರ ಪ್ರಜಾರಕ್ಷಣಾರ್ಥವಾಗಿ ರಾಯಚೂರು ಕೋಟೆಯನ್ನು ಕಟ್ಟಿಸಿದಂತೆಯೂ ಹೇಳಿದೆ.

ವಿಜಯನಗರ ಆಡಳಿತ

ರಾಯಚೂರಿನ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಆಡಳಿತವು ಪ್ರಮುಖ ಘಟನೆಯಾಗಿದೆ. ವಿಜಯನಗರದ ಅರಸರು ಹಾಗೂ ಬಹುಮನಿ ಅರಸರು ಫಲವತ್ತಾದ ರಾಯಚೂರು ಪ್ರದೇಶದ ಅಧಿಪತ್ಯಕ್ಕಾಗಿ ಅನೇಕ ಯುದ್ಧಗಳನ್ನು ಮಾಡಿದ್ದರು. ರಾಯಚೂರು ರಣರಂಗವಾಗಿ ಮಾರ್ಪಟ್ಟಿತ್ತು. ಕ್ರಿ.ಶ.೧೫೨೦ರಲ್ಲಿ ಪ್ರಸಿದ್ಧನಾದ ಅರಸ ಕೃಷ್ಣದೇವರಾಯ ಇಸ್ಮಾಯಿಲ್ ಆದಿಲ್ ಶಾಹಿಯನ್ನು ಸೋಲಿಸಿ ರಾಯಚೂರು ಕೋಟೆಯನ್ನು ವಶಪಡಿಸಿಕೊಂಡಿದ್ದನು. ವಿಜಯನಗರದ ಆಡಳಿತವು ಸಾಹಿತ್ಯ-ಸಂಸ್ಕೃತಿಯ ಬೆಳವಣಿಗೆಗೆ ಪ್ರಸಿದ್ಧವಾಗಿತ್ತು. ಪುರಂದರರ ಪ್ರಭಾವದಿಂದ ರಾಯಚೂರು ಜಿಲ್ಲೆಯ ಸಂತರಾದ ಜಗನ್ನಾಥದಾಸರು ಹಾಗೂ ವಿಜಯದಾಸರು ಪ್ರಸಿದ್ಧ ದಾಸ-ಸಾಹಿತ್ಯವನ್ನು ರಚಿಸಿದರು.

ಕೃಷ್ಣ ದೇವರಾಯನ ಆಡಳಿತದ ನಂತರ ರಾಯಚೂರು ಪ್ರದೇಶವು ಮತ್ತೆ ಬಿಜಾಪೂರು ಸುಲ್ತಾನರ ವಶಕ್ಕೆ ಬಂದಿತ್ತು. ಮುಂದೆ ಬಿಜಾಪುರ ಹಾಗೂ ಗೋಲ್ಕಂಡ ರಾಜ್ಯಗಳು ಮೊಘಲರ ವಶವಾಗಿದ್ದಾಗ ರಾಯಚೂರು ಸಹ ಅವರ ಅಧಿಕಾರಕ್ಕೆ ಸೇರಿತ್ತು. ಮೊಘಲ್ ಸಾಮ್ರಾಜ್ಯದ ಅವನತಿಯ ಲಾಭ ಪಡೆದು ದಕ್ಷಿಣದಲ್ಲಿ ಮೊಘಲರ ಸುಬೇದಾರನಾದ ಅಸಫಜಾಹ ನಿಜಾಮ ಉಲಮಲ್ಕನು ೧೭೨೮ರಲ್ಲಿ ಹೈದ್ರಾಬಾದಿನಲ್ಲಿ ತನ್ನ ಸ್ವತಂತ್ರ ರಾಜ್ಯ ಸ್ಥಾಪಿಸಿದ್ದನು. ಈ ಅಸಫಜಾಹ ನಿಜಾಮ ಮುಲ್ಕನ ಅಧಿಕಾರವು ೧೯೪೮ರವರೆಗೆ ಮುಂದುವರೆದಿತ್ತು. ಈ ಮಧ್ಯ ರಾಯಚೂರು ಪ್ರದೇಶವು ಕೆಲವು ಕಾಲ ಟಿಪ್ಪು ಸುಲ್ತಾನನ ವಶವಾಗಿತ್ತು. ೧೭೯೯ರ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪುಸುಲ್ತಾನು ಸೋತು ಮರಣ ಹೊಂದಿದನು. ಆಗ ಮೈಸೂರು ರಾಜ್ಯದ ಅನೇಕ ಭಾಗಗಳನ್ನು ಬ್ರಿಟಿಷರು ತಮ್ಮ ವಶಕ್ಕೆ ತೆಗೆದುಕೊಂಡರು. ಅಸಫ್ ಜಾಹಿ ಅರಸು ಮನೆತನದ ಐದನೇ ನಿಜಾಮನಾದ ಅಫಜಲ ವದ್ದೌಲನು ದಕ್ಷ ಅರಸನಾಗಿದ್ದನು. ಈ ನಿಜಾಮ ಹಾಗೂ ಇವನ ಪ್ರಧಾನ ಮಂತ್ರಿಯಾಗಿದ್ದ ಮೊದಲನೇ

ಸಾಲರ್ ಜಂಗನು ಇವನು ಬ್ರಿಟಿಷರ ಮಿತ್ರರಾಗಿದ್ದು ಅವರೊಂದಿಗೆ ಒಳ್ಳೆಯ ಸಂಬಂಧವನ್ನು ಹೊಂದಿದ್ದರು. ೧೮೫೭ರ ಸಿಪಾಯಿ ದಂಗೆಯ ಕಾಲದಲ್ಲಿ ಬ್ರಿಟಿಷರಿಗೆ ಸಹಾಯ ಸಲ್ಲಿಸಿದ್ದನು. ಅದಕ್ಕೆ ಪ್ರತಿಯಾಗಿ ಬ್ರಿಟಿಷರು ೧೮೫೮ರ ಒಪ್ಪಂದದ ಪ್ರಕಾರ ಉಸ್ಮಾನಾಬಾದ ಹಾಗೂ ರಾಯಚೂರು ದೋ-ಅಬ್ ಪ್ರದೇಶವನ್ನು ನಿಜಾಮರಿಗೆ ಬಿಟ್ಟುಕೊಟ್ಟರು. ಹೀಗೆ ರಾಯಚೂರು ಪ್ರದೇಶವು ಹೈದ್ರಾಬಾದ್ ರಾಜ್ಯದಲ್ಲಿ ಸೇರಿಕೊಂಡಿತು. ರಾಯಚೂರು ಹೈದ್ರಾಬಾದ್ ನಿಜಾಮರ ಆಡಳಿತಕ್ಕೆ ಒಳಪಟ್ಟಿತು.

ಹೈದ್ರಾಬಾದ್ ಸಂಸ್ಥಾನದ ಕೊನೆಯ ನಿಜಾಮನಾದ ಮೀರ ಉಸ್ಮಾನ ಅಲಿಖಾನ್ ಅವರ ಕಾಲದಲ್ಲಿ ಸ್ವತಂತ್ರ ಆಂದೋಲನವು ಪ್ರಾರಂಭವಾಯಿತು. ನಿಜಾಮರ ಜಾತೀಯತೆ ಹಾಗೂ ದಬ್ಬಾಳಿಕೆಯ ಸರ್ವಾಧಿಕಾರದ ಆಡಳಿತದ ವಿರುದ್ಧ ಹೈದ್ರಾಬಾದ್ ಸಂಸ್ಥಾನದಲ್ಲಿ ಸ್ವತಂತ್ರ ಸಂಗ್ರಾಮವು ಬಿರುಸಾಗಿ ನಡೆದಿತ್ತು. ಈ ಕಾಲದಲ್ಲಿ ಸಂಸ್ಥಾನದ ಅನೇಕ ಭಾಗಗಳಲ್ಲಿ ರಜಾಕರ ದಬ್ಬಾಳಿಕೆ ತೀವ್ರಗೊಂಡಿತು. ರಾಯಚೂರು ಭಾಗವು ಇದರಲ್ಲಿ ಸೇರಿತ್ತು. ಸಾಕಷ್ಟು ಹಾನಿ ಅನುಭವಿಸಿತು.

ಆಗಸ್ಟ್ ೧೫, ೧೯೪೭ರಂದು ಭಾರತವು ಬ್ರಿಟಿಷರಿಂದ ಸ್ವತಂತ್ರವನ್ನು ಪಡೆದಿದ್ದರು ರಾಯಚೂರು ಹೈದ್ರಾಬಾದ್‌ನ ಸರ್ವಾಧಿಕಾರದ ಕಪಿಮುಷ್ಠಿಯಲ್ಲಿತ್ತು. ನಿಜಾಮ ಮೀರ ಉಸ್ಮಾನ ಅಲಿಖಾನರು ಭಾರತದ ಒಕ್ಕೂಟವನ್ನು ಸೇರಲು ಒಪ್ಪಲಿಲ್ಲ. ತಾವು ಸ್ವತಂತ್ರ ಅರಸರಾಗಿ ಉಳಿಯುವುದಾಗಿ ಹಟ ತೊಟ್ಟರು. ಈ ಸಂದರ್ಭದಲ್ಲಿ ಪ್ರಜೆಗಳ ಕಷ್ಟದುಃಖಗಳು ಅಸಹನೀಯವಾಗಿದ್ದವು. ಮುಂದೆ ಸೆಪ್ಟೆಂಬರ್ ೧೭, ರಂದು ೧೯೪೮ರಲ್ಲಿ ಹೈದ್ರಾಬಾದ್ ಸಂಸ್ಥಾನವು ಸ್ವತಂತ್ರವಾಯಿತು. ರಾಯಚೂರು ಜಿಲ್ಲೆಯು ೧೯೫೬ರವರೆಗೆ ಹೈದ್ರಾಬಾದ್ ಸಂಸ್ಥಾನದಲ್ಲಿಯೇ ಮುಂದುವರೆದಿತ್ತು. ಭಾಷಾವಾರು ರಾಜ್ಯಗಳ ಪುನರ್ ರಚನೆಯಾದಾಗ ೧೯೫೬ ನವೆಂಬರ್ ೧ ರಂದು ರಾಯಚೂರು ಜಿಲ್ಲೆ ಮೈಸೂರು ರಾಜ್ಯವನ್ನು ಸೇರಿತ್ತು. ಮುಂದೆ ೧೯೭೩ ಸೆಪ್ಟೆಂಬರ್ ೧ ರಂದು ಮೈಸೂರು ರಾಜ್ಯವು ಕರ್ನಾಟಕದೊಂದಿಗೆ ಸೇರಿ ಕರ್ನಾಟಕ ರಾಜ್ಯವೆಂದು ಹೆಸರು ಪಡೆಯಿತು. ಹೀಗೆ ರಾಯಚೂರು ಜಿಲ್ಲೆಯು ರಾಜ್ಯದ ಪ್ರತಿಷ್ಠಿತ ಜಿಲ್ಲೆಯಾಗಿ ಪ್ರಸಿದ್ಧಿಯಾಗಿ ಮುಂದುವರೆಯಿತು.

೩.೨. ರಾಜಕೀಯ

ಇತಿಹಾಸ ಕಾಲದಿಂದಲೂ ಎಡೆದೊರೆ ನಾಡೆಂದು ಪ್ರಸಿದ್ಧಿಯನ್ನು ಪಡೆದಿರುವ ರಾಯಚೂರು ಜಿಲ್ಲೆಯೂ, ಕೃಷ್ಣ ತುಂಗ-ಭದ್ರೆಯರ ನಡುವಿನ ಫಲವತ್ತಾದ ಭೂಮಿ. ಈ ಫಲವತ್ತಾದ ನಾಡಿನ ಸಲುವಾಗಿ ವಿಜಯನಗರದ ಅರಸರು ಬಹುಮನಿ ಸುಲ್ತಾನರ ಜೊತೆಗೆ ಮತ್ತು ಶಾಹಿ ಅರಸರ ಜೊತೆಗೆ ಅನೇಕ ಯುದ್ಧಗಳನ್ನು ಮಾಡಿದರು. ರಕ್ಕಸತಂಗಡಗಿಯ ಕಾಳಗದ ನಂತರ ಈ ಭಾಗ ಬಿಜಾಪುರದ ಆದಿಲ್ ಶಾಹಿ ಅರಸರ ವಶವಾಯಿತು. ಅವರ ಆಡಳಿತದಲ್ಲಿ ರಾಯಚೂರು ಜಿಲ್ಲೆ ಯಾವುದೇ

ಪ್ರಗತಿಯನ್ನು ಕಾಣಲಿಲ್ಲ. ಕ್ರಿ.ಶ.೧೬೮೭ರಲ್ಲಿ ಮೊಘಲ್ ದೊರೆ ಔರಂಗಜೇಬನು ಬಿಜಾಪುರ ಅರಸರನ್ನು ಸೋಲಿಸಿ ನಿಜಾಮುಲ್ಕನನ್ನು ಪ್ರಾಂತ್ಯಾಧಿಕಾರಿಯನ್ನಾಗಿ ನೇಮಿಸಿದನು. ಆ ಸಮಯದಲ್ಲಿ ರಾಯಚೂರು ಹೈದ್ರಾಬಾದ್ ಸಂಸ್ಥಾನದ ಭಾಗವೇ ಆಗಿತ್ತು. ಔರಂಗಜೇಬನ ಮರಣದ ನಂತರ ಅವನ ಉತ್ತಾರಾಧಿಕಾರಿಗಳ ದೌರ್ಬಲ್ಯಗಳನ್ನು ಅರಿತು ಹೈದ್ರಬಾದ್‌ನ ದೊರೆ ಸ್ವತಂತ್ರ ಘೋಷಿಸಿಕೊಂಡನು. ಮುಂದೆ ಬ್ರಿಟಿಷ್ ಸತ್ತೆಯ ಜೊತೆಗೆ ರಾಜಿ ಮಾಡಿಕೊಂಡು ಬ್ರಿಟಿಷ್ ಗುಲಾಮಗಿರಿಯನ್ನು ಒಪ್ಪಿಕೊಂಡನು. ಅಂದಮೇಲೆ ಈ ಭಾಗದ ಜನ ತಮ್ಮತನ ಏನೆಲ್ಲ ಕಳೆದುಕೊಂಡು ಗುಲಾಮನ ಗುಲಾಮರಾಗಿ ಎಲ್ಲಾ ರೀತಿಯ ಶೋಷಣೆಗೆ ಒಳಗಾದರು.

ಭಾರತದ ಇತರ ಕಡೆ ಜನ ಸ್ವಾತಂತ್ರಕ್ಕಾಗಿ ಒಂದು ಸಲ ಮಾತ್ರ ಹೋರಾಟ ಮಾಡಿದರೆ, ರಾಯಚೂರು ಜಿಲ್ಲೆಯ ಜನ (ಹೈದ್ರಾಬಾದ್ ಕರ್ನಾಟಕ) ಮೂರು ಸಲ ಹೋರಾಟ ಮಾಡಬೇಕಾಯಿತು. ಮೊದಲನೆಯದಾಗಿ ೧೯೪೭ರವರೆಗೆ ಭಾರತದ ಸ್ವಾತಂತ್ರಕ್ಕಾಗಿ ಬ್ರಿಟಿಷರೊಡನೆ ಹೋರಾಟ, ಎರಡನೆಯದಾಗಿ ೧೯೪೭ ರಿಂದ ೧೯೪೮ರ ಸೆಪ್ಟೆಂಬರ್ ವರೆಗೆ ಹೈದ್ರಬಾದ್ ಕರ್ನಾಟಕ ವಿಮೋಚನೆಗಾಗಿ ನಿಜಾಮರೊಡನೆ ಹೋರಾಟ ಹಾಗೂ ಮೂರನೆಯದಾಗಿ, ಕರ್ನಾಟಕದ ಏಕೀಕರಣಕ್ಕಾಗಿ ೧೯೫೬ರವರೆಗೆ ಹೋರಾಟ ಮುಂದವರಿಸಬೇಕಾಯಿತು. ಹೀಗೆ ಹೈದ್ರಾಬಾದ್ ನಿಜಾಮನ ನಿಜಾಮಶಾಹಿ ರಾಜಕೀಯ ಗುಲಾಮತನಕ್ಕೂ, ಬ್ರಿಟಿಷರ ದಬ್ಬಾಳಿಕೆಗೂ ರಾಯಚೂರು ಭಾಗದ ಜನರು ಅನೇಕ ಹೋರಾಟಗಳನ್ನು ಮಾಡಿದರು. ಈ ರಾಜಕೀಯ ಅಂಶವನ್ನು ಗಮನಿಸಿದಾಗ ಇಲ್ಲಿನ ಸಂಸ್ಕೃತಿ, ಭಾಷೆ, ನೆಲ ಎಲ್ಲವೂ ವಿಚಿತ್ರ ಸನ್ನಿವೇಶಗಳಿಂದ ಕೂಡಿತ್ತೆಂದು ಹೇಳಬಹುದು.

೧೯೪೭ ಸ್ವಾತಂತ್ರ್ಯ ಬಂದಾಗ ಸ್ವಾತಂತ್ರ್ಯ ಕಾಯ್ದೆಯನ್ನು ದುರುಪಯೋಗ ಪಡಿಸಿಕೊಂಡ ಹೈದ್ರಬಾದ್ ನ ನಿಜಾಮರು ಒಂದು ಆಜ್ಞೆಯನ್ನು ಹೊರಡಿಸಿದರು. "ಹೈದ್ರಾಬಾದ್ ಸಂಸ್ಥಾನ ಭಾರತ ಒಕ್ಕೂಟದಲ್ಲಿ ವಿಲೀನವಾಗುವುದೆಂತಲೂ, ಅದಕ್ಕನುಗುಣವಾಗಿ ಈ ಸಂಸ್ಥಾನದಲ್ಲಿ ತಿರಂಗಿ ಧ್ವಜವನ್ನು ಹಾರಿಸುವುದು, ವಂದೇ ಮಾತರಂ ಗೀತೆಯನ್ನು ಹಾಡುವುದು. ಗಾಂಧೀ ಟೋಪಿಯನ್ನು ಧರಿಸುವುದು ಅಥವಾ ರಾಷ್ಟ್ರೀಯ ನಾಯಕರ ಭಾವ ಚಿತ್ರವನ್ನು ಹಾಕುವುದು ಕೂಡಾ ಅಪಾರಾಧವೆಂದು ಸಾರಲಾಯ್ತು." ಆಗಸ್ಟ್ ೧೯೪೭ರಲ್ಲಿ ರಾಯಚೂರು ನಗರದಲ್ಲಿ ಹಾಗೂ ಜಿಲ್ಲೆಯ ಇತರೆ ತಾಲೂಕುಗಳಲ್ಲಿ ಸತ್ಯಾಗ್ರಹ ನಡೆದರೂ ಅವು ಹತ್ತಿಕ್ಕಲ್ಪಟ್ಟವು.

೧೯೪೭ ಆಗಸ್ಟ್ ೧೪ರ ರಾತ್ರಿ ಪೋಲಿಸರ ಕಣ್ಣು ತಪ್ಪಿಸಿ ಸಾತ ಕಛೇರಿಯ ಮೇಲೆ ಹಾರಾಡುತ್ತಿದ್ದ ನಿಜಾಮ ಧ್ವಜವನ್ನು ಇಳಿಸಿ ತಿರಂಗ ಧ್ವಜವನ್ನು ಏರಿಸಿದ್ದು, ವಿದ್ಯಾರ್ಥಿಗಳ ಗುಂಪು. ಈ ವಿದ್ಯಾರ್ಥಿಗಳ ಗುಂಪಿನ ನಾಯಕರಾಗಿದ್ದವರು ಎಂ.ನಾಗಪ್ಪನವರು.(ಇವರೇ ಮುಂದೆ ಪ್ರಸಿದ್ಧ ವಕೀಲರಾಗಿ, ಶಾಸಕರಾಗಿ ಉತ್ತಮ ಸಂಸದೀಯ ಪಟುವೆಂದು ಗೌರವಿಸಲ್ಪಟ್ಟರು) ಈ ಯುವಕರ ಗುಂಪು ಧ್ವಜ ಏರಿಸುವ ಸಾಹಸ

ಕೈಗೊಂಡಾಗ ಪೋಲಿಸರ ಕಣ್ಣಿಗೇನಾದರೂ ಬಿದ್ದಿದ್ದರೆ ಹೆಣವಾಗಬೇಕಿತ್ತು. ಆದರೆ ಬೆಳಗಾಗುವುದರೊಳಗಾಗಿ ನಿಜಾಮ ಧ್ವಜವನ್ನು ರಾಯಚೂರು ನಗರದ ಖಾಸಬವಾಡಿಯೆಂಬ ಒಣಿಯಲ್ಲಿ ಎಸೆದಿದ್ದರು. ಅಷ್ಟರಲ್ಲಿ ವಿದ್ಯಾರ್ಥಿಗಳ ಗುಂಪು ಮಂತ್ರಾಲಯಕ್ಕೆ ಪರಾರಿಯಾಗಿತ್ತು. ಇಡೀ ದೇಶ ಸ್ವಾತಂತ್ರದ ಸವಿಯನ್ನು ಸವಿಯುವಾಗ ಆ ಭಾಗ್ಯ ರಾಯಚೂರಿಗರಿಗೆ ಇರಲಿಲ್ಲ.

ನಿಜಾಮನ ಆಡಳಿತಕ್ಕೆ ಬೇಸತ್ತಿದ್ದ ರಾಯಚೂರಿನ ಜನ ಕರ ನಿರಾಕರಿಸುವ, ಲೇವಿ ಕೊಡದಿರುವ, ಈಚಲು ಗಿಡಗಳನ್ನು ಕಡಿಯುವ ಮೂಲಕ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿದರು. ಜನರನ್ನು ಬಗ್ಗು ಬಡಿಯುವ ಕಾರ್ಯ ಪೋಲಿಸರಿಗೆ ಕಷ್ಟವಾಯಿತು. ಆಗ ಬಂದಿದ್ದೇ ಖಾಸೀ ರಜ್ವಿ ನೇತೃತ್ವದ ರಜಾಕರ ತಂಡ. ಖಾಸಿರಜ್ವಿ ವೃತ್ತಿಯಲ್ಲಿ ವಕೀಲ. ಉತ್ತಮ ಮಾತುಗಾರ ಹಾಗೂ ಮಹಾತ್ವಾಕಾಂಕ್ಷಿಯಾಗಿದ್ದನು. ನಿಜಾಮನ ವಿಶ್ವಾಸಕ್ಕೆ ಪಾತ್ರನಾದ ಈತ "ಇಸ್ಲಾಂ ಖತ್ರಮ ಹೈ" ಎಂದು ಸಾರುತ್ತ ಮತೀಯ ಗಲಭೆಗೆ ಪ್ರಚೋದನೆ ನೀಡಿದನು. ಆದರೆ ನಿಜವಾದ ಅರ್ಥದಲ್ಲಿ ಅದು ರಾಜಪ್ರಭುತ್ವವಾದಿಗಳ ಹಾಗೂ ಪ್ರಜಾಪ್ರಭುತ್ವವಾದಿಗಳ ಮಧ್ಯದ ಹೋರಾಟವಾಗಿತ್ತು. ಕೊನೆಗೆ ಪ್ರಜಾಪ್ರಭುತ್ವಕ್ಕೆ ಜಯವಾಗಿದ್ದು ಸಂತೋಷದ ವಿಷಯ.

ರಜಾಕರ ಹಾವಳಿಯಿಂದ ಅನೇಕ ಅಮಾಯಕ ಜನರು ತಮ್ಮ ಪ್ರಾಣಮಾನ, ಆಸ್ತಿಯನ್ನು ಕಳೆದುಕೊಳ್ಳಬೇಕಾಯಿತು. ಪೋಲೀಸ್ ಆಯಕ್ಷನ್ ಮೂಲಕ ಸೆಪ್ಟೆಂಬರ್ ೧೭, ೧೯೪೮ ರಂದು ಈ ಕರಾಳ ಅಧ್ಯಾಯ ಮುಕ್ತಾಯವಾಯಿತು. ರಜಾಕರ ಹಾವಳಿಯ ಸಂದರ್ಭದಲ್ಲಿ ಹಿಂದೂಗಳಿಗೆ ಮುಸ್ಲಿಂರು ತಮ್ಮ ಮನೆಯಲ್ಲಿ ಆಶ್ರಯ ಕೊಡುವುದರ ಮೂಲಕ ರಕ್ಷಿಸಿದ್ದು ಈ ಭಾಗದ ಜನರ ಜಾತ್ಯಾತೀತ ಮನೋಭಾವನೆಯ ಸಂಕೇತವೆಂದು ಹೆಮ್ಮೆ ಪಡಬಹುದಾಗಿದೆ. ಹೈದ್ರಾಬಾದ್ ಸಂಸ್ಥಾನದಿಂದ ಮುಕ್ತವಾದರೂ ಕೂಡ ರಾಯಚೂರು ಜಿಲ್ಲೆ ಹೈದ್ರಾಬಾದ್ ಭಾಗವಾಗಿಯೇ ಮುಂದುವರಿಯಿತು. ಮುಂದೆ ೧೯೫೭ರಲ್ಲಿ ಭಾಷಾವಾರು ಪ್ರಾಂತ ರಚನೆಯಾಗುವುದರ ಮೂಲಕ ರಾಯಚೂರು ಅಖಂಡ ಕರ್ನಾಟಕದಲ್ಲಿ ಸೇರ್ಪಡೆಯಾಯಿತು. ೧೯೫೭ರಲ್ಲಿ ಚುನಾಯಿತರಾದವರು ಬೆಂಗಳೂರು ವಿಧಾನಸೌಧವನ್ನು ಪ್ರವೇಶಿಸುವಂತಾಯಿತು. ಹಾಗೂ ಲೋಕಸಭೆಗೆ ಪ್ರವೇಶ ಪಡೆದಂಥವರು ಕರ್ನಾಟಕದ ಪ್ರತಿನಿಧಿಗಳೆನಿಸಿಕೊಂಡರು.

೩.೩. ಭೌಗೋಳಿಕ

ರಾಯಚೂರು ಜಿಲ್ಲೆಯು ಭೌಗೋಳಿಕವಾಗಿ ವಿಶಿಷ್ಟತೆಯಿಂದ ಈ ಜಿಲ್ಲೆಯು ಕರ್ನಾಟಕದ ಈಶಾನ್ಯ ಭಾಗದ ಉತ್ತರದ ತಪ್ಪಲು ಪ್ರದೇಶದಲ್ಲಿದೆ. ಬಂಡೆಗಲ್ಲುಗಳು ಪರ್ವತಗಳಿಂದ ಹಾಗೂ ಗಿಡಮರಗಳಿಲ್ಲದ ಬಯಲು ಭೂಮಿಯಿಂದ ಒಣಹವೆಯಿಂದ ಕೂಡಿದೆ. ಕಪ್ಪು ಮಣ್ಣಿನಿಂದ ಕೂಡಿದ

ಭೂಮಿ ಫಲವತ್ತಾಗಿದೆ. ಅಲ್ಲಲ್ಲಿ ಕೆಂಪು ಜೇಡಿ ಮಣ್ಣು ಕೂಡ ಇದೆ. ಇಲ್ಲಿಯ ಭೂ ಪ್ರದೇಶವು ವಾಯುವ್ಯದಿಂದ ಆಗ್ನೇಯದ ಕಡೆಗೆ ಇಳಿಜಾರಾಗಿದೆ. ಇಲ್ಲಿಯ ನದಿಗಳು, ಹಳ್ಳಗಳು ಈ ದಿಕ್ಕಿಗೆ ಅನುಗುಣವಾಗಿ ಹರಿಯುತ್ತವೆ.

ರಾಯಚೂರಿನ ಜನರ ಮುಖ್ಯ ಉದ್ಯೋಗವು ಕೃಷಿ ಆಗಿದೆ. ಇಲ್ಲಿ ಮುಖ್ಯವಾಗಿ ಸಜ್ಜೆ, ಜೋಳ, ಹತ್ತಿ, ಸೂರ್ಯಕಾಂತಿ, ಭತ್ತ, ತೊಗರಿ ಮುಂತಾದ ಧಾನ್ಯಗಳನ್ನು ಬೆಳೆಯುತ್ತಾರೆ. ಇಲ್ಲಿನ ನೀರಾವರಿ ವ್ಯವಸ್ಥೆಯು ಇತ್ತೀಚೆಗೆ ಅನುಕೂಲಕರವಾಗಿದೆ. ತುಂಗಭದ್ರ ನದಿಗೆ ಮುನಿರಾಬಾದ್ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಅದರ ಎಡಗಾಲುವೆ ಮುಖಾಂತರ ಗಂಗಾವತಿ, ಸಿಂಧನೂರು ಮತ್ತು ಮಾನ್ವಿ ತಾಲೂಕಿನ ಕೆಲಭಾಗ ಜಲನಯನ ಪ್ರದೇಶವಾಗಿದೆ. ಮಾನ್ವಿ ಮತ್ತು ಸಿಂಧನೂರು ಭತ್ತದ ಖನಿಜಗಳೆನಿಸಿಕೊಂಡರೆ, ರಾಯಚೂರು ಹತ್ತಿಯನ್ನು ಬೆಳೆಯುವ ಮತ್ತು ಮಾರಾಟಮಾಡುವುದರಲ್ಲಿ ದೇಶದಲ್ಲಿಯೇ ಪ್ರಮುಖ ಕೇಂದ್ರವಾಗಿದೆ.

ಕೃಷ್ಣನದಿಗೆ ನಾರಾಯಣಪುರ ಬಳಿ ನಿರ್ಮಿಸಿರುವ ಅಣೆಕಟ್ಟು ಬಲದಂಡೆ ಕಾಲುವೆಗೆ ದೇವದುರ್ಗ ಹಾಗೂ ಲಿಂಗಸೂಗೂರು ಕೆಲ ಪ್ರದೇಶಗಳು ನೀರಾವರಿಯಾಗುತ್ತಿವೆ. ತುಂಗಭದ್ರ ನದಿಗೆ ರಾಜಲಭಂಡ ಬಳಿ ನಿರ್ಮಿಸಿರುವ ಚೆಕ್ ಡ್ಯಾಂ ರಾಯಚೂರು ತಾಲೂಕಿನ ದಕ್ಷಿಣದ ಕೆಲಭಾಗ ನೀರಾವರಿ ಸೌಲಭ್ಯವನ್ನು ಪಡೆದಿದೆ ಹಾಗೂ ರಾಯಚೂರಿನಲ್ಲೆ ಕೆಲವು ಕೆರೆಗಳಿವೆ. ಅಲ್ಲಲ್ಲಿ ಹರಿಯುವ ಹಳ್ಳ, ನದಿ ನೀರನ್ನು ಕೃಷಿಗೆ ಪಡೆಯಲಾಗುತ್ತದೆ. ತತ್ಪರಿಣಾಮವಾಗಿ ಅನೇಕ ವಾಣಿಜ್ಯ ಬೆಳೆಗಳನ್ನು ಕೂಡ ಬೆಳೆಯಲಾಗುತ್ತಿದೆ. ಈ ಪ್ರದೇಶದಲ್ಲಿ ೨ ಲಕ್ಷ ೯೯ ಸಾವಿರ ಹೆಕ್ಟರ್ ಭೂಮಿ ಕೃಷಿಗೆ ಯೋಗ್ಯವಾಗಿದೆ.

ಜಿಲ್ಲೆಯಲ್ಲಿ ಖನಿಜ ನಿಕ್ಷೇಪಗಳು ಹೇರಳವಾಗಿಲ್ಲ. ಪರಿಣಾಮವಾಗಿ ಕೈಗಾರಿಕೆಗಳು ಕಡಿಮೆ ಇವೆ. ದೇವಸೂಗೂರು ಬಳಿ ಇರುವ ಶಕ್ತಿ ನಗರದ ರಾಯಚೂರು ವಿದ್ಯುತ್ ಶಾಖೋತ್ಪನ್ನ ಸ್ಥಾವರ ಹಾಗೂ ಲಿಂಗಸೂಗೂರು ತಾಲೂಕಿನ ಹಟ್ಟಿ ಚಿನ್ನದ ಗಣಿ ಇಲ್ಲಿರುವ ಮಹತ್ವದ ಸಂಪನ್ಮೂಲವಾಗಿದೆ. ಕರ್ನಾಟಕದಲ್ಲಿ ಇದು ಎರಡನೆಯ ಚಿನ್ನದ ಗಣಿಯಾಗಿದೆ.

ಕರ್ನಾಟಕದಲ್ಲಿಯೇ ಅತೀ ಹೆಚ್ಚು ಬಿಸಿಲು ರಾಯಚೂರಿನಲ್ಲಿದೆ. ಇಲ್ಲಿ ಮಳೆಗಾಲದಲ್ಲಿ ಕನಿಷ್ಠ ತಾಪಮಾನ ೧೭.೭ಸಿ ಇರುತ್ತದೆ. ಗರಿಷ್ಠ ೨೯.೩ಸಿ ನಷ್ಟು ತಾಪಮಾನವಿರುತ್ತದೆ. ಬೇಸಿಗೆ ಕಾಲದಲ್ಲಿ ಅತ್ಯಧಿಕ ಉಷ್ಣತೆಯಿಂದ ಕೂಡಿರುತ್ತದೆ. ಪ್ರತಿದಿನ ಸಾಮಾನ್ಯವಾಗಿ ಕನಿಷ್ಠ ೩೫ ಸಿ ನಿಂದ ಗರಿಷ್ಠ ೩೮ ಸಿ ಅಧಿಕ ಉಷ್ಣಾಂಶವಿರುತ್ತದೆ. ಮೇ ೨೩, ೧೯೨೮ ರಂದು ಅತ್ಯಧಿಕ ಅಂದರೆ ೪೫.೬ ದಾಖಲೆಯಾಗಿರುವುದು ಇತಿಹಾಸವಾಗಿದೆ. ಕಡಿಮೆ ತಾಪಮಾನವೆಂದರೆ ೧೪ನೇ ಜನವರಿ ಮತ್ತು ೧೩ನೇ ಡಿಸೆಂಬರ್ ೧೯೪೫ರಲ್ಲಿ ೧೦.೦ಸಿ ಕಡಿಮೆ ತಾಪಮಾನ ಇರುವುದು ಕೂಡ ಇತಿಹಾಸವಾಗಿದೆ.

ರಾಯಚೂರು ಜಿಲ್ಲೆ ಸಮುದ್ರ ಮಟ್ಟದಿಂದ ಇದರ ಸಾಮಾನ್ಯವಾದ ಎತ್ತರವು ೧೩೧೧ ಅಡಿ ಇದೆ. ಈ ಜಿಲ್ಲೆಯು ಉತ್ತರದಲ್ಲಿ ಕಲ್ಬುರ್ಗಿ ಪಶ್ಚಿಮದಲ್ಲಿ ಬಿಜಾಪುರ ಹಾಗೂ ಕೊಪ್ಪಳ ಪೂರ್ವದಲ್ಲಿ ಅಂಧ್ರ ಪ್ರದೇಶದ ಮಹೆಬೂಬ್ ನಗರ ಜಿಲ್ಲೆ ಹಾಗೂ ದಕ್ಷಿಣದಲ್ಲಿ ಆಂಧ್ರದ ಕರ್ನೂಲ್ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಗಳಿಂದ ಆವೃತವಾಗಿದೆ.

ಭಾರತ ಸರ್ಕಾರದ ಅಂಕಿ-ಅಂಶಗಳ ಪ್ರಕಾರ ರಾಯಚೂರು ಜಿಲ್ಲೆಯ ಭೌಗೋಳಿಕ ವಿಸ್ತಾರವು ೧೪.೦೧೩ ಚದರ ಕಿ.ಮೀ ಇದೆ. ಅಂದರೆ ೫೪೧೦ ಚದರ ಮೈಲುಗಳಾಗಿವೆ. ಕರ್ನಾಟಕ ರಾಜ್ಯದ ಭೂ ವಿಸ್ತಾರದಲ್ಲಿ ರಾಯಚೂರು ಜಿಲ್ಲೆ ಮೂರನೇ ಸ್ಥಾನದಲ್ಲಿದೆ ಹಾಗೂ ಜನಸಂಖ್ಯೆಯಲ್ಲಿಯೂ ೧೦ನೇ ಸ್ಥಾನದಲ್ಲಿದೆ.

೩.೪. ಭಾಷಿಕ ಪರಿಸರ

ಕರ್ನಾಟಕವು ಕಾವೇರಿಯಿಂದ ಗೋದಾವರಿಯವರೆಗೆ ಮಾತ್ರವಲ್ಲದೇ ನರ್ಮದೆಯ ತೀರದವರೆಗೆ ಇತ್ತೆಂಬುದು ಹಲವು ವಿದ್ವಾಂಸರ ಅಭಿಪ್ರಾಯ. ಹೀಗೆ "ವಿಸ್ತಾರವಾಗಿದ್ದ ಕರ್ನಾಟಕ ಹಲವು ಬಾರಿ ತನ್ನ ಪ್ರದೇಶಗಳನ್ನು ಬೇರೆ ರಾಜರುಗಳಿಗೆ ಯುದ್ಧಗಳ ಮೂಲಕ ಕಳೆದುಕೊಳ್ಳುತ್ತಿತ್ತು. ಕರ್ನಾಟಕವು ಬ್ರಿಟೀಷರ ಕಾಲಕ್ಕೆ ವಿಭಜನೆ ಹಾಗೂ ಹಂಚಿಕೆಗಳಾಗಿ ಕನ್ನಡ ಭಾಷಿಕರ ಕರ್ನಾಟಕ ಒಡೆದು ಹೋಗಿತ್ತು. ಹಾಗೆ ಒಡೆದ ಕೆಲವು ಆಡಳಿತ ವಿಭಾಗಗಳಲ್ಲಿ ಕನ್ನಡಿಗರು ಪರಕೀಯರಂತೆ ಇರಬೇಕಾಯಿತು. ಬೇರೊಂದು ಭಾಷೆ ಮತ್ತು ಸಂಸ್ಕೃತಿಯನ್ನು ಬಲವಂತವಾಗಿ ಒಪ್ಪಬೇಕಾದ ಪರಿಸ್ಥಿತಿಯಿತ್ತು. ಇಂತಹ ಸಂದರ್ಭದಲ್ಲಿ ಕನ್ನಡಿಗರು ತಾವೆಲ್ಲರು ಒಂದಾಗುವ ಪ್ರಯತ್ನ ಮಾಡಿದ್ದು ಕರ್ನಾಟಕ ಏಕೀಕರಣದ ಇತಿಹಾಸದಲ್ಲೊಂದು ಪ್ರಮುಖ ಘಟ್ಟ."

ಭಾರತದಲ್ಲಿ ಭಾರತೀಯರು ಹಕ್ಕು ಬಾಧ್ಯತೆಗಳಿಗಾಗಿ, ಸ್ವಾತಂತ್ರ್ಯಕ್ಕಾಗಿ ಹೋರಾಟ ಆರಂಭವಾದಗಲೇ ಭಾಷಿಕ ಪ್ರಜ್ಞೆ ಮೂಡಿದ್ದು ಸಹಜವೇ ಆಗಿತ್ತು. ರಾಯಚೂರು ಪ್ರದೇಶವು ಮೊದಲಿನಿಂದಲೂ ತೆಲುಗು, ಉರ್ದುವಿನೊಂದಿಗೆ ಕನ್ನಡವನ್ನು ಬಳಸುವ ದ್ವಿಭಾಷಿಕ ಪ್ರದೇಶವಾಗಿದೆ. ಇಲ್ಲಿ ಕನ್ನಡ ತೆಲುಗು ದ್ವಿಭಾಷಿಕರು ಜೊತೆ ಜೊತೆಯಲ್ಲಿಯೇ ಬದುಕುತ್ತಿದ್ದಾರೆ.

ರಾಯಚೂರು ಜಿಲ್ಲೆಯು ದ್ವಿಭಾಷಿಕತೆಯೊಂದಿಗೆ (ರಾಯಚೂರು ತಾಲೂಕಿನಲ್ಲಿ ಬಹುಬಾಷಿಕತೆ ಉಂಟು) ಇಲ್ಲಿ ತೆಲುಗು ಉರ್ದು ಭಾಷಾ ಪ್ರಭಾವ ಕಂಡುಬರುತ್ತದೆ. ಹಾಗೂ ಮರಾಠಿಯು ಮೂರನೇ ಸ್ಥಾನದಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತದೆ. ಹೆಚ್ಚಾಗಿ ಇಲ್ಲಿ ತೆಲುಗು-ಕನ್ನಡದೊಂದಿಗೆ ಹೆಚ್ಚು ಬಳಕೆಯಾಗಿದೆ.

ಆದವಾನಿ, ಮಂತ್ರಾಲಯ, ತಾಂಡೂರು, ಕೊಡಾಗಲ್ ಮುಂತಾದವುಗಳು ಕನ್ನಡದ ಪ್ರದೇಶಗಳೇ ಆಗಿದ್ದವು. ೧೯೫೬ರ ಭಾಷಾವಾರು ಪ್ರಾಂತಗಳು ರಚನೆಯಾದಾಗ ಇವು ಆಂಧ್ರದ ಭಾಗಕ್ಕೆ ಸೇರಿದವು. ಆ ಭಾಗವೆಲ್ಲ ಕನ್ನಡ-ತೆಲುಗು ದ್ವಿಭಾಷಿಕ ಪ್ರದೇಶಗಳಾಗಿದ್ದವು. ರಾಯಚೂರು ಜಿಲ್ಲೆಯ ದೇವದುರ್ಗ, ಮಾನ್ವಿ ತಾಲೂಕಿನ ಪೂರ್ವಭಾಗ ಹಾಗೂ ರಾಯಚೂರು ತಾಲೂಕು ತೆಲುಗು ಭಾಷೆಯು ದ್ರಾವಿಡ ಭಾಷೆಯಾಗಿದ್ದರಿಂದ ಅದು ರಾಚನಿಕ ದೃಷ್ಟಿಯಿಂದ ಪರಭಾಷೆಯಿಲ್ಲವಾದ್ದರಿಂದ ಪರಸ್ಪರ ಸೋದರ ಭಾಷಾ ಪ್ರಭಾವದಿಂದ ಗಡಿ ಪ್ರದೇಶಗಳಲ್ಲಿ ಒಂದು ರೀತಿಯ ಪ್ರಭೇದ ಭಾಷೆಯಾಗಿ ಈ ಭಾಷೆಯು ನಿಲ್ಲುತ್ತದೆ.

ಕರ್ನಾಟಕದ ಅನೇಕ ಅರಸು ಮನೆತನಗಳು ರಾಯಚೂರಿನ ಸಂಪತ್ತಿಗಾಗಿ ಹೋರಾಟ ಮಾಡಿ ಅಲ್ಲಿ ಸಾಮ್ರಾಜ್ಯವನ್ನು ಸ್ಥಾಪಿಸಿ ತಮ್ಮ ಆಡಳಿತವನ್ನು ನಡೆಸಿದ್ದಾವೆ. ಅಂತೆಯೇ ವಿಜಯನಗರದ ಅರಸರು ಕೂಡ ಕನ್ನಡ ತೆಲುಗು ಭಾಷೆಗೆ ಪ್ರೋತ್ಸಾಹ ನೀಡಿ ದ್ವಿಭಾಷಿಕ ಪರಿಸರವನ್ನು ಆ ಹೊತ್ತಿನಲ್ಲೆ ನಿರ್ಮಾಣ ಮಾಡಿದ್ದರು. ಇಲ್ಲಿ ಭಾಷೆಯ ಕೊಡುಕೊಳ್ಳುವಿಕೆಯ ಜೊತೆಗೆ ವ್ಯವಹಾರದ ಸಂಪರ್ಕಕ್ಕಾಗಿ ಅನಿವಾರ್ಯವಾಗಿತ್ತು ಹಾಗೂ ಇದರಂತೆಯೇ ಇತಿಹಾಸವನ್ನು ಸಾರುವಂತೆ ಅನೇಕ ಕುರುಹುಗಳಲ್ಲಿ ಭಾಷಿಕ ಪ್ರಭಾವವನ್ನು ಕಾಣಬಹುದು.

ಕನ್ನಡದ ಮೇಲೆ ತೆಲುಗು ಭಾಷೆಯ ಪ್ರಭಾವ ಇತ್ತು. ಹಾಗೂ ದ್ವಿಭಾಷಿಕ ಹಿನ್ನೆಲೆಯಲ್ಲಿ ಬಳಕೆ ಇತ್ತು ಎನ್ನುವುದಕ್ಕೆ ಇಲ್ಲಿನ ಅನೇಕ ಶಾಸನಗಳು ಕೂಡ ಸಾಕ್ಷಿ ಹೇಳುತ್ತವೆ. ರಾಯಚೂರಿನ ಹತ್ತಿರ ಇರುವ ರಾಮಪೂರ ಸಿದ್ಧನ ಬಾವಿಯ ಕಟ್ಟೆಯಲ್ಲಿನ ಶಾಸನದಲ್ಲಿ ತೆಲುಗು-ಕನ್ನಡ ಪದಗಳು ಬಳಕೆಯಾಗಿವೆ. ಉದಾ.ಗೆ ನೋಡಿ

೮. ರಾಮರಾಜು ಮಹಾರಾಜ

೯. ಲುಗಾರು ಪ್ರಥ್ವಿನಿ ಸ್ಥಿರ ರಾ(ಜ್ಯ)

೧೦. ರಾಲು ಚಂಡಾ ನಾನಕ

೧೧. ಮಹಾರಾಜುಗಾರ ತಮತಂಡ್ರಿ

೧೨. ಪ ರಾಜುಗಾರಿಕಿ

ಎಂದು ರಾಯಚೂರು ತಾಲೂಕಿನ ಶಾಸನಗಳಲ್ಲಿ ತೆಲುಗೆ ಪದಗಳ ಮುದ್ರಣ ನೋಡಬಹುದು. ಮತ್ತು ಸೂಕ್ತ ವಿವರಣೆಯನ್ನು ಕೊಡಬಹುದು.

ರಾಯಚೂರು ಪ್ರಾಂತ್ಯವು ಅನೇಕ ವರ್ಷಗಳಿಂದ ಹೈದ್ರಾಬಾದ್ ನಿಜಾಮನ ಆಡಳಿತಕ್ಕೆ ಒಳಪಟ್ಟಿದ್ದಕ್ಕೆ ಅವರ ಆಡಳಿತ ಭಾಷೆ ಉರ್ದುವಾದ್ದರಿಂದ ರಾಯಚೂರು ಪ್ರದೇಶದ ಮೇಲೆ ಉರ್ದುವಿನ

ಪ್ರಭಾವವಾಗಿರುವುದು ಗಮನಿಸಬಹುದು. ಇವರ ಆಡಳಿತದ ೧೮೮೯-೭೦ರಲ್ಲಿ ಅನೇಕ ಸರಕಾರಿ ಶಾಲೆಗಳನ್ನು ತೆರೆಯಲಾಯಿತು. ಹಾಗೂ ಹೈದ್ರಾಬಾದ್ ಕರ್ನಾಟಕದಲ್ಲಿ ರಾಯಚೂರು, ಬೀದರ್ , ಗುಲ್ಬರ್ಗಾ ಸುರುಪೂರಗಳಲ್ಲಿ ಸರಕಾರಿ ಶಾಲೆ ಆರಂಭವಾದರೂ ಅಲ್ಲಿ ಪ್ರಪ್ರಥಮ ಭಾಷೆ ಉರ್ದು ಮತ್ತು ಇಲ್ಲಿ ಬ್ರಿಟಿಷರ ಆಡಳಿತವಿದ್ದುದ್ದರಿಂದ ಇಂಗ್ಲೀಷ್ ದ್ವಿತೀಯ ಭಾಷೆಯಾಗಿತ್ತು ಹಾಗೂ ಕೊನೆಯ ಸ್ಥಾನದಲ್ಲಿ ಕನ್ನಡವಿತ್ತು. ಈ ಅವಧಿಯಲ್ಲಿ ಮಹಕ್ಮಾ ತಾಲೀಮಾತ್ ಶಿಕ್ಷಣ ಇಲಾಖೆ ಉರ್ದು ಭಾಷೆಗೆ ಎಲ್ಲಿಲ್ಲದ ಪ್ರೋತ್ಸಾಹ ನೀಡಿದ್ದರಿಂದ ಮತ್ತು ವಿವಿಧ ವಿಷಯಗಳ ಕಲಿಕೆಗೆ ಉತ್ತೇಜನ ನೀಡಲಾಯಿತು. ಹಿಸಾಬ್ , ಜೆಗ್ರಾಫಿಯಾ, ತಾರೀಖ್ , ಷರಿಯತ್ ಇತ್ಯಾದಿಗಳನ್ನು ಉರ್ದು ಭಾಷೆಯ ಮಾಧ್ಯಮದಲ್ಲಿಯೇ ನೀಡಲಾಗಿತ್ತು. ಆದ್ದರಿಂದ ಕನ್ನಡವು ಉರ್ದುವಿನ ಅಧೀನದಲ್ಲೇ ಇರಬೇಕಾಯಿತು. ಹಾಗೂ ಉರ್ದು ಮಾಧ್ಯಮದಲ್ಲಿಯೇ ಮೆಟ್ರಿಕ್ಯುಲೇಶನ್ , ಇಂಟರ್ ಮಿಡಿಯಟ್ ಪರೀಕ್ಷೆ ಪಾಸಾಗಿದ್ದರು ಹಾಗೂ ಸ್ನಾತಕೋತ್ತರ ಶಿಕ್ಷಣ ಮುಗಿಸಿ ನಿಜಾಮ ಸರ್ಕಾರದ ಅವಧಿಯಲ್ಲಿ ಕೆಲಸಕ್ಕೆ ತೊಡಗಿದವರು ಅನೇಕರು. ಈ ಉರ್ದು ಪ್ರಭಾವವು ೧೯೩೦ರ ವರೆಗೆ ಮುಂದುವರಿಯಿತು.

ರಾಯಚೂರು ಪ್ರದೇಶದಲ್ಲಿ ನಿಜಾಮರು ಬಹು ವರ್ಷಗಳ ಕಾಲ ಆಡಳಿತ ನಡೆಸಿದ್ದರಿಂದ ಇಲ್ಲಿ ಉರ್ದು ಶಾಸನಗಳು ಲಭ್ಯವಾಗಿವೆ. ಅಂತೆಯೇ ರಾಯಚೂರು ಜಿಲ್ಲೆಯ ಈಗಿನ ದೇವದುರ್ಗ ತಾಲೂಕಿನ ಗಬ್ಬೂರು ಗ್ರಾಮದ ಕೋಟೆ ಆಂಜನೇಯ ದೇವಾಲದಲ್ಲಿನ ಶಾಸನದ ಭಾಷೆ ಉರ್ದುವಾಗಿದೆ. ಉದಾ.

೧. ಕವುಲು ನಾಮ ಆಜ್ ದಿವಾಣ ಅಲ್ಲಿಯೆದಲಪ್ಪತೂ ಸ್ಯಹ

೨. ಸಹೇಬರ ಮನೆಗೆ ವುಂಜದ ಸಿಲೆದಾರು ಜಮಾಯಿತಯೇರಾ

೩. ಸಹಂತಿರುಡು ಮಂದಿ ಸಾಹೇಬ್ ಮೌಲಸಾಯಿ ಕಸಬೆ

೪. ಗೋಲಲುಗಳು ಮಜಕುರ ಬೇಗಾರಿಗಳಿಗೆ ಕೂಚಕವು

೫. ಲು (ಸ) ...... ರಸನ ಸವಬಿನ ವಾಲೆ ಸಮ್ ಯ

೬. (ಮ) .... ನಿಂ ಮ ಹಕು ಹೊಲದೊಳಗೆ ಹಕಲು

೭. ಹಗೂದ ಮೂಡಿದ ಮಂಣ ಕಾಳು ದಿವಾಣಿಕೆ ಪಾಲುಸ

೮. ಲಬಾದು ಮಾವಂದು ಯೆಲಜೆಮಯಸಿ....

ಈ ರೀತಿಯಾಗಿ ಉರ್ದು ಶಾಸನವು ಕನ್ನಡದೊಂದಿಗೆ ನುಡಿ ಮಿಶ್ರಣವಾಗಿ ನಮಗೆ ಸಿಗುತ್ತದೆ.

ಬ್ರಿಟಿಷರು ಪ್ರಾಂತ್ಯಗಳನ್ನು ಕೇವಲ ತಮ್ಮ ಆಡಳಿತದ ಅನುಕೂಲಕ್ಕೆ ತಕ್ಕಂತೆ ನಿರ್ಮಿಸಿದ್ದರು. ಅವರಿಗೆ ಅಲ್ಲಿನ ಪ್ರದೇಶಗಳ ಭೌಗೋಳಿಕ ಲಕ್ಷಣಗಳಾಗಲೀ ಭಾಷಿಕ ಲಕ್ಷಣಗಳಾಗಲೀ, ಸಾಂಸ್ಕೃತಿಕ ಪರಂಪರೆಯಾಗಲೀ ಮೂಖ್ಯವಾಗಿರಲಿಲ್ಲ. ಇದಕ್ಕಿಂತ ಮುಖ್ಯವಾಗಿ ಕರ್ನಾಟಕ ಪ್ರಾಂತ್ಯವೆಂಬುದು ಬ್ರಿಟಿಷರ ಆಡಳಿತದ ಕಾಲದಲ್ಲಿ ಇರಲಿಲ್ಲ. ಕರ್ನಾಟಕದ ಕೆಲವು ಭಾಗಗಳು ಮದ್ರಾಸು ಪ್ರಾಂತ್ಯ ಹಾಗೂ

ಮುಂಬೈ ಪ್ರಾಂತ್ಯಗಳಲ್ಲಿ ಹಂಚಿ ಹೋಗಿದ್ದವು. ಮೈಸೂರು ಸಂಸ್ಥಾನ ಮತ್ತು ಹೈದ್ರಾಬಾದ್ ನಿಜಾಮನ ಸಂಸ್ಥಾನಗಳಲ್ಲಿ ಉಳಿದ ಭಾಗಗಳು ಹಂಚಿ ಹೋಗಿದ್ದವು. ಹೀಗೆ ಭಾಗಗಳಾಗಿ ಕರ್ನಾಟಕ ಹಂಚಿ ಹೋಗಿದ್ದರಿಂದ ಬ್ರಿಟಿಷರು ಆಧಿಪತ್ಯ ಸ್ಥಾಪಿಸಿದ್ದರು. ಆದ್ದರಿಂದ ತಮ್ಮ ಆಡಳಿತದ ಪ್ರದೇಶಗಳಲ್ಲೆಲ್ಲ ಇಂಗ್ಲಿಶ್ ಭಾಷೆಯ ಆಡಳಿತವನ್ನು ವಿಸ್ತರಿಸಿದರು. ಹಾಗೂ ಅನೇಕ ಕ್ರೈಸ್ತ ಮಿಶನರಿಗಳ ಮೂಲಕ ಭಾಷೆ ಕಲಿಕೆಗೆ ಹೆಚ್ಚು ಉತ್ತೇಜನ ನೀಡಿದ್ದರು. ಅಂತೆಯೇ ರಾಯಚೂರಿನಲ್ಲಿ ನಿಜಾಮರ ಆಡಳಿತದ ಅವಧಿಯಲ್ಲಿ ಪ್ರಥಮ ಭಾಷೆ ಉರ್ದುವಾಗಿತ್ತು. ದ್ವಿತೀಯ ಭಾಷೆ ಇಂಗ್ಲೀಷ್ ಆಗಿದ್ದನ್ನು ಸ್ಪಷ್ಟಪಡಿಸಬಹುದಾಗಿದೆ.

ರಾಯಚೂರು ಪ್ರದೇಶದ ಮೇಲೆ ಮರಾಠಿ ಪ್ರಭಾವ ಹೆಚ್ಚು ಆಗಿಲ್ಲವೆಂದು ಹೇಳಬಹುದು. ಪೇಶ್ವೆಗಳು ಕೆಲ ರಾಜ ಮನೆತನಗಳು ಪ್ರಭಾವಿತವಾಗಿ ಆಡಳಿತ ನಡಸದೇ ಇರುವುದು ಇದಕ್ಕೆ ಕಾರಣವಿರಬಹುದು. ಅಲ್ಲಲ್ಲಿ ಮರಾಠಿ ಕುಟುಂಬಗಳು ವಲಸೆಯ ಕಾರಣದಿಂದ ಬಂದಿರಬಹುದೆಂದು ಹೇಳಬಹುದು. ಮರಾಠಿ, ಹಿಂದಿ ಹಾಗೂ ಉರ್ದು ರಚನಾತ್ಮಕ ದೃಷ್ಟಿಯಿಂದ ಹಾಗೂ ಬರವಣಿಗೆ ದೃಷ್ಟಿಯಿಂದ ಒಂದೇ ಆಗಿರುವುದು ಕಾಣುತ್ತದೆ.

ರಾಯಚೂರು ಪರಿಸರದ ಮೇಲೆ, ತೆಲುಗು, ಉರ್ದು, ಇಂಗ್ಲೀಷ್ ಪ್ರಭಾವವಾಗಿರುವುದು ಅನೇಕ ಕುರುಹುಗಳ ಮೂಲಕ ತಿಳಿಯಬಹುದು. ಹೀಗಾಗಿ ಕನ್ನಡದ ಮೇಲೆ ಅನೇಕ ಭಾಷೆಗಳು ಸವಾರಿ ಮಾಡಿದ್ದರಿಂದ ಇಲ್ಲಿ ಕನ್ನಡ ಸಾಹಿತ್ಯ ವಿಪುಲವಾಗಿ ಬೆಳೆಯಲಿಲ್ಲ. ರಾಯಚೂರಿನಲ್ಲಿ ದಾಸ ಸಾಹಿತ್ಯ ಹಾಗೂ ತತ್ವಪದ ಕೆಲವೇ ಬೆರಳೆಣಿಕೆಯ ಸಾಹಿತ್ಯ ಮಾತ್ರ ಇಲ್ಲಿ ಇರುವುದು ಗಮನಿಸಬಹುದಾಗಿದೆ. ಹೊರತುಪಡಿಸಿ ಕನ್ನಡ ಸಾಹಿತ್ಯಕ್ಕೆ ಹೇಳಿಕೊಳ್ಳುವಂತ ಕೃತಿಗಳು ಹುಟ್ಟಿಕೊಳ್ಳಲಿಲ್ಲ.

ಶಾಂತರಸ, ಚಂದ್ರಕಾಂತ ಕುಸುನೂರು ಹಾಗೂ ಮುಂತಾದ ಕೆಲವು ಸಾಹಿತಿಗಳಿದ್ದರೂ ಉರ್ದು ಪ್ರಭಾವಿತರಾಗಿದ್ದರಿಂದ ಇವರು ಸ್ವಲ್ಪ ಮಟ್ಟಿಗೆ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಒಟ್ಟಾರೆ ರಾಯಚೂರು ಜಿಲ್ಲೆ ಕನ್ನಡ ಭಾಷೆಯ ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಈ ಮೇಲಿನ ಅನೇಕ ಅಂಶಗಳಿಂದ ಭಿನ್ನವಾಗಿರುವುದು ಕಂಡುಬರುತ್ತದೆ.

ಅಡಿಟಿಪ್ಪಣಿ

೧. ಮಹಾದೇವಯ್ಯ ಪಿ., ಕನ್ನಡ ಶಾಸನಗಳ ಭಾಷೆಯ ಪ್ರಾದೇಶಿಕ ಭಿನ್ನತೆಗಳು ಅಪ್ರಕಟಿತ (ಲೇಖನ), ೨೦೦೮

೨. ಮೃತ್ಯುಂಜಯ ಹೊರಕೇರಿ(ಸಂ), ರಾಯಚೂರು ಜಿಲ್ಲಾದರ್ಶನ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೩. ದೇವರಕೊಂಡಾರೆಡ್ಡಿ(ಸಂ), ರಾಯಚೂರು ಜಿಲ್ಲೆಯ ಶಾಸನ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಹೆದ್ದೊರೆ ಹೈದ್ರಾಬಾದ್ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನ, ಸ್ಮರಣ ಸಂಚಿಕೆ ೨೦೦೬, ಜಿಲ್ಲಾ ಸಾಹಿತ್ಯ ಪರಿಷತ್, ರಾಯಚೂರು

ಅಧ್ಯಾಯ ೪

ರಾಯಚೂರು ಮಾನ್ವಿ ತಾಲ್ಲೂಕಿನ ಭಾಷಾ ಸಂರಚನೆಯ ಸ್ವರೂಪ

೪

ರಾಯಚೂರು ಮಾನ್ವಿ ತಾಲ್ಲೂಕಿನ ಭಾಷಾ ಸಂರಚನೆಯ ಸ್ವರೂಪ

ಒಂದು ಭಾಷಿಕ ಸಮುದಾಯದ ವ್ಯಕ್ತಿಗಳು ತಮ್ಮ ನಡುವಿನ ಅಂತರವು ಆತ್ಮೀಯತೆಗಳನ್ನು ವ್ಯಕ್ತಪಡಿಸಲು ಸಾಮಾಜಿಕ ರಚನೆಯಲ್ಲಿ ವ್ಯಕ್ತಿಗಳ ನಡುವಿನ ಅಂತರ ಸಾಮಿಪ್ಯವನ್ನು ತೋರ್ಪಡಿಸಲು ಹಾಗೂ ವಿವಿಧ ಸಾಮಾಜಿಕ ಸಂದರ್ಭಗಳಿಂದ ನಿಯಂತ್ರಿಸಲ್ಪಡುವ ವ್ಯಕ್ತಿಯು ಸಾಮಾಜಿಕ ಪಾತ್ರಗಳ ನಿರ್ವಹಣೆಗಾಗಿ ವ್ಯಕ್ತಿಗಳು ಒಂದೇ ಭಾಷೆಯಲ್ಲಿನ ವಿವಿಧ ಪ್ರಬೇಧಗಳಿಗೆ ವರ್ಗಾಯಿಸುತ್ತಾರೆ ಹಾಗೂ ದ್ವಿಭಾಷಿಕ ಪರಿಸರದಲ್ಲಿಯೂ ಕೂಡಾ ಇಂತಹ ಸನ್ನಿವೇಶಗಳನ್ನು ಕಾಣಬಹುದಾಗಿದೆ ಇಂತಹ ಸನ್ನಿವೇಶಗಳು ಭಾಷಿಕ ಭಿನ್ನತೆಗೆ ಕಾರಣವಾಗುತ್ತವೆ.

ಭಾರತವು ಹಲವು ಧರ್ಮಗಳನ್ನು ಹೊತ್ತ ದೇಶ. ಇಲ್ಲಿ ಸಂಸ್ಕೃತಿ ನಡೆ, ನುಡಿ ಬೇರೆ ಬೇರೆಯಾಗಿವೆ. ಇವು ತಮ್ಮದೇ ಸಮಾಜದಲ್ಲಿ ಭಾಷೆ ಮತ್ತು ಭಾಷಾ ಪ್ರಭೇದದಗಳನ್ನು, ನಂಬಿಕೆ, ಸಂಪ್ರದಾಯ, ಉಡುಗೆ ತೊಡುಗೆಗಳನ್ನು ಹೊಂದಿದೆ. ಇಲ್ಲಿರುವ ಜಾತಿ ಉಪಜಾತಿಯ ಭಿನ್ನತೆ, ಶಿಕ್ಷಣ, ಆದಾಯ, ಲಿಂಗ, ವಯಸ್ಸು, ಕುಟುಂಬ, ವರ್ಗ ಇತರೆ ಸಾಮಾಜಿಕ ಭಿನ್ನಾಂಶಗಳಿಂದ ಕೂಡಿದ್ದು ಭಾಷಿಕ ರಚನೆಯ ರೂಪಗಳು ಕೂಡ ಇವುಗಳಿಗೆ ತಕ್ಕಂತೆ ತಮ್ಮದೇ ಆದ ರೀತಿಯಲ್ಲಿ ಬಳಕೆಯನ್ನು ಹೊಂದಿರುತ್ತವೆ. ಜೊತೆಗೆ ಸಾಮಾಜಿಕ ಪದ್ಧತಿಗಳು ಕೂಡ ಬೇರೆ ಬೇರೆಯಾಗಿರುವುದರಿಂದ ಇವರು ತಮ್ಮ ಸಮುದಾಯಕ್ಕೆ ಸಂಬಂಧಿಸಿದ ಪದಕೋಶ, ಭಾಷೆಯ ಬಳಕೆ ರಚನೆಗಳು ಪ್ರತ್ಯೇಕವಾಗಿರುತ್ತವೆ. ಇದುವರೆಗೆ ನಡೆದ ವಿವರಣಾತ್ಮಕ ಹಾಗೂ ವರ್ಣನಾತ್ಮಕ ಅಧ್ಯಯನಗಳು ನಮಗೆ ಇದೇ ಆಶಯಗಳನ್ನು ತಿಳಿಸುತ್ತವೆ. ಆದರೆ ಈ ಅಧ್ಯಯನದಲ್ಲಿ ಸಾಮಾಜಿಕ ಭಿನ್ನಾಂಶವಾದ ಜಾತಿಯೊಂದನ್ನು ತೆಗೆದುಕೊಂಡು ಅಥವಾ ಇನ್ನಾವುದೇ ಒಂದೆರಡು ಸಾಮಾಜಿಕ ಭಿನ್ನಾಂಶಗಳಿಂದ ಅಧ್ಯಯನ ಮಾಡಲಾಗಿದೆ. ಆದ್ದರಿಂದ ಒಟ್ಟಾರೆಯಾದ ವರ್ಣನಾತ್ಮಕ ನೆಲೆಯಲ್ಲಿ ಅಧ್ಯಯನ ಮಾಡಿರುವುದರಿಂದ ಜಾತಿಯೊಂದು ಸಂಪೂರ್ಣವಾಗಿ ಭಾಷಾ ಭಿನ್ನತೆಯನ್ನುಂಟು ಮಾಡುತ್ತದೆ ಎನ್ನುವುದಕ್ಕಿಂತ ಬೇರೆ ಸಾಮಾಜಿಕ ಭಿನ್ನಾಂಶಗಳನ್ನು ಗಣನೆಗೆ ತೆಗೆದುಕೊಂಡು ಅಧ್ಯಯನ ಮಾಡುವುದರ ಮುಖಾಂತರ ಪ್ರಕ್ರಿಯೆಯನ್ನು ಭಾಷಿಕ ಭಿನ್ನತೆಗಳ ಮೇಲೆ ಏರುತ್ತಿದ್ದೇವೆಯೇ? ಅಥವಾ ಅಂತಹ ವ್ಯತ್ಯಾಸಗಳು ವಾಸ್ತವದಲ್ಲಿ ನಿಜವಾಗಲೂ ಇದೆಯೇ? ಎನ್ನುವ ಪ್ರಶ್ನೆಗಳನ್ನು ಎತ್ತಿದ್ದಾರೆ.

ಬ್ಲೂಚ್ (೧೯೧೦)ರ ಅಧ್ಯಯನದಲ್ಲಿ ಸಾಮಾಜಿಕ ಶ್ರೇಣಿಕೃತ ವ್ಯವಸ್ಥೆ ಅನಾದಿಕಾಲದಿಂದಲೂ ಇರುವ ಹಾಗೆ ಭಾಷಿಕ ಶ್ರೇಣಿಕೃತ ವ್ಯವಸ್ಥೆ ಇದೆ. ಇದು ಲಂಬಾಂತರ ಭಾಷೆಗಳಲ್ಲಿನ ಭಿನ್ನತೆಗಳನ್ನು ಗುರುತಿಸುವಾಗ ಬ್ರಾಹ್ಮಣರಲ್ಲಿ ಭಿನ್ನತೆ ಕಡಿಮೆ. ಭಿನ್ನತೆಗಳು ಪ್ರಮುಖ ಶ್ರೇಣಿಕೃತ ವ್ಯವಸ್ಥೆಗೆ ಕಾರಣ. ತಮಿಳಿನಲ್ಲಿ ಜಾತಿ ಭಾಷೆಗೆ ನೇರ ಸಂಬಂಧವಿದೆ ಎಂಬ ಅಂಶವನ್ನು ಗುರುತಿಸಿದ್ದಾರೆ. ಅಲ್ಲದೇ ಭಾರತದ ಸಂದರ್ಭದಲ್ಲಿ ಮಧ್ಯಮ ಜಾತಿಗಳಲ್ಲಿನ ಶಿಕ್ಷಣದಿಂದ ಉಂಟಾದ ಜೀವನ ಕ್ರಮದಿಂದಾಗಿ ಭಾಷೆ ಬದಲಾಗುತ್ತದೆ. ಮಹಿಳೆಯರಲ್ಲಿ ಭಾಷೆ ಹೆಚ್ಚು ಬದಲಾಗುವುದಿಲ್ಲ. ಮೇಲ್ ಜಾತಿಗಳಲ್ಲೂ ಭಾಷೆ ಹೆಚ್ಚು ಬದಲಾಗುವುದಿಲ್ಲ ಎಂದು ಸಾಮಾಜಿಕ ಭಿನ್ನತೆಗಳ ಮೇಲೆ ಕಡಿಮೆ ಭಿನ್ನತೆಗಳನ್ನು ತೋರಿಸಿದ್ದಾರೆ. ಮಾಕರ್ ಮಾಕ್ (೧೯೬೦, ೬೮) ಅವರು ಧಾರವಾಡ ಕನ್ನಡದ ಬಗೆಗಿನ ಅಧ್ಯಯನದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ಹರಿಜನರಲ್ಲಿನ ಭಾಷಿಕ ಭಿನ್ನತೆಗಳನ್ನು ಗುರುತಿಸುವಾಗ ಧ್ವನಿ ಮುದ್ರಣದಿಂದ ಸಂಗ್ರಹಿಸಿದ ಮಾಹಿತಿಯಲ್ಲಿ ಹರಿಜನರ ಕನ್ನಡವನ್ನು ಅವರಿಗೆ ಗುರುತಿಸಲಿಕ್ಕೆ ಆಗಿಲ್ಲ. ೧೯೬೮ರ ಅಧ್ಯಯನದಲ್ಲಿ ಜಾತಿ ಪ್ರಭೇದದ ಕಾರಣಗಳನ್ನು ಗುರುತಿಸಲು ಪ್ರಯತ್ನಿಸುವಾಗ ಬ್ರಾಹ್ಮಣರ ಭಾಷಾ ನಡವಳಿಕೆಗಳನ್ನು ಬದಲಾವಣೆ, ಬ್ರಾಹ್ಮಣೇತರ ಭಾಷೆಯಲ್ಲಿ ಬದಲಾವಣೆಯನ್ನುಂಟು ಮಾಡುತ್ತದೆ. ಬ್ರಾಹ್ಮಣೇತರರು ಮಕ್ಕಳ ಭಾಷೆಯನ್ನು ತಿದ್ದುವುದರ ಮೂಲಕ ಬದಲಾವಣೆಯನ್ನುಂಟು ಮಾಡುತ್ತಾರೆ ಎಂಬ ಅಂಶಗಳನ್ನು ಹೊರಗೆಳೆದಿದ್ದಾರೆ.

ಭಾರತೀಯ ಭಾಷಿಕ ಸಮುದಾಯಗಳಿಗೆ ಜಾತಿ ಆಧಾರಿತ ಭಾಷಿಕ ಪ್ರಭೇದಗಳ ಬಗೆಗೆ ಅರಿವಿದೆ ಮತ್ತು ಕೆಳ ಪ್ರತಿಷ್ಠೆಯ ಗುಂಪುಗಳಲ್ಲಿ ಭಾಷಿಕ ರೂಪಗಳು ಹೆಚ್ಚು ಹರಡಿಕೊಂಡಿರುತ್ತವೆ. ಕೆಳ ಪ್ರತಿಷ್ಠೆಯ ಗುಂಪುಗಳ ಭಾಷೆಯ ಮೇಲು ಪ್ರತಿಷ್ಠೆ ಜಾತಿಗಳ ಭಾಷೆಗಿಂತ ಹೆಚ್ಚು ಪ್ರಾದೇಶಿಕವಾಗಿ ವಿಶಾಲವಾದ ರೂಪವನ್ನು ತೋರ್ಪಡಿಸಿಕೊಳ್ಳುತ್ತದೆ. ಸ್ಥಳೀಯ ಜಾತಿ ಒಟ್ಟಾರೆಯಾದ ಭಾಷಿಕ ಭಿನ್ನತೆಗಳನ್ನು ಗುರುತಿಸಬಹುದಾಗಿ ಹಾಗೂ ಇದರಿಂದಾಗುವ ಪರಿಣಾಮಗಳನ್ನು ಭಾಷೆಯಲ್ಲಾಗುತ್ತಿರುವ ಬದಲಾವಣೆಗಳು ವ್ಯತ್ಯಾಸಗಳು, ಇತರ ಭಿನ್ನಾಂಶವನ್ನು ಗುರುತಿಸಬಹುದಾಗಿದೆ. ಆದ್ದರಿಂದ ಭಾರತದಲ್ಲಿರುವ ಭಾಷೆಗಳು ಕೂಡ ಸಾಮಾಜಿಕ ಭಿನ್ನತೆಗಳಿಂದ ವಿಶಿಷ್ಟತೆಯಿಂದ ಕೂಡಿರುವುದರಿಂದ ಭಾಷೆ, ಉಪಭಾಷೆಯು ವಿವಿಧ ರೀತಿಯಲ್ಲಿ ತನ್ನ ಚಹರೆಯನ್ನು ಹೊಂದಿರುತ್ತದೆ. ಆದ್ದರಿಂದ ಸಮಾಜೋಭಾಷಿಕ ಒಂದು ಭಾಷೆ ಅಥವಾ ವಿವಿಧ ಭಾಷೆಗಳನ್ನು ಬಳಸುವ ಭಾಷಿಕರ ಮೇಲೆ ಬೀರಿರುವ ಪರಿಣಾಮಗಳು ಮತ್ತು ಭಾಷೆಗಳ ಅಳಿವು ಉಳಿವು ಬಾಷೆಯಲ್ಲಿನ ಮಾರ್ಪಾಡುಗಳು ಇತ್ಯಾದಿ ವಿಷಯಗಳು ತಿಳಿಸುವುದು ಈ ವಿಷಯದ ಅಧ್ಯಯನವಾಗಿದೆ.

"ಭೌಗೋಳಿಕ ಭಿನ್ನತೆಗಳ ಕಾರಣವಾಗಿ ಭಾಷಾ ವ್ಯತ್ಯಾಸಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತವೆ ಎಂಬ ಅಂಶವನ್ನು ಬ್ಲೂಮ್ ಪಿಲ್ಡನವರೆಗಿನ ಭಾಷಾ ಭಿನ್ನತೆಯ ಬಗೆಗಿನ ಹಲವು

ಅಧ್ಯಯನಗಳಲ್ಲಿ ಕಂಡುಕೊಳ್ಳಲಾಗಿದೆ. ಆದರೆ ಒಂದೇ ಭೌಗೋಳಿಕ ಪ್ರದೇಶದಲ್ಲಿ ವಾಸಿಸುವ ಸಮುದಾಯದ ಒಳಗಡೆಯೇ ಭಾಷಿಕ ಭಿನ್ನತೆಗಳಿರುತ್ತವೆ ಇದಕ್ಕೆ ಜಾತಿ, ವಯಸ್ಸು, ಲಿಂಗ, ಶಿಕ್ಷಣ ಪ್ರಾದೇಶಿಕತೆ ಈ ಎಲ್ಲಾ ಅಂಶಗಳು ಕಾರಣವಿರಬಹುದು ಎಂದು ಬ್ಲೂಮ್ ಫೀಲ್ಡ್ ನ ನಂತರದಲ್ಲಿ ಪ್ರತಿಯೊಂದು ಗುಂಪು ಬಳಸುವ ಭಾಷೆಯಲ್ಲಿ ಬದಲಾವಣೆಗಳಾಗಿವೆ. ಸಾಮಾಜಿಕ ಪ್ರಭೇದಗಳಲ್ಲಿ ಬದಲಾವಣೆಯಾಗಿರುವುದು ಕುತುಹಲದ ಸಂಗತಿ." ಆದ್ದರಿಂದ ಗುಂಪರ್ಜ್(೧೯೬೮ಬಿ) ಅವರು ಹೇಳುವಂತೆ "ಸಾಮಾಜಿಕ ಸಂದರ್ಭಗಳಲ್ಲಿ ಬಳಕೆಯಾಗುವ ಮಾತುಗಳನ್ನು ವಿಶ್ಲೇಷಿಸುವ ಮೂಲಕವೇ ಸಾಮಾಜಿಕ ಪ್ರಭೇದಗಳಲ್ಲಿನ ಬದಲಾವಣೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಒಂದು ಸಾಮಾಜಿಕ ಪ್ರಭೇದಕ್ಕೆ ಹೆಚ್ಚಿನ ಸಾಮಾಜಿಕ ಪ್ರತಿಷ್ಠೆ ಇದ್ದರೆ ಮತ್ತೊಂದಕ್ಕೆ ಇರುವುದಿಲ್ಲ. ಜಾತಿ ಕೂಡ ಸಂವಹನ ಗಡಿಗಳ ಮೇಲೆ ಬೀರುವ ಪರಿಣಾಮ ಆಧುನಿಕ ನಗರ ಮತ್ತು ಸಂಪ್ರದಾಯಿಕ ಗ್ರಾಮೀಣ ಪ್ರದೇಶದಲ್ಲಿ ವಿಭಿನ್ನವಾಗಿರಬಹುದು ಎಂದಿದ್ದಾರೆ. ಬೀನ್ (೧೯೭೪) ಅವರು ಭಾಷಿಕ ಭಿನ್ನತೆಗಳಿಗೆ ಕಾರಣೀಭೂತವಾಗಿರುವ ಸಾಮಾಜಿಕ ಭಿನ್ನಾಂಶಗಳೇನು ಎಂದು ಹುಡುಕುವುದು ಮುಖ್ಯವಾದ ಹಂತ. ಈ ಹಂತದಲ್ಲಿ ವ್ಯಕ್ತಿಗತ ಮೌಲ್ಯ ಮಾಪನಗಳಿಂದ ಭಾಷಿಕ ಶ್ರೇಣೀಕೃತ ವ್ಯವಸ್ಥೆಯಕ ಸಾಮಾಜಿಕ ಅಂತಸ್ತಿನ ಅಂಶವು ಜಾತಿ ಆಧಾರಿತ ಭಾಷಿಕ ಪ್ರಭೇದಗಳ ಅಸ್ತಿತ್ವಕ್ಕೆ ಮೂಲ ಸ್ಫೂರ್ತಿಯನ್ನು ಒದಗಿಸುತ್ತದೆ ಎಂಬುದನ್ನು ತಮಿಳು ಭಾಷೆಯಲ್ಲಿನ ಜಾತಿ ಪ್ರಭೇದಗಳ ಬಗೆಗೆ ರಾಮನುಜನ್ (೧೯೬೮) ಅವರ ಅಧ್ಯಯನವು ವಿಭಿನ್ನ ರೀತಿಯ ಲಕ್ಷಣಗಳನ್ನು ಮುಂದಿಡುತ್ತದೆ. ಡಿ.ಎನ್.ಶಂಕರ್ ಭಟ್ಟ(೧೯೬೮) ಮೈಸೂರು ಜಿಲ್ಲೆಯ ಜಾತಿ ಪ್ರಭೇದಗಳ ಬಗೆಗಿನ ಅಧ್ಯಯನದಲ್ಲಿ ಬ್ರಾಹ್ಮಣ, ಅಸ್ಪೃಶ್ಯ ಮತ್ತು ಇತರ ಜಾತಿಗಳು ಈ ಮೂರು ಭೌಗೋಳಿಕ ಪ್ರಭೇದಗಳನ್ನು ಭೇದಿಸುತ್ತವೆ. ಆದ್ದರಿಂದ ಪ್ರಭೇದಗಳ ಮಧ್ಯದ ಭಿನ್ನತೆಗಳನ್ನು ಶಂಕರಭಟ್ಟರು ಪ್ರಭೇದ ಪ್ರತಿನಿಧಿಸುವ ನಿಯಮಗಳ ಮೇಲೆ ಕಾರ್ಯ ಪ್ರವೃತ್ತವಾಗುವ ಬದಲಾವಣೆಗಳ ಸರಣಿಯಾಗಿ ವಿವರಿಸುತ್ತಾರೆ. "ಬ್ರಾಹ್ಮಣರ ಪ್ರಭೇದವು ಪ್ರಾದೇಶಿಕವಾಗಿ ನಿರ್ದಿಷ್ಟ ಭಿನ್ನಾಂಶಗಳನ್ನು ಒಳಗೊಂಡಿದ್ದಾರೂ ಅಮೂರ್ತ ನಿಯಮದಿಂದ ಸ್ವಲ್ಪ ಮಟ್ಟಿನ ಭಿನ್ನತೆಯನ್ನಷ್ಟೆ ಪ್ರತಿನಿಧಿಸುತ್ತದೆ" ಎಂದು ಹೇಳಿದ್ದಾರೆ.

ರಾಯಸ್ವಾಮಿ ಅಯ್ಯರ್ (೧೯೩೨) ಅವರು ತುಳುವಿನ ಸಾಮಾಜಿಕ ಪ್ರಭೇದಗಳ ಬಗೆಗಿನ ಅಧ್ಯಯನದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ನಡುವಿನ ವ್ಯತ್ಯಾಸವನ್ನು ಗುರುತಿಸಿದ್ದಾರೆ. "ಸಂಸ್ಕೃತವನ್ನು ಹೆಚ್ಚಾಗಿ ಸ್ವೀಕಾರ ಮಾಡಿರುವ ಬ್ರಾಹ್ಮಣ ಸಮುದಾಯವು ಸಾಂಸ್ಕೃತಿಕವಾಗಿ ಯಾರ ಜೊತೆಯು ಬೆರೆಯದೇ ಇರುವುದೇ ವ್ಯತ್ಯಾಸಕ್ಕೆ ಕಾರಣ" ಎಂದಿದ್ದಾರೆ ಹಾಗೂ ಪಿಳ್ಳೆ(೧೯೬೫)ರವರು ಕೆಳವರ್ಗದ ಜಾತಿಗಳ ಬಗೆಗಿನ ಅಧ್ಯಯನದಲ್ಲಿ ಕನ್ಯಾಕುಮಾರಿಯಲ್ಲಿನ ಬೆಸ್ತರ ನುಡಿಪಲ್ಲಟ ಇರುವುದನ್ನು ಗಮನಿಸಿರುವುದು ಇವರ ಅಧ್ಯಯನದ ಮಹತ್ವವಾಗಿದೆ.

ಪಶ್ಚಿಮದ ಸಂದರ್ಭದಲ್ಲಿ ಸಮಾಜೋಭಾಷಿಕ ಹಿನ್ನೆಲೆಯಲ್ಲಿ ನಡೆದಿರುವ ಅಧ್ಯಯನಗಳಲ್ಲಿ ಮುಖ್ಯವಾಗಿ ವರ್ಗಗಳಲ್ಲಿ ಆಗಿರುವ ಭಾಷಿಕ ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ಆದರೆ ಭಾರತದ ಸಂದರ್ಭದಲ್ಲಿ ಶ್ರೇಣೀಕೃತ ವ್ಯವಸ್ಥೆಯಲ್ಲಿ ಜಾತಿಯೇ ಹೆಚ್ಚಿನ ಸಂದರ್ಭಗಳಲ್ಲಿ ಅಧ್ಯಯನದ ವಸ್ತುವಾಗಿದೆ. ಕರ್ನಾಟಕದಲ್ಲಿಯೂ ಕೂಡ ಈ ನಿಟ್ಟಿನಲ್ಲಿ ಅಧ್ಯಯನಗಳು ನಡೆದಿವೆ. ಆದ್ದರಿಂದ ರಾಯಚೂರು ಮಾನ್ವಿ ಪ್ರದೇಶದ ಭಾಷಿಕ ಅಧ್ಯಯನವನ್ನು ಜಾತಿಗಳನ್ನು ಆಧಾರವಾಗಿಟ್ಟುಕೊಂಡು ಅನೇಕ ಪ್ರಶ್ನಾವಳಿಗಳ ಮೂಲಕ ವಿವರಿಸಲಾಗಿದೆ. ಇಲ್ಲಿನ ಜಾತಿಗಳು ಸಮಾಜದ ಏಣಿ-ಶ್ರೇಣಿಗಳ ಶ್ರಮದಲ್ಲಾದ ಬದಲಾವಣೆಗಳಿಂದಾಗಿ ಅನೇಕ ಜಾತಿಗಳಲ್ಲಿನ ಕುಲಕಸುಬು ತೊರೆದು ಬೇರೆ ವೃತ್ತಿಗೆ ಪಲ್ಲಟವಾಗುತ್ತಿದ್ದಾರೆ. ಹಾಗೂ ಈ ರೀತಿಯ ಪಲ್ಲಟಗಳು ನಡೆಯುವ ಸಂದರ್ಭದಲ್ಲಿ ಸ್ವಭಾಷೆಗಳನ್ನು ಮಾತನಾಡುವ ಅನೇಕ ಭಾಷಿಕರು ಇತರೆ ವೃತ್ತಿ ಧರ್ಮಗಳಿಗೆ ಪಲ್ಲಟ ಹೊಂದಿದಾಗ ಭಾಷಾ ಪಲ್ಲಟಗಳೂ ಸಹ ಭಾಷಿಕರಲ್ಲೆ ಉಂಟಾಗಿವೆ ಎನ್ನುವ ಅನೇಕ ಪ್ರಶ್ನೆಗಳನ್ನಿಟ್ಟುಕೊಂಡು ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯ ಕೆಲವು ಅಂಶಗಳನ್ನಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಇದನ್ನು ವ್ಯಾಪ್ತಿಯನ್ನಾಗಿ ತೆಗೆದುಕೊಳ್ಳಲಾಗಿದೆ.

ದ್ವಿಭಾಷಿಕ ಸಂದರ್ಭದಲ್ಲಿನ ಸಮಸ್ಯೆಗಳು, ಅನಿವಾರ್ಯಗಳು ಹಾಗೂ ಅವಶ್ಯಕತೆಗಳನ್ನು ಕುರಿತು ಪ್ರಶ್ನೆಗಳನ್ನಿಟ್ಟುಕೊಂಡು ಪ್ರಸ್ತುತ ಅಧ್ಯಯನ ಕ್ಷೇತ್ರ ಕಾರ್ಯದ ಮೂಲಕ ಮಾಡಲಾಗಿದೆ. ಕನ್ನಡ-ತೆಲುಗು ಯಾವ ಜಾತಿಯಲ್ಲಿ? ಯಾರಲ್ಲಿ ಇದಕ್ಕೆ ಕಾರಣಗಳೇನು? ಯಾವ ಜಾತಿಗಳ ವೃತ್ತಿ ಪಲ್ಲಟವಾಗುತ್ತಿವೆ? ಯಾವ ಜಾತಿಯಲ್ಲಿ? ಭಾಷೆಯಲ್ಲಿ ಭಾಷೆ ಸಂಗೋಪನೆ ಕಂಡುಬರುತ್ತದೆ? ಜಾತಿಗಳಲ್ಲಿನ ದ್ವಿಭಾಷಿಕ ಭಿನ್ನತೆಗಳು ಕಂಡುಬರುತ್ತಿವೆಯೇ? ಜಾತಿಗಳ ತಲೆಮಾರು ಹಂತಗಳಲ್ಲಿ ಆಗುತ್ತಿರುವ ಬದಲಾವಣೆಗಳೇನು? ಅವಿಭಕ್ತ ಕುಟುಂಬ ಅಣುಕುಟುಂಬಗಳಲ್ಲಿ ಆಗುತ್ತಿರುವ ವ್ಯತ್ಯಾಸಗಳೇನು? ಗ್ರಾಮೀಣನಗರ ಪ್ರದೇಶದಲ್ಲಿ ಭಿನ್ನತೆಗಳೇನು? ಸಾಮಾಜಿಕ ಭಿನ್ನಾಂಶಗಳೇನು? ಎನ್ನುವ ಅನೇಕ ಪ್ರಶ್ನೆಗಳನ್ನು ಇಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಕ್ಷೇತ್ರ ಕಾರ್ಯದಲ್ಲಿ ದೊರೆತ ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು ಒಂದೊಂದು ಜಾತಿಯಲ್ಲಿನ ಭಾಷಿಕ ಅಂಶಗಳನ್ನು ಕ್ರಮವಾಗಿ ಶೇಕಡವಾರು ಭಿನ್ನಾಂಶಗಳನ್ನು ಗುರುತಿಸಲಾಗಿದೆ. ಸಮಾಜದಲ್ಲಿ ದೊರೆತ ಮಾಹಿತಿಯನ್ನು ಇಟ್ಟುಕೊಂಡು ಕೋಷ್ಟಕವನ್ನು ರಚಿಸಿ ನಕ್ಷೆಯ ಮೂಲಕ ಮಾಹಿತಿಯನ್ನು ಒದಗಿಸಲಾಗಿದೆ. ಮುಂದೆ ಕೆಲವು ಜಾತಿಗಳನ್ನು ಮಾತ್ರ ಕೊಡಲಾಗಿದೆ. ಅವುಗಳ ಭಾಷಿಕ ಅಂಶಗಳನ್ನು ಗಮನಿಸಿದ್ದೇನೆ. ರಾಯಚೂರಿನ ಪರಿಸರದ ಕನ್ನಡ, ತೆಲುಗು ದ್ವಿಭಾಷಿಕ ಸಂರಚನೆಯ ಅಧ್ಯಯನಕ್ಕೆ ಕ್ಷೇತ್ರಕಾರ್ಯದ ಮೂಲಕ ಹಾಗೂ ಸಂದರ್ಶನದ ಮೂಲಕ ವಿವಿಧ ಮಾಹಿತಿಗಳನ್ನು ಪಡೆಯಲಾಗಿದೆ. ಮೊದಲು ಮಾರ್ಗದರ್ಶರ ಜೊತೆಗೆ ಚರ್ಚಿಸಿ ಮಾರ್ಗದರ್ಶನದಂತೆ ಪ್ರಶ್ನಾವಳಿಯನ್ನು ಮಾಡಿಕೊಂಡು ಬಂದಂತಹ ಉತ್ತರಗಳ ಮೂಲಕ ಕೋಷ್ಟಕವನ್ನು ದಾಖಲಿಸಿಕೊಂಡು ಅದರಿಂದ

ಬಂದಂತಹ ಅಂಕಿ-ಅಂಶಗಳ ಮೂಲಕ ಸಾಮಾಜಿಕ ಭಿನ್ನಾಂಶಗಳನ್ನು ಗುರುತಿಸಲಾಗಿದೆ. ಮತ್ತು ರಾಯಚೂರು ಪರಿಸರದಲ್ಲಿ ದ್ವಿಭಾಷಿಕ ಸಂದರ್ಭಗಳಲ್ಲಿ ಬದಲಾವಣೆಗಳನ್ನು ಹಾಗೂ ಬಳಕೆಯ ನೆಲೆಗಳನ್ನು ಕ್ಷೇತ್ರಕಾರ್ಯದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಹೀಗೆ ಕ್ಷೇತ್ರಕಾರ್ಯದ ಮೂಲಕ ದಾಖಲಿಸಿಕೊಂಡ ಸೂಕ್ಷ್ಮ ವಿವರಗಳನ್ನು ಕೋಷ್ಟಕದಲ್ಲಿ ತೋರಿಸಲಾಗಿದೆ. ಕ್ಷೇತ್ರಕಾರ್ಯದ ಆಯ್ಕೆ ಪ್ರದೇಶಕ್ಕೆ ಅನುಗುಣವಾಗಿ ಕೆಲವೇ ಗ್ರಾಮಗಳ ಮಾದರಿಗಳನ್ನು ಇಟ್ಟುಕೊಂಡು ಶೇಕಡವಾರುಗಳಿಗೆ ಪರಿವರ್ತಿಸಿ ಕೊಷ್ಟಕ ಹಾಗೂ ನಕ್ಷೆಗಳನ್ನು ತಯಾರಿಸಲಾಗಿದೆ. ಮತ್ತು ಸಾಮಾಜಿಕ ಭಿನ್ನಾಂಶಗಳಿಗಾಗಿ ಕೆಲವು ಪ್ರಶ್ನೆಗಳಲ್ಲಿ 'ಆವರಣ'ಗಳನ್ನು ರಚಿಸಿಕೊಳ್ಳಲಾಗಿದೆ. ಆದ್ದರಿಂದ ದೊರೆತ ಮಾಹಿತಿಯ ಅನ್ವಯ ಅಂಕಿ-ಸಂಖ್ಯೆಗಳನ್ನು ಶೇ.೧೦೦ಕ್ಕೆ ಹೊಂದಿಕೆಯಾಗುವಂತೆ ಕ್ಷೇತ್ರವನ್ನು ಆಯ್ದುಕೊಳ್ಳಲಾಗಿದೆ.

ಕುರುಬ

ಕುರುಬ ಸಮುದಾಯದವರು ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಇವರನ್ನು ಹಾಲುಮತಸ್ಥರೆಂದು ಕರೆಯುತ್ತಾರೆ. ಮೂಲತಃ ಇವರ ಸಾಂಪ್ರದಾಯಿಕ ವೃತ್ತಿ, ಕುರಿ ಕಾಯುವುದು, ಕಂಬಳಿ ತಯಾರಿಸುವುದು ಹಾಗೂ ಕೆಲ ಸಮುದಾಯಗಳು ಕೃಷಿಯನ್ನು ಮಾಡುತ್ತಿರುವುದು ಕಂಡುಬರುತ್ತದೆ.

ರಾಯಚೂರು, ಮಾನ್ವಿ ತಾಲೂಕುಗಳಲ್ಲಿ ಕುರುಬ ಸಮುದಾಯವು ಇರುವುದು ಕಂಡುಬರುತ್ತದೆ. ಈ ಸಮುದಾಯದ ಮುಖ್ಯ ಉದ್ಯೋಗ, ಕೃಷಿ, ವ್ಯಾಪಾರ ಹಾಗೂ ಖಾಸಗಿ ಕೆಲಸಗಳನ್ನು ನಿರ್ವಹಿಸುವುದಾಗಿದೆ. ಇವರಲ್ಲಿ ಅನೇಕ ಒಳಪಂಗಡಗಳು ಕೂಡ ಇವೆ. ಅವುಗಳಲ್ಲಿ ಹತ್ತಿಕಂಕಣ ಹಾಗೂ ಉಣ್ಣೆ ಕಂಕಣ ಪಂಗಡಗಳು ಈ ಪ್ರದೇಶದಲ್ಲಿರುವುದು ಕಂಡುಬರುತ್ತದೆ. ಇವರು ರಾಜಕೀಯವಾಗಿ, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಇತ್ತೀಚಿಗೆ ಪ್ರಬಲಗೊಳ್ಳುತ್ತಿದ್ದಾರೆ. ಇವರು ಸಾಮಾಜಿಕ ಸಂಪರ್ಕವನ್ನು ಇತರೆ ಜನಾಂಗಗಳೊಂದಿಗೆ ಹೊಂದಿದ್ದಾರೆ. ಇವರನ್ನು ಕೆಲಮೇಲ್ ಜಾತಿಗಳೊಂದಿಗೆ ಸಾಮಾಜಿಕ ಸಂಪರ್ಕದ ನಿಷೇಧಗಳಿವೆ ಹಾಗೂ ಕೆಳಜಾತಿಯ ಜೊತೆ ಸಾಮಾಜಿಕ ಸಂಪರ್ಕವೂ ಕಡಿಮೆ ಎಂದು ಹೇಳಬಹುದು. ಮಾನ್ವಿ ತಾಲೂಕಿನಲ್ಲಿ ವಾಸವಾಗಿರುವ ಈ ಕುರುಬ ಸಮುದಾಯವು ಇಲ್ಲಿ ಹೆಚ್ಚಾಗಿ ಇವರ ಉದ್ಯೋಗ ಕೃಷಿ ಆಗಿರುವುದರಿಂದ ಇಲ್ಲಿ ಈ ಸಮುದಾಯಗಳು ಅನೇಕ ಅವಿಭಕ್ತ ಕುಟುಂಬಗಳನ್ನು ಹೊಂದಿವೆ. ಇವರೆಲ್ಲರ ಮನೆ ಮಾತು ಕನ್ನಡವಾಗಿದೆ. ರಾಯಚೂರು ಪರಿಸರದಲ್ಲಿ ಹೆಚ್ಚಾಗಿ ಈ ಸಮುದಾಯವು ವಲಸೆಯಿಂದಾಗಿ ಈ ಪ್ರದೇಶದಲ್ಲಿ ನೆಲಸಿದ್ದಾರೆ. ಈ ವಲಸೆಗಾರರು ಹೆಚ್ಚಾಗಿ ತೆಲುಗು ಭಾಷೆಯನ್ನು ಮಾತನಾಡುವುದು ಕಾಣುತ್ತದೆ. ಆಂಧ್ರದಿಂದ ವಲಸೆ ಬಂದ ಕುರುಬ ಕುಟುಂಬದ ಮನೆ ಮಾತು ತೆಲುಗು ಆಗಿರುವುದರಿಂದ ಕನ್ನಡದ ಭಾಷೆಗೆ ಅವರು ಈ ಪ್ರದೇಶದಲ್ಲಿ

ಪಲ್ಲಟವಾಗುತ್ತಿರುವುದು ಕಾಣಬಹುದಾಗಿದೆ. ಈ ಸಮುದಾಯದಲ್ಲಿ ಕನ್ನಡ ಏಕ ಭಾಷಿಕರಿರುವುದು ಕಂಡುಬರುತ್ತದೆ. ಇಲ್ಲಿ ಕನ್ನಡದಲ್ಲಿ ಅಧಿಕ ಸಂಖ್ಯೆಯ ಕುರುಬರು ಇದ್ದಾರೆ ಮತ್ತು ಕನ್ನಡ ಭಾಷಿಕರು ತೆಲುಗಿಗೆ ಹಲವು ಸಂದರ್ಭಗಳಲ್ಲಿ ಪಲ್ಲಟವಾಗುವ ಸಂದರ್ಭಗಳು ಹೆಚ್ಚಾಗಿದೆ. ಕಡಿಮೆ ಸಾಕ್ಷರತೆಯ ಪ್ರಮಾಣ, ಸಾಮಾಜಿಕ ಸಂಪರ್ಕಗಳು ಕಡಿಮೆ ಇರುವುದರಿಂದ ಹಾಗೂ ವಾಸಿಸಿರುವ ಪ್ರದೇಶದಲ್ಲಿ ತೆಲುಗು ಭಾಷಿಕರು ಭಾಷೆಯನ್ನು ಕಲಿಯುವ ಒತ್ತಾಯ ಇರದೇ ಇದ್ದುದರಿಂದ ಇಲ್ಲಿ ಹೆಚ್ಚಾಗಿ ಕನ್ನಡ ಏಕಭಾಷಿಕರಾಗಿಯೇ ಉಳಿದಿದ್ದಾರೆ.

ಆಂಧ್ರದ ಗಡಿ ಭಾಗಗಳಲ್ಲಿ ಹಾಗೂ ಕರ್ನಾಟಕದ ಗಡಿ ಭಾಗಗಳಲ್ಲಿ ಕುರುಬ ಜನಾಂಗವು ವಾಸಿಸಿರುವುದರಿಂದ ಕನ್ನಡ-ತೆಲುಗು ದ್ವಿಭಾಷಿಕ ಸಂದರ್ಭಗಳು ಹೆಚ್ಚಾಗಿದೆ. ಪುರುಷರು ಕಡಿಮೆ ಪ್ರಮಾಣದಲ್ಲಿ ಹಾಗೂ ಮಹಿಳೆಯರು ಹೆಚ್ಚಿನ ಸಂದರ್ಭಗಳಲ್ಲಿ ತೆಲುಗು-ಕನ್ನಡ ದ್ವಿಭಾಷಿಕರಾಗಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಯೊಂದು ಪರಿಸರದ ಇತಿಹಾಸವನ್ನು ಗಮನಿಸಿದಾಗ ಆಯಾ ಪರಿಸರಕ್ಕನುಗುಣವಾಗಿ ಬಳಸುವ ಭಾಷೆಗಳ ನೆಲೆಗಳು ಲಿಂಗಾಧಾರಿತವಾಗಿ ಭಿನ್ನವಾಗಿರುತ್ತವೆ. ಅದಕ್ಕಾಗಿ ಸಮಾಜೋ-ಭಾಷಿಕ ಅಂಶಗಳು ಅನೇಕ ಸಂದರ್ಭಗಳಲ್ಲಿ ಕಾರಣವಾಗುತ್ತದೆ. ರಾಯಚೂರಿನ ಕೆಲ ಗ್ರಾಮಗಳಲ್ಲಿ (ಉದಾ: ಕುರುಬದೊಡ್ಡಿ) ಹೆಚ್ಚು ಕುರುಬ ಸಮುದಾಯದವರು ವಾಸವಾಗಿರುವುದರಿಂದ ಇಂತಹ ಸುತ್ತಮುತ್ತಲಿನ ಗ್ರಾಮಗಳ ಕುರುಬ ಸಮುದಾಯವನ್ನು ಗಮನಿಸಿದಾಗ ಈ ಗ್ರಾಮಗಳು ತೆಲುಗು ಏಕಭಾಷಿಕರಾಗಿರುವುದು ಬೆಳಕಿಗೆ ಬಂದಿದೆ. ಇದು ಆಂಧ್ರದ ಗಡಿ ಭಾಗವಾಗಿರುವುದರೊಂದಿಗೆ 'ಗದ್ವಾಲ'ಕ್ಕೆ(ಆಂ.ಪ್ರ) ಇದು ಸು.೧೦ ಕಿ.ಮೀ ದೂರದಲ್ಲಿರುವುದರಿಂದ ತೆಲುಗು ಭಾಷೆಯ ಪ್ರಭಾವ ಹೆಚ್ಚಾಗಿರುವುದಕ್ಕೆ ಕಾರಣವಾಗಿದೆ.

ಅದೇ ರೀತಿ ಅಂಕಿ ಅಂಶಗಳನ್ನು ಆಧರಿಸಿ ಭಾಷಿಕರ ಬಗ್ಗೆ ಹೇಳುವುದಾದರೆ ಒಟ್ಟು ಏಕಭಾಷಿಕರಲ್ಲಿ ೮೮ ರಷ್ಟು ಪುರುಷರಲ್ಲಿಯೂ ಹಾಗೂ ೯೫.೯ರಷ್ಟು ಕನ್ನಡ ಏಕಭಾಷಿಕರಾಗಿರುವುದು ಕಂಡುಬರುತ್ತದೆ. ಹಾಗೂ ವಿಶೇಷವೆಂದರೆ ಆಂಧ್ರದ ಗದ್ವಾಲ ಗಡಿ ಪ್ರದೇಶಕ್ಕೆ ಹೊಂದಿಕೊಂಡಿರುವ ಕರ್ನಾಟಕದ ರಾಯಚೂರಿನ ಕೆಲ ಗ್ರಾಮಗಳು ಹೊಂದಿಕೊಂಡಿದ್ದು ಆ ಗ್ರಾಮಗಳಲ್ಲಿ ಹೆಚ್ಚಾಗಿ ಕುರುಬ ಸಮುದಾಯವನ್ನು ಹೊಂದಿಕೊಂಡಿವೆ. ಆದ್ದರಿಂದ ಈ ಗ್ರಾಮಗಳಲ್ಲಿ ಶೇ.೦.೧ರಷ್ಟು ಪುರುಷರು ಹಾಗೂ ಮಹಿಳೆಯರು ಹೆಚ್ಚು ಕಡಿಮೆ ಸಮವಾಗಿರುವ ತೆಲುಗು ಏಕ ಭಾಷಿಕರನ್ನ ಕಾಣಲಾಗಿದೆ. ಹಾಗೂ ಕನ್ನಡವನ್ನು ಮಾತೃಭಾಷೆಯಾಗಿರುವವರು ತೆಲುಗು ಭಾಷೆಯನ್ನು ಕಲಿತು ದ್ವಿಭಾಷಿಕರಾಗುವ ಪ್ರಮಾಣ ಒಟ್ಟು ಶೇ.೭.೪ರಷ್ಟಾಗಿದೆ ೩.೫ರಷ್ಟು ಪುರುಷರಲ್ಲಿ ೧.೫.ರಷ್ಟು ಮಹಿಳೆಯರಲ್ಲಿ ಕನ್ನಡ ತೆಲುಗು ದ್ವಿಭಾಷಿಕರನ್ನು ಕಾಣಬಹುದಾಗಿದೆ. ಹಾಗೂ ತೆಲುಗು ಮನೆ ಮಾತಾಗಿರುವವರಲ್ಲಿ ಒಟ್ಟು ೩.೬ರಲ್ಲಿ ೩.೦ರಷ್ಟು ಪುರುಷರು ಹಾಗೂ ೩.೪ರಷ್ಟು ಮಹಿಳೆಯರು ತೆಲುಗು-ಕನ್ನಡ ದ್ವಿಭಾಷಿಕರಾಗಿರುತ್ತಾರೆ. ಇಲ್ಲಿ

ಕೂಡ ಕನ್ನಡ ಏಕಭಾಷಿಕರಾಗಿರುವುದರಿಂದ ತೆಲುಗು ಕಲಿಯ ಹೆಚ್ಚು ಒತ್ತಾಸೆ ಇಲ್ಲವಾಗಿದೆ. ಇಲ್ಲಿ ಕನ್ನಡವನ್ನು ಬಳಸುವ ಸಂದರ್ಭಗಳು ಅಧಿಕವಾಗಿರುವುದು ಗೋಚರಿಸುತ್ತವೆ. ಅನೇಕ ವ್ಯಾಪಾರ ವ್ಯವಹಾರ ಹಾಗೂ ಮಾರುಕಟ್ಟೆ. ಕೆಲಸ ಮಾಡುವವರ ಕಡೆ ವಾಸಿಸಿರುವ ಸಂದರ್ಭಗಳಲ್ಲಿ ಪುರುಷರಿಗೆ ತೆಲುಗು ಕಲಿಯುವ ಅವಶ್ಯಕತೆ ಹೆಚ್ಚಾಗಿದೆ. ಹಾಗೂ ಮಹಿಳೆಯರಿಗೆ ಈ ಅವಶ್ಯಕತೆ ಇಲ್ಲವಾಗಿದೆ ಕೆಲವೊಂದು ವೈವಾಹಿಕ ಸಂಬಂಧಗಳಿಂದಲೂ ಕೂಡ ತೆಲುಗು ಕಲಿಯುವ ಅವಶ್ಯಕತೆ ಕಡಿಮೆಯಾಗಿದೆ.

ಪಟ್ಟಿ ೧


ಕುರುಬ ಜಾತಿಯಲ್ಲಿನ ಭಾಷಿಕ ಅಂಶಗಳು

ಭಾಷಿಕರು	ಕನ್ನಡ ಏಕಭಾಷಿಕರು	ತೆಲಗು ಏಕಭಾಷಿಕರು	ಕನ್ನಡ-ತೆಲಗು ದ್ವಿಭಾಷಿಕರು	ತೆಲಗು-ಕನ್ನಡ ದ್ವಿಭಾಷಿಕರು
ಒಟ್ಟು ಭಾಷಿಕರು	೯೦.೧	೦.೨	೭.೪	೩.೬
ಪುರುಷರು	೮೮.೦	೦.೧	೩.೫	೩.೦
ಮಹಿಳೆ	೯೫.೯	೦.೧	೧.೫	೩.೪

ನಕ್ಷೆ ೧

ಕುರುಬ ಜಾತಿಯಲ್ಲಿನ ಭಾಷಿಕ ಅಂಕಿ ಅಂಶಗಳು

ಒಕ್ಕಲಿಗ



ಒಕ್ಕಲಿಗ ಎಂದರೆ ಒಕ್ಕಲುತನ ಮಾಡುವವ ಅಥವಾ ಬೇಸಾಯ ಮಾಡುವವ ಎನ್ನುವ ಅರ್ಥವನ್ನು ಕೊಡುತ್ತದೆ. ಕರ್ನಾಟಕದಲ್ಲಿ ಗೌಡರು ಎಂದು ಕರೆಸಿಕೊಳ್ಳುವರು. ಒಕ್ಕಲಿಗ ಎನ್ನುವ ಪದಕ್ಕೆ 'ಗೌಡ' ಎನ್ನುವ ಪದ ಬಳಕೆಗೆ ಬಂದಿದೆ ಹಾಗೂ ಗೌಡ, ಗೌವುಡ, ಗಾವುಂಡ, ರೆಡ್ಡಿ, ಲಿಂಗಾಯಿತ ಒಕ್ಕಲಿಗ ಎನ್ನುವ ಹೆಸರುಗಳಿಂದಲೂ ಗೌಡರನ್ನು ಕರೆಯುತ್ತಾರೆ. ಗೌಡರಲ್ಲಿ ಅನೇಕ ಒಳಪಂಗಡಗಳು, ಗೋತ್ರಗಳು, ಜಾತಿ, ಉಪಜಾತಿಗಳಿವೆ. ಇವರ ಮುಖ್ಯ ಉದ್ಯೋಗ ಕೃಷಿ ಮಾತ್ರವಲ್ಲದೆ ಸರ್ಕಾರಿ, ಖಾಸಗಿ ಉದ್ಯೋಗವನ್ನು ಇವರು ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ ಒಕ್ಕಲಿಗರ ಭಾಷೆ ಮೂಲತಃ ಕನ್ನಡವೇ ಆಗಿದೆ. ಬರವಣಿಗೆಯ ಭಾಷೆಯನ್ನು ಕೂಡಾ ಇದನ್ನೇ ಬಳಸುತ್ತಾರೆ.

ರಾಯಚೂರಿನಲ್ಲಿ ಒಕ್ಕಲಿಗರು ಹೆಚ್ಚು ಪ್ರಮಾಣದಲ್ಲಿ ಇದ್ದಾರೆ ಅಲ್ಲದೆ ರಾಜಕೀಯ ಪ್ರಾಬಲ್ಯವನ್ನು ಸಹ ಹೊಂದಿದ್ದಾರೆ. ಇಲ್ಲಿ ರೆಡ್ಡಿ ಒಕ್ಕಲಿಗ, ಕಮ್ಮ ರೆಡ್ಡಿ ಮುನ್ನೂರು ಕಾಪು ಸಮಾಜ ಎಂದು ಕರೆಸಿಕೊಳ್ಳುವ ಇವರು ಹೆಚ್ಚಾಗಿ ಆಂಧ್ರದಿಂದ ವಲಸೆ ಬಂದವರಾಗಿದ್ದಾರೆ. ಕರ್ನಾಟಕ-ಆಂಧ್ರ ಗಡಿಭಾಗಗಳಲ್ಲಿರುವ ಇವರ ಮಾತೃಭಾಷೆ ತೆಲುಗು. ಕರ್ನಾಟಕದ ಅನೇಕ ಗಡಿಭಾಗಗಳಲ್ಲಿ ನೆಲಸಿರುವಂತೆ ರಾಯಚೂರಿನಲ್ಲಿ ನೆಲೆಸಿದ್ದಾರೆ. ಇವರು ಅನೇಕ ಅಣು ಕುಟುಂಬ ಹೊಂದಿದ್ದಾರೆ. ಸಾಕ್ಷರರ ಪ್ರಮಾಣ ಹೆಚ್ಚಾಗಿ ಹೊಂದಿದ್ದಾರೆ. ಅನೇಕ ಸಾಮಾಜಿಕ ಸಂದರ್ಭಗಳಲ್ಲಿ ಹೆಚ್ಚು ತೆಲುಗು ಭಾಷೆಯನ್ನು ಇವರು ಬಳಸುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ಪುರುಷರೇ ಹೆಚ್ಚು ಕನ್ನಡ ತೆಲುಗು ದ್ವಿಭಾಷಿಕರಾಗಿದ್ದಾರೆ. ಇವರು ಅನೇಕ ಸಮುದಾಯಗಳೊಡನೆ ಒಡನಾಟ ಹಾಗೂ ಹೊರಗಿನ ಸಾಮಾಜಿಕ ಕೆಲಸಗಳಲ್ಲಿ ಪುರುಷರು ಹೆಚ್ಚು ಭಾಗಿಗಳಾಗುತ್ತಿದ್ದಾರೆ. ಮಹಿಳೆಯರು ಸಾಮಾಜಿಕ ಸಂದರ್ಭಗಳಲ್ಲಿ ಹೆಚ್ಚು ತೆರೆದುಕೊಳ್ಳದೇ ಇದ್ದುದರಿಂದ ಇವರು ವೈವಾಹಿಕ ಸಂಪರ್ಕದಿಂದಾಗಿ ಹಾಗೂ ಹಲವು ಕಾರಣಗಳಿಂದಾಗಿ ತೆಲುಗು ಏಕಭಾಷಿಕರಾಗಿಯೇ ಉಳಿದಿದ್ದಾರೆ. ಪಕ್ಕದ ಮನೆ ಸ್ನೇಹಿತರು, ವ್ಯವಹಾರಿಕ ಸಂದರ್ಭದಲ್ಲಿ ಇವರು ತೆಲುಗು ಭಾಷೆಯನ್ನೆ ಬಳಸುತ್ತಾರೆ. ಹಾಗೂ ಇವರು ಹೆಚ್ಚಾಗಿ ತೆಲುಗು ಭಾಷೆಯ ಪತ್ರಿಕೆ, ಟಿ.ವಿ ಕಾರ್ಯಕ್ರಮಗಳನ್ನು ತೆಲುಗು ಭಾಷೆಯಲ್ಲಿ ನೋಡುತ್ತಿರುವುದು ಹಾಗೂ ಮನೆ ಮಾತಾಗಿ ಬಳಸುತ್ತಿರುವುದರಿಂದ ತೆಲುಗು ಮಹಿಳೆಯರಲ್ಲಿ ಹೆಚ್ಚು ಭಾಷೆ ಸಂಗೋಪನೆಯಾಗುತ್ತಿದೆ. ಕನ್ನಡವನ್ನು ಕೇವಲ ಅರ್ಥಮಾಡಿಕೊಳ್ಳುವ ಮನೋಭಾವದವರಾಗಿದ್ದಾರೆ. ಕೆಲವು ಅಂಕಿ ಅಂಶಗಳ ಮೂಲಕ ಖಚಿತವಾಗಿ ತಿಳಿದುಕೊಳ್ಳಬಹುದು.


ಪಟ್ಟಿ ೨

ಒಕ್ಕಲಿಗ ಜಾತಿಯಲ್ಲಿನ ಭಾಷಿಕ ಅಂಶಗಳು

ಭಾಷಿಕರು	ಕನ್ನಡ ಏಕಭಾಷಿಕರು	ತೆಲಗು ಏಕಭಾಷಿಕರು	ಕನ್ನಡ-ತೆಲಗು ದ್ವಿಭಾಷಿಕರು	ತೆಲಗು-ಕನ್ನಡ ದ್ವಿಭಾಷಿಕರು
ಒಟ್ಟು ಭಾಷಿಕರು	೬.೯	೦೯.೦	೧೯.೧	೬೧.೦
ಪುರುಷರು	೪.೧	೦೪.೦	೨೩.೧	೫೯.೨
ಮಹಿಳೆ	೫.೫	೧೪.೦	೧೨.೧	೫೮.೧

ನಕ್ಷೆ ೨

ಒಕ್ಕಲಿಗ ಜಾತಿಯಲ್ಲಿನ ಭಾಷಿಕ ಅಂಕಿ ಅಂಶಗಳು



ಒಟ್ಟು ಕನ್ನಡ ಏಕಭಾಷಿಕರಲ್ಲಿ ೬.೯ ರಷ್ಟಿದ್ದರೆ ಪುರಷರಲ್ಲಿ ೪.೧ ಹಾಗೂ ಮಹಿಳೆಯರಲ್ಲಿ ೫.೫ ಕನ್ನಡ ಏಕಭಾಷಿಕರಿದ್ದಾರೆ. ಇವರ ಮನೆ ಮಾತು ಕನ್ನಡವಾಗಿದೆ. ಇವರು ಮೊದಲಿನಿಂದಲೂ ಇಲ್ಲಿಯೇ ವಾಸವಾಗಿರುವ ಒಕ್ಕಲಿಗರೆಂದು ಹೇಳಬಹುದು. ಪುರುಷರು ಸಾಕ್ಷರತೆಯ ಕೌಶಲ್ಯವನ್ನು ಕನ್ನಡದಲ್ಲಿಯೇ ಪಡೆದಿದ್ದಾರೆ. ಈ ಅಂಶವನ್ನು ಗಮನಿಸಿದಾಗ ಸಾಮಾಜಿಕ ಸಂದರ್ಭಗಳಲ್ಲಿ ಪುರುಷರೇ ಹೆಚ್ಚಾಗಿ ಭಾಗವಹಿಸುವುದು ಗಮನಾರ್ಹ.

ಸಾಮಾಜಿಕ ಸಂದರ್ಭಗಳಿಗೆ ಒಳಗಾದ ಮಹಿಳೆಯರು ತೆಲುಗನ್ನು ಹೆಚ್ಚಿನ ಸಂದರ್ಭಗಳಲ್ಲಿ ಉಳಿಸಿಕೊಂಡಿದ್ದಾರೆ. ಇವರಿಗೆ ದೀರ್ಘವಾಗಿ ಕನ್ನಡ ಸಂಭಾಷಣೆ ಮಾಡಲು ಕಷ್ಟವಾಗುತ್ತದೆ. ಆದ್ದರಿಂದ

ಇವರು ಏಕಭಾಷಿಕರಾಗಿ ಉಳಿದಿದ್ದಾರೆ. ಹಾಗೂ ತೆಲುಗು ಏಕಭಾಷಿಕರಲ್ಲಿ ಪುರುಷರ ಪ್ರಮಾಣ ೪.೦ ಆದರೆ ಮಹಿಳೆಯರಲ್ಲಿ ೧೪.೦ ಆಗಿದೆ. ಪುರುಷರು ಸಾಮಾಜಿಕ ಸಂಪರ್ಕದ ಪ್ರಮಾಣ ಹೆಚ್ಚಿರುವುದರಿಂದ ಕನ್ನಡ-ತೆಲುಗು ದ್ವಿಭಾಷಿಕರ ಸಂಖ್ಯೆ ೨೩.೨ ಹಾಗೂ ಮಹಿಳೆಯರ ಪ್ರಮಾಣ ಶೇ.೧೨.೧ ಇರುವುದು ಕಂಡುಬರುತ್ತದೆ. ಇಲ್ಲಿ ಒಟ್ಟು ತೆಲುಗು-ಕನ್ನಡ ದ್ವಿಭಾಷಿಕರೆಂದರೆ, ಒಟ್ಟು ಪುರುಷರಲ್ಲಿ ಶೇಕಡವಾರು ಅಂಕಿಗಳನ್ನು ಹಾಗೂ ಮಹಿಳೆಯರಲ್ಲಿ ಪ್ರತಿಶತ ಅಂಕಿ-ಅಂಶಗಳನ್ನು ದಾಖಲಿಸಿದೆ.

ಒಕ್ಕಲಿಗರ ಅಂಕಿ ಅಂಶಗಳನ್ನು ಗಮನಿಸಿದಾಗ ಕನ್ನಡಿಗರ ಒಕ್ಕಲಿಗರು ತೆಲುಗು ಭಾಷೆಯನ್ನು ಕಲಿತು ಕನ್ನಡ-ತೆಲುಗು ದ್ವಿಭಾಷಿಕರ ಪ್ರಮಾಣಕ್ಕಿಂತ ತೆಲುಗು ಭಾಷಿಕರು ಕನ್ನಡವನ್ನು ಕಲಿತು ತೆಲುಗು-ಕನ್ನಡ ದ್ವಿಭಾಷಿಕರ ಪ್ರಮಾಣವು ಹೆಚ್ಚಾಗಿರುವುದು ಅಂಕಿ-ಅಂಶಗಳ ಮೂಲಕ ದಾಖಲಾಗಿದೆ. ಇದಕ್ಕೆ ಕಾರಣ ಶಿಕ್ಷಣವನ್ನು ಕಲಿಯುವ ಸಂದರ್ಭಗಳು ಹೆಚ್ಚಾಗಿರುವುದರಿಂದ ಹಾಗೂ ಅನೇಕ ರಾಜಕೀಯ ಸಂದರ್ಭಗಳಿಗೆ ಒಳಗಾಗುವುದರಿಂದ, ಸಮಾಜದ ಸಂಪರ್ಕವನ್ನು ಹೊಂದಿರುವುದರಿಂದ ತೆಲುಗು-ಕನ್ನಡ ದ್ವಿಭಾಷಿಕರ ಪ್ರಮಾಣ ಹೆಚ್ಚಾಗಿದೆ ಎಂದು ಹೇಳಬಹುದು.

ಲಿಂಗಾಯತ

ಲಿಂಗಾಯತ ಸಮೂದಾಯವು ಕರ್ನಾಟಕದಾದ್ಯಂತ ಕಂಡುಬರುತ್ತದೆ. ಕರ್ನಾಟಕದ ರಾಜ್ಯದಲ್ಲಿ ಇವರು ರಾಜಕೀಯ ಪ್ರಾಬಲ್ಯವನ್ನು ಮೆರೆದಿದ್ದಾರೆ. ಹಾಗೆಯೇ ಶೈಕ್ಷಣಿಕವಾಗಿ, ಆರ್ಥಿಕವಾಗಿ ಮುಂದುವರಿದ ಸಮುದಾಯವಾಗಿದೆ. ಲಿಂಗಾಯತ, ಲಿಂಗಾಯತ ಒಕ್ಕಲಿಗ, ರೆಡ್ಡಿ ಲಿಂಗಾಯ್ತ, ಗಾಣಿಗ ಲಿಂಗಾಯ್ತ, ಬಣಜಿಗ ಲಿಂಗಾಯತ, ಜಂಗಮ ಲಿಂಗಾಯತ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಇವರ ಮನೆ ಮಾತು ಕನ್ನಡವಾಗಿದೆ ಹಾಗೂ ಬರವಣಿಗೆ ಭಾಷೆಯೂ ಕೂಡ ಕನ್ನಡವಾಗಿದೆ. ಇವರಲ್ಲಿ ಬೆರಳೆಣಿಕೆಯಷ್ಟು ಮಾತ್ರ ತೆಲುಗು ಭಾಷಿಕರಾಗಿದ್ದಾರೆ. ಕೆಲವರು ವಲಸೆ ಬಂದವರಾಗಿದ್ದಾರೆ. ಈ ಸಮುದಾಯದವರು ಲಿಂಗಾಯ್ತರ ಆಚಾರ ವಿಚಾರಗಳನ್ನು, ಬಸವಣ್ಣನ ತತ್ವವನ್ನು ಅನುಸರಿಸುವವರಾಗಿದ್ದಾರೆ. ಈ ಸಮುದಾಯದವರು ಕೆಳವರ್ಗದವರೊಂದಿಗೆ ಕಡಿಮೆ ಸಂಪರ್ಕ ಹೊಂದಿದವರಾಗಿದ್ದಾರೆ. ರಾಯಚೂರು ಪ್ರದೇಶದಲ್ಲಿ ಈ ಸಮುದಾಯವು ಹೆಚ್ಚಾಗಿ ಕೃಷಿ, ವ್ಯಾಪಾರವನ್ನು ಹಾಗೂ ಇತರೆ ಕೆಲಸಗಳನ್ನು ಮಾಡುತ್ತಿದ್ದಾರೆ. ಇವರಲ್ಲಿ ಸರಕಾರಿ ಹಾಗೂ ಅರೆಸರಕಾರಿ ಸೇವೆಯಲ್ಲಿಯೂ ಇದ್ದಾರೆ ಲಿಂಗಾಯತ ಸಮುದಾಯದ ಕೆಲ ಕುಟುಂಬಗಳಲ್ಲಿ ಬಡತನವೂ ಇದೆ. ಇಂಥ ಬಡತನ ಮೂಲ ಹೊಂದಿದ ಅನೇಕ ಕುಟುಂಬಗಳು ಕೃಷಿ ಕೂಲಿ ಕೆಲಸ ಸಣ್ಣ ಪುಟ್ಟ ವ್ಯವಹಾರಗಳನ್ನು ಮಾಡಿಕೊಂಡು ಜೀವನ ನಡೆಸುತ್ತಾರೆ. ಅನೇಕ ಲಿಂಗಾಯತ ತೆಲುಗು ಸಮುದಾಯಗಳು ವಲಸೆ ಬಂದಿದ್ದು, ತೆಲುಗಿನಿಂದ ಕನ್ನಡಕ್ಕೆ ಭಾಷಾ ಪಲ್ಲಟವಾಗಿದ್ದಾರೆ. ಇನ್ನು ಕೆಲ ಲಿಂಗಾಯತರು ತೆಲುಗು-ಕನ್ನಡ, ಕನ್ನಡ-ತೆಲುಗು ದ್ವಿಭಾಷಿಕರಾಗಿರುವುದು ಕಂಡುಬರುತ್ತದೆ.

ಲಿಂಗಾಯತ ಸಮುದಾಯದ ಹಲವು ಕುಟುಂಬಗಳು ತೆಲುಗು, ಕನ್ನಡ ಭಾಷಾ ಪರಿಸರದೊಂದಿಗೆ ಬದುಕುವುದರಿಂದ ದ್ವಿಭಾಷಿಕ ಪ್ರಭಾವಿತ ಕುಟುಂಬಗಳು ಇವೆ. ಆದರೆ ಕನ್ನಡಿಗರಿಗೆ ತೆಲುಗು ಕಲಿಯುವ ಆಸಕ್ತಿ ಇಲ್ಲ ಅದರ ಅವಶ್ಯಕತೆ ಇವರಿಗೆ ಇದ್ದಂತೆ ತೋರುತ್ತಿಲ್ಲ. ಬದಲಾಗಿ ತೆಲುಗು ಭಾಷಿಕ ಕುಟುಂಬಗಳೇ ಕನ್ನಡವನ್ನು ಅನುಸರಿಸುತ್ತಿರುವುದು ಗಮನಾರ್ಹ.

ಲಿಂಗಾಯತರು ಹೆಚ್ಚು ಕನ್ನಡ ಏಕಭಾಷಿಕರಾಗಿರುವುದು ರಾಯಚೂರು ಮಾನ್ವಿ ಪರಿಸರದಲ್ಲಿ ಕಂಡುಬರುತ್ತದೆ. ಅಂಕಿ-ಅಂಶಗಳ ಮೂಲಕ ಇದನ್ನು ಗಮನಿಸಬಹುದಾಗಿದೆ.


ಪಟ್ಟಿ ೩

ಲಿಂಗಾಯತ ಜಾತಿಯಲ್ಲಿನ ಭಾಷಿಕ ಅಂಶಗಳು

ಭಾಷಿಕರು	ಕನ್ನಡ ಏಕಭಾಷಿಕರು	ತೆಲಗು ಏಕಭಾಷಿಕರು	ಕನ್ನಡ-ತೆಲಗು ದ್ವಿಭಾಷಿಕರು	ತೆಲಗು-ಕನ್ನಡ ದ್ವಿಭಾಷಿಕರು
ಒಟ್ಟು ಭಾಷಿಕರು	೯೧.೮	-	೮.೮	೦.೭
ಪುರುಷರು	೮೯.೨	೨.೦	೮.೭	೧.೦
ಮಹಿಳೆ	೯೬.೨	-	೧.೦	೦.೨

ನಕ್ಷೆ ೩

ಲಿಂಗಾಯತ ಜಾತಿಯಲ್ಲಿನ ಭಾಷಿಕ ಅಂಕಿ ಅಂಶಗಳು



ಈ ಪಟ್ಟಿಯಲ್ಲಿ ಒಟ್ಟಾರೆಯಾಗಿ ಪುರುಷರಿಗಿಂತ ಮಹಿಳೆಯರೆ ಹೆಚ್ಚು ಕನ್ನಡ ಏಕ ಭಾಷಿಕರಾಗಿರುವುದು ಮುಖ್ಯವಾದುದು ಹಾಗೂ ತೆಲುಗು ಏಕ ಭಾಷಿಕರು ಇಲ್ಲಿ ಇಲ್ಲವೇ ಇಲ್ಲ ಎನ್ನಬಹುದು. ಕೇವಲ ಪುರುಷರು ಮಾತ್ರ ತೆಲುಗು ಏಕ ಭಾಷಿಕರಾಗಿದ್ದರೂ ಅವರ ಪ್ರಮಾಣ ಕಡಿಮೆ. ಇವರು ಹೊರಗಡೆ ಅನೇಕ ವ್ಯಾಪಾರವನ್ನು ಮಾಡುತ್ತಿರುವವರು ಹಾಗೂ ವಲಸೆ ಬಂದವರು ಆಗಿದ್ದಾರೆ.ಹಾಗೂ ತೆಲುಗು ಭಾಷೆಯನ್ನು ಕಲಿತು ದ್ವಿಭಾಷಿಕರಾಗಿರುವ ಪ್ರಮಾಣ ಪುರುಷರಲ್ಲಿ ಶೇ.೮.೭ ಹಾಗೂ ಮಹಿಳೆಯರಲ್ಲಿ ಈ ಪ್ರಮಾಣ ೧.೦ರಷ್ಟು ಆಗಿದೆ. ಇಲ್ಲಿ ಕನ್ನಡ ಏಕಭಾಷಿಕರಾಗಿರುವವರು ಪುರುಷರಲ್ಲಿ ಪ್ರತಿಶತ ಅಂಕಿ-ಅಂಶಗಳನ್ನು ಗಮನಿಸಲಾಗಿದೆ. ಮತ್ತು ಮಹಿಳೆಯರಲ್ಲಿ ಶೇ.ಪ್ರತಿಶತ ಅಂಕಿ-ಅಂಶಗಳನ್ನು ದಾಖಲಿಸಿದೆ. ಒಟ್ಟಾರೆಯಾಗಿ ಪುರುಷರಿಗೆ ತೆಲುಗು ಕಲಿತು ದ್ವಿಭಾಷಿಕರಾಗುವ ಅವಶ್ಯಕತೆ ಇದ್ದಷ್ಟು ಮಹಿಳೆಯರಿಗೆ ಇಲ್ಲ. ಇಲ್ಲಿ ಕನ್ನಡದೊಂದಿಗೆ ಇಂಗ್ಲೀಷ್ ಕಲಿತು ಸಾಕ್ಷರತೆಯ ಕೌಶಲಗಳು ಕನ್ನಡದಲ್ಲಿ ಆಗುತ್ತಿದೆ. ಅನೇಕ ಮಧ್ಯಮ ಮೇಲ್ ಮಧ್ಯಮ ವರ್ಗಗಳು ಇಂಗ್ಲೀಷ್‌ನಲ್ಲಿ ಸಾಕ್ಷರತೆಯ ಕೌಶಲವನ್ನು ಪಡೆಯುತ್ತಿದ್ದಾರೆ.

ವೈಶ್ಯ

ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕಂಡುಬರುವ ಇವರು ಈ ಹಿಂದೆ ಕೆಲವು ವೈಶ್ಯ ಆಂಧ್ರದಿಂದ ವಲಸೆ ಬಂದಿರುವುದು ದಾಖಲೆಗಳ ಮೂಲಕ ತಿಳಿದುಬರುತ್ತದೆ. ಕರ್ನಾಟಕದಲ್ಲಿ ಇವರನ್ನು ಕೂಮಟಿಗ ಅಥವಾ ಶೆಟ್ಟಿಗಳೆಂದು ಅಥವಾ ಆರ್ಯವೈಶ್ಯ ಸಮಾಜದವರು ಎಂದು ಕರೆಸಿಕೊಳ್ಳುತ್ತಾರೆ. ರಾಯಚೂರಿನಂತಹ ಪ್ರದೇಶದ ಈ ಶೆಟ್ಟಿಗಳು ಅಧಿಕ ಪ್ರಮಾಣದಲ್ಲಿದ್ದಾರೆ. ಪ್ರತಿ ಗ್ರಾಮದಲ್ಲಿ ಕುಟುಂಬಗಳು ವಾಸವಾಗಿದ್ದಾರೆ ಇದರಲ್ಲಿ ಬಣ್ಣವನ್ನಾಧರಿಸಿ ಕಪ್ಪು ಕೂಮಟಿಗ ಹಾಗೂ ಕೆಂಪು ಕೊಮಟಿಗ ಎಂದು ವಿಭಾಗಿಸುವರು. ಇವರಲ್ಲಿ ಅನೇಕ ಪಂಗಡಗಳಿದ್ದು, ತಮ್ಮದೇ ಆಚರಣೆಗಳನ್ನು ಕರ್ನಾಟಕದಲ್ಲಿ ಮಾಡುತ್ತಿದ್ದಾರೆ. ಹೆಚ್ಚು ವೈಶ್ಯರ ವೃತ್ತಿ ವ್ಯಾಪಾರವೇ ಆಗಿದೆ. ವ್ಯಾಪಾರದಲ್ಲಿ ತುಂಬಾ ನಿಪುಣರಾಗಿರುವುದರಿಂದ ಪ್ರತಿಯೊಂದು ಉದ್ಯೋಗದಲ್ಲಿ ತೊಡಗಿರುತ್ತಾರೆ. ಇನ್ನು ಕೆಲವರು ಬ್ಯಾಂಕ್ ವ್ಯವಹಾರ, ಉದ್ದಿಮೆ, ಖಾಸಗಿ ಉದ್ಯೋಗ ಮಾಡುತ್ತಿದ್ದಾರೆ. ಇನ್ನು ಕೆಲವರು ಮೂಲ ವಂಶಪರಂಪರೆಯಿಂದ ಬಂದ ವ್ಯಾಪಾರದ ವೃತ್ತಿಗೆ ತಿಲಾಂಜಲಿಯನ್ನಿಟ್ಟು ಉನ್ನತ ವ್ಯಾಸಂಗ ಪಡೆದು ಹೆಚ್ಚು ಸರ್ಕಾರಿ ಉದ್ಯೋಗಿಗಳಾಗುತ್ತಿದ್ದಾರೆ.

ರಾಯಚೂರು ಪ್ರದೇಶದಲ್ಲಿಯ ವೈಶ್ಯರು ತೆಲುಗು ಭಾಷಿಕರಾಗಿದ್ದು ಕನ್ನಡವನ್ನು ಮಾತಾಡುವರಲ್ಲದೇ ಬರವಣಿಗೆಯ ಭಾಷೆಯಾಗಿ, ಕನ್ನಡ ಇಂಗ್ಲೀಷ್ ಎರಡನ್ನು ಬಳಕೆ ಮಾಡುತ್ತಾರೆ. ಆಂಧ್ರ-ಕರ್ನಾಟಕದ ಗಡಿಭಾಗದಲ್ಲಿನ ವೈಶ್ಯರು ಹೆಚ್ಚಿನ ಸಂದರ್ಭದಲ್ಲಿ ದ್ವಿಭಾಷಿಕರಾಗಿದ್ದಾರೆ. ರಾಯಚೂರು ಹಾಗೂ ಮಾನ್ವಿ ಭಾಗದ ವೈಶ್ಯರು ತೆಲುಗುವಿನೊಂದಿಗೆ ಕನ್ನಡವನ್ನು ಬಳಸುತ್ತಿದ್ದಾರೆ. ಹೆಚ್ಚಿನ ಸಾಮಾಜಿಕ ಸಂದರ್ಭಗಳಲ್ಲಿ ಭಾಷಾ ಬಳಕೆಯ ಕೌಶಲ್ಯಗಳು ಹೆಚ್ಚಾಗುತ್ತಿವೆ. ಇವರಲ್ಲಿ ಹೆಚ್ಚಿನ ಆದಾಯವನ್ನು ಹೊಂದಿರುವ ವೈಶ್ಯರು

ಕನ್ನಡದಿಂದ ಇಂಗ್ಲೀಶ್‌ಗೆ ಹೆಚ್ಚು ಪಲ್ಲಟವಾಗುತ್ತಿದ್ದಾರೆ. ಶೈಕ್ಷಣಿಕ ಸಂದರ್ಭಗಳಲ್ಲಿ ಇವರ ಮಕ್ಕಳು ಕನ್ನಡ ಭಾಷೆಯನ್ನು ಕಲಿಯಬೇಕಾಗಿರುವುದರಿಂದ ಇವರ ಮಕ್ಕಳು ಕನ್ನಡ ಹಾಗೂ ತೆಲುಗು ಮತ್ತು ಇಂಗ್ಲೀಶ್‌ನಲ್ಲಿ ಸಂವಹನ ಮಾಡುತ್ತಾರೆ. ವ್ಯಾಪಾರದ ದೃಷ್ಟಿಯಿಂದ ಕನ್ನಡವನ್ನು ಅವರು ಸಂವಹನ ಮಾಡುತ್ತಿದ್ದಾರೆ. ಕಾಲಾಂತರದಲ್ಲಿ ಮಹಿಳೆಯರಲ್ಲಿ ಹಾಗೂ ಪುರುಷರಲ್ಲಿ ತೆಲುಗು ಏಕ ಭಾಷಿಕರು ಕ್ರಮೇಣ ಕಡಿಮೆಯಾಗುತ್ತಿದ್ದಾರೆ. ಈ ಮೇಲಿನ ಅಂಕಿ ಅಂಶಗಳಿಂದ ಸ್ಪಷ್ಟವಾಗುತ್ತದೆ. ಈ ಪಟ್ಟಿಯನ್ನು ಗಮನಿಸಿದಾಗ ಒಟ್ಟು ಭಾಷಿಕರಲ್ಲಿ ೫.೮ ಪುರುಷರು ಹಾಗೂ ೭.೮ರಷ್ಟು ಮಹಿಳೆಯರು ಕನ್ನಡ ಏಕಭಾಷಿಕರಾಗಿದ್ದಾರೆ. ಇವರಲ್ಲಿ ಕೆಲವು ಕುಟುಂಬಗಳು ಅನೇಕ ವರ್ಷಗಳಿಂದ ಇಲ್ಲೇ ವಾಸವಾಗಿರುವವರು ಎಂದು ಹೇಳುತ್ತಾರೆ. ಇನ್ನು ಕೆಲವು ಕನ್ನಡ ಏಕ ಭಾಷಿಕರು ಕರ್ನಾಟಕದ ಮೂಲೆ ಮೂಲೆಗಳಿಂದ ವಲಸೆ ಬಂದವರಾಗಿದ್ದಾರೆ.


ಪಟ್ಟಿ ೪

ವೈಶ್ಯ ಜಾತಿಯಲ್ಲಿನ ಭಾಷಿಕ ಅಂಶಗಳು

ಭಾಷಿಕರು	ಕನ್ನಡ ಏಕಭಾಷಿಕರು	ತೆಲಗು ಏಕಭಾಷಿಕರು	ಕನ್ನಡ-ತೆಲಗು ದ್ವಿಭಾಷಿಕರು	ತೆಲಗು-ಕನ್ನಡ ದ್ವಿಭಾಷಿಕರು
ಒಟ್ಟು ಭಾಷಿಕರು	೫.೩	೩.೫	೧೮.೧	೬೩.೯
ಪುರುಷರು	೫.೮	೨.೧	೧೮.೩	೭೫.೭
ಮಹಿಳೆ	೭.೧	೨.೦	೧೭.೬	೭೪.೬

ನಕ್ಷೆ ೪

ವೈಶ್ಯ ಜಾತಿಯಲ್ಲಿನ ಭಾಷಿಕ ಅಂಕಿ ಅಂಶಗಳು



ಇಲ್ಲಿ ಒಟ್ಟು ತೆಲಗು-ಕನ್ನಡ ದ್ವಿಭಾಷಿಕರಲ್ಲಿ ಪುರುಷರು ಹಾಗೂ ಮಹಿಳೆಯರನ್ನು ಪ್ರತ್ಯೇಕವಾಗಿ ಪ್ರತಿಶತ ಅಂಕಿ-ಅಂಶಗಳನ್ನು ದಾಖಲಿಸಿದೆ. ಪುರುಷರ ಶೇ.೭೫.೨ರಷ್ಟು ಮಹಿಳೆಯರಲ್ಲಿ ಶೇ.೭೪.೬ರಷ್ಟು ತೆಲುಗು-ಕನ್ನಡ ದ್ವಿಭಾಷಿಕರಿದ್ದಾರೆ.

ಲಿಂಗವನ್ನಾಧರಿಸಿ ನೋಡಿದಾಗ ತೆಲುಗು ಏಕಭಾಷಿಕರಲ್ಲಿ ೩.೫ರಷ್ಟು ಪುರುಷರಲ್ಲಿ ೨.೧ ರಷ್ಟು ಹಾಗೂ ಮಹಿಳೆಯರಲ್ಲಿ ೨.೦ ರಷ್ಟು ಏಕಭಾಷಿಕರಾಗಿದ್ದಾರೆ. ಇವರು ವಿವಾಹ ಸಂಪರ್ಕದಿಂದಾಗಿ ಆಂಧ್ರದಿಂದ ಬಂದ ಕೆಲವು ಮಹಿಳೆಯರು ಸಾಮಾಜಿಕ ಸಂದರ್ಭಗಳಿಗೆ ತೆರೆದುಕೊಳ್ಳುವುದಿಲ್ಲ. ಆದ್ದರಿಂದ ಏಕಭಾಷಿಕರಾಗಿಯೇ ಉಳಿದಿದ್ದಾರೆ. ಇತ್ತೀಚೆಗೆ ಕನ್ನಡವನ್ನು ಅರ್ಥ ಮಾಡಿಕೊಳ್ಳುವ ಸಾಮಾರ್ಥ್ಯವನ್ನು ಹೊಂದುತ್ತಿದ್ದಾರೆ. ಇವರ ಮಕ್ಕಳು ಕನ್ನಡ ಏಕಭಾಷಿಕರಲ್ಲದೆ ಟಿ.ವಿ, ಪತ್ರಿಕೆ, ಅಕ್ಕಪಕ್ಕದವರೊಂದಿಗೆ ಸಂಪರ್ಕ ಹೊಂದಿರುವುದರಿಂದ ಕನ್ನಡ-ತೆಲುಗು ಎರಡು ಭಾಷೆಗಳನ್ನು ಬಳಸುತ್ತಾರೆ. ವೈಶ್ಯರು ಆಂಧ್ರದಿಂದ ಬಂದ ನೆಲಸಿರುವುದರಿಂದ ತೆಲುಗು-ಕನ್ನಡ ದ್ವಿಭಾಷಿಕರ ಪ್ರಮಾಣವು ಹೆಚ್ಚಾಗಿದ್ದಾರೆ. ಈ ಪ್ರಮಾಣವು ಬಳ್ಳಾರಿಗೆ ಹೋಲಿಸಿದರೆ ಕಡಿಮೆಯಾಗಿದೆ. ವೈಶ್ಯರ ತಲೆ ಮಾರಿನಿಂದ ತಲೆಮಾರಿಗೆ ಹೋಲಿಸಿ ನೋಡಿದರೆ ಕನ್ನಡವನ್ನು ಕಲಿಯುವ ಸಂದರ್ಭಗಳು ಹೆಚ್ಚಾಗುತ್ತವೆ.

ಪರಿಶಿಷ್ಟ ಜಾತಿಗಳು

ಸರ್ಕಾರವು ಪರಿಶಿಷ್ಟ ಜಾತಿಗಳನ್ನು ಗುರುತಿಸಿ ಪ್ರತ್ಯೇಕವಾಗಿ ಮೀಸಲಾತಿಯನ್ನು ನಿರ್ಧರಿಸಿದ ಕೆಲವು ಜಾತಿಗಳನ್ನು ಪರಿಶಿಷ್ಟ ಜಾತಿಗಳೆಂದು ಕರೆಯುತ್ತೇವೆ. ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ದೊರೆತ ಕೆಲ ಪ.ಜಾತಿಗಳನ್ನು ಆಧಾರವಾಗಿಟ್ಟುಕೊಂಡು ಇಲ್ಲಿ ಬರುವ ಜಾತಿಗಳನ್ನು ಸ್ಥೂಲವಾಗಿ ಅವುಗಳ ಭಾಷಿಕ ಅಂಶಗಳೊಂದಿಗೆ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ರಾಯಚೂರು, ಮಾನ್ವಿ ಪರಿಸರದಲ್ಲಿ ಪರಿಶಿಷ್ಟ ಜಾತಿಗಳು ಹೆಚ್ಚಾಗಿರುವುದನ್ನು ಗಮನಿಸಬಹುದಾಗಿದೆ.

ಮಾದಿಗ

ಮಾದಿಗ ಸಮುದಾಯದವರು ಜಿಲ್ಲೆಯಾದ್ಯಂತ ವಾಸವಾಗಿದ್ದಾರೆ. ರಾಯಚೂರಿನಲ್ಲಿ ಪ್ರತಿಶತ ೩೦ ರಿಂದ ೪೦ ಜನರು ಇಲ್ಲಿ ವಾಸವಾಗಿದ್ದಾರೆ. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಗಡಿ ಪ್ರದೇಶಗಳಲ್ಲಿ ಇವರು ವಾಸವಾಗಿದ್ದರಿಂದ ಕನ್ನಡ-ತೆಲುಗು ದ್ವಿಭಾಷಿಕರಾಗಿದ್ದಾರೆ ಹಾಗೂ ಈ ಸಮುದಾಯದ ಕೆಲ ಕುಟುಂಬಗಳಲ್ಲಿ ಮನೆ ಮಾತು ತೆಲುಗು ಆಗಿದೆ. ತೆಲುಗಿನ ಜೊತೆಗೆ ಕನ್ನಡ ಕಲಿತು ದ್ವಿಭಾಷಿಕರಾಗಿದ್ದಾರೆ. ಇವರು ತಮ್ಮ ಸಾಂಪ್ರದಾಯಿಕ ವೃತ್ತಿಯನ್ನು ಅಂದರೆ ಚಪ್ಪಲಿ ಹೊಲಿಯುವುದು, ಚರ್ಮ ಹದಮಾಡುವುದು ಹಾಗೂ ವ್ಯವಸಾಯದ ಸಂದರ್ಭದಲ್ಲಿ ಕೂಲಿಗಳಾಗಿ ದುಡಿಯುತ್ತಾರೆ. ಆರ್ಥಿಕವಾಗಿ, ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಿಂದುಳಿದವರಾಗಿದ್ದಾರೆ. ತೆಲುಗು-ಕನ್ನಡ ಹಾಗೂ ಕನ್ನಡ-ತೆಲುಗು ಮಾತನಾಡುತ್ತಾರೆ.

ಸಿಳ್ಳ್ಯಾಕ್ಯಾತರು

ಸಿಳ್ಳ್ಯಾಕ್ಯಾತರ ಸಮುದಾಯವು ರಾಯಚೂರು ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಾರೆ. ಇವರು ಸರ್ಕಾರದ ಪ್ರಕಾರ ಪರಿಶಿಷ್ಟ ಜಾತಿಗಳೆಂದು ಗುರುತಿಸಲ್ಪಟ್ಟವರಾಗಿದ್ದಾರೆ. ಇವರ ಮನೆ ಮಾತು ಕೆಲಕುಟುಂಬಗಳು ತೆಲುಗು, ಇನ್ನೂ ಕೆಲವರು ಮರಾಠಿ ಭಾಷೆಯನ್ನು ಮಾತಾಡುವುದರೊಂದಿಗೆ ಕನ್ನಡವನ್ನು ಮಾತಾಡುತ್ತಾರೆ. ಇವರು ಬಹುಭಾಷಿಕರಾಗಿಯೂ ಇಲ್ಲಿ ನೆಲಸಿದ್ದಾರೆ. ಇವರು ಕೌದಿ ಹೊಲೆಯುವುದು, ಕೂಲಿ ಮಾಡುವುದು, ತೊಗಲು ಗೊಂಬೆ ಆಟ ಆಡಿಸಿ ಜೀವನ ನಡೆಸುವುದು ಹಾಗೂ ಗಿಳಿ ಪಂಚಾಂಗ ಹೇಳುವುದು ಮುಂತಾದ ಕೆಲಸ ಮಾಡಿ ತಮ್ಮ ಹೊಟ್ಟೆ ಹೊರೆಯುತ್ತಾರೆ. ಇವರು ಕೂಡ ಕನ್ನಡದೊಂದಿಗೆ ತೆಲುಗು, ಮರಾಠಿಯನ್ನು ಭಾಷಿಕವಾಗಿ ಬಳಸುತ್ತಾರೆ. ಇವರನ್ನು 'ಸಿಳ್ಳ್ಯಾಕ್ಯಾತ' ಅಥವಾ ಕಿಳ್ಳ್ಯಾಕ್ಯಾತರೆಂದು ಕರೆಯುತ್ತಾರೆ.

ವಡ್ಡರು

ವಡ್ಡರ ಸಮುದಾಯವು ಕರ್ನಾಟಕದ ಮೂಲೆ ಮೂಲೆಗಳಲ್ಲಿ ಕಂಡುಬರುತ್ತಾರೆ. ಅಂತೆಯೇ ರಾಯಚೂರು ಮಾನ್ವಿ ತಾಲೂಕುಗಳಲ್ಲಿ 'ವಡ್ಡರು' ಕಾಣಿಸಿಕೊಳ್ಳುತ್ತಾರೆ. ಇವರನ್ನು 'ಬೋವಿ' 'ವಡ್ಡ' ಮುಂತಾದ ಹೆಸರುಗಳಿಂದ ಪ್ರಸಿದ್ಧಿಯಾಗಿದ್ದಾರೆ. ಇವರ ಮನೆ ಮಾತು ತೆಲುಗು ಇವರ ಮೂಲ ಕಸುಬು, ಗೋಡೆ ಕಟ್ಟುವುದು, ಕಲ್ಲು ಹೊಡೆಯುವುದು ಕೂಲಿ ಕೆಲಸ ಮಾಡುವುದು ಇವರ ಸಾಂಪ್ರದಾಯಿಕ ವೃತ್ತಿಗಳಾಗಿವೆ. ಇದರಲ್ಲಿ ಹೆಚ್ಚಿನ ಕುಟುಂಬಗಳು ಬಡಕುಟುಂಬಗಳಾಗಿವೆ. ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದವರಾಗಿದ್ದಾರೆ.

ರಾಯಚೂರಿನಲ್ಲಿ ಪ್ರದೇಶದಿಂದ ಬಂದಂತಹ ಅನೇಕ ಬೋವಿ ಕುಟುಂಬಗಳ ಭಾಷೆಯು ತೆಲುಗುವಾಗಿದೆ. ಇವರು ಉದ್ಯೋಗ ಕಾರಣದಿಂದ ವಲಸೆ ಬಂದು ಇಲ್ಲಿ ನೆಲಸಿದ್ದಾರೆ. ಇವರಲ್ಲಿ ಹೆಚ್ಚು ಅನಕ್ಷರಸ್ಥರಿರುವುದು ಕಾಣಬಹುದಾಗಿದೆ. ಇವರು ಒಟ್ಟಿಗೆ ವಾಸಿಸುವುದರಿಂದ ತಮ್ಮ ಮನೆ ಮಾತಾಗಿರುವ ತೆಲುಗಿನಲ್ಲೆ ತಮ್ಮ ಭಾಷೆಯನ್ನು ಬಳಸುತ್ತಿದ್ದಾರೆ. ಹೊರಗೆ ಹೆಚ್ಚಾಗಿ ಕನ್ನಡ-ತೆಲುಗು ಭಾಷೆಯನ್ನೆ ಅವರು ಮಾತಾಡುತ್ತಾರೆ. ಇವರಲ್ಲಿ ತೆಲುಗು-ಕನ್ನಡ ದ್ವಿಭಾಷಿಕರ ಸಂಖ್ಯೆಯು ಹೆಚ್ಚಾಗಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬರುತ್ತದೆ.

ದಾಸರು

ಮೂಲತಃ ತೆಲುಗು ಭಾಷಿಕರಾಗಿರುವ ದಾಸರು ಕರ್ನಾಟಕದ ಗಡಿ ಭಾಗಗಳಲ್ಲಿ ಕಂಡುಬರುತ್ತಾರೆ. ಇವರು ಆರ್ಥಿಕವಾಗಿ ಶೈಕ್ಷಣಿಕವಾಗಿ ಹಿಂದುಳಿದಿದ್ದು ಇವರನ್ನು ಸರ್ಕಾರ ಪ.ಜಾತಿಗಳೆಂದು ಗುರುಸಿದೆ.

[illegible]

ರಾಯಚೂರಿನಲ್ಲಿಯೂ ಕೂಡ ದಾಸರು ಇದ್ದಾರೆ. ಇವರು ಆಂಧ್ರದಿಂದ ವಲಸೆ ಬಂದವರಾಗಿದ್ದಾರೆ. ಇವರ ಮೂಲ ಉದ್ಯೋಗ ಭಿಕ್ಷೆ ಬೇಡುವುದು. ಸಾಂಪ್ರದಾಯಿಕ ವೃತ್ತಿಯನ್ನು ಕೃಷಿ ಕೂಲಿ ಮಾಡುವುದಾಗಿದೆ. ಮಾನ್ವಿ ತಾಲೂಕಿನ ದಾಸರು ತಂಬೂರಿ ಹಿಡಿದು ಮನೆ ಮನೆಗೆ ಹೋಗಿ ಭಿಕ್ಷೆ ಬೇಡಿ ಬಂದ ದವಸ ಧಾನ್ಯದಲ್ಲಿ ಜೀವನ ನಡೆಸುತ್ತಾರೆ. ಇದು ಸಂಪ್ರದಾಯವಾಗಿ ಕಾಲದಿಂದ ಬಂದಿರುವಂತ ವೃತ್ತಿ ಎಂದು ಹೇಳುತ್ತಾರೆ.

ದಾಸರು ಅನೇಕ ಸಂದರ್ಭದಲ್ಲಿ ನಾಟಕ ಪಾತ್ರಧಾರಿಗಳಾಗಿ ಊರೂರು ಅಲೆಯುತ್ತಾರೆ. ಕರ್ನಾಟಕ-ಆಂಧ್ರದಲ್ಲಿ ಅವರ ಸಂಬಂಧಗಳು ಇವೆ. ಹಾಗಾಗಿ ಕನ್ನಡ ಅವರು ಲಿಪಿಭಾಷೆಯಾಗಿ ಬಳಸಿದರೆ, ತೆಲಗು ಮನೆ ಮಾತಾಗಿ ಬಳಸುತ್ತಾರೆ ಇವರು ತೆಲುಗು ಕನ್ನಡ ದ್ವಿಭಾಷಿಕರಾಗಿದ್ದಾರೆ.

ಮೇಲಿನ ಎಲ್ಲಾ ಪರಿಶಿಷ್ಟ ಜಾತಿಗಳನ್ನು ಸಮೀಕ್ಷೆ ಮಾಡಿದಾಗ ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಗಳನ್ನು ಇಟ್ಟುಕೊಂಡು ಭಿನ್ನವಾಗಿರುವ ಭಾಷಿಕ ಅಂಶಗಳನ್ನು ಕಂಡುಕೊಳ್ಳಲಾಗಿದೆ.


ಪಟ್ಟಿ ೫

ಪರಿಶಿಷ್ಟ ಜಾತಿಯಲ್ಲಿನ ಭಾಷಿಕ ಅಂಶಗಳು

ಭಾಷಿಕರು	ಕನ್ನಡ ಏಕಭಾಷಿಕರು	ತೆಲಗು ಏಕಭಾಷಿಕರು	ಕನ್ನಡ-ತೆಲಗು ದ್ವಿಭಾಷಿಕರು	ತೆಲಗು-ಕನ್ನಡ ದ್ವಿಭಾಷಿಕರು
ಒಟ್ಟು ಭಾಷಿಕರು	೪.೩	೧೪.೫	೧೨.೨	೫೯.೪
ಪುರುಷರು	೧.೦	೧೦.೨	೧೩.೩	೬೦.೦
ಮಹಿಳೆ	೧.೫	೧೮.೦	೧೦.೦	೫೮.೯

ನಕ್ಷೆ ೫

ಪರಿಶಿಷ್ಟ ಜಾತಿಯಲ್ಲಿನ ಭಾಷಿಕ ಅಂಕಿ ಅಂಶಗಳು



ಮೇಲ್ವರ್ಗದವರಾಗಿದ್ದು ಇವರು ಸರ್ಕಾರಿ ಅರೆಸರ್ಕಾರಿ ಉದ್ಯೋಗದಲ್ಲಿರುವವರು ಹಾಗೂ ಬೇರೆ ಕಡೆಯಿಂದ ಉದ್ಯೋಗಕ್ಕಾಗಿ ವಲಸೆ ಬಂದವರಾಗಿದ್ದಾರೆ. ಇಲ್ಲಿ ತೆಲುಗು ಏಕ ಭಾಷಿಕರು ಹಾಗೂ ತೆಲುಗು-ಕನ್ನಡ ದ್ವಿಭಾಷಿಕರಾಗಲು ಮುಖ್ಯವಾಗಿ ವೈವಾಹಿಕ ಸಂಬಂಧದಿಂದ ದ್ವಿಭಾಷಿಕತೆ ಉಂಟಾಗಿದೆ ಹಾಗೂ ಉದ್ಯೋಗಕ್ಕಾಗಿ ವಲಸೆಯಿಂದ ದ್ವಿಭಾಷಿಕತೆ ಉಂಟಾಗಿದೆ.

ಇವರ ಮನೆಗಳಲ್ಲಿ ಹಾಗೂ ಇತರ ಸಂಬಂಧಿಕರೊಂದಿಗೆ ಹೆಚ್ಚು ತೆಲುಗು ಭಾಷೆಯನ್ನು ಮಾತನಾಡುತ್ತಾರೆ. ಇದರಿಂದ ತೆಲುಗು ಭಾಷಾ ಸಂಗೋಪನೆಯಾಗುತ್ತಿದೆ. ಕೆಲವು ಸಾಮಾಜಿಕ ನಿರ್ಬಂಧನೆಗಳು ಹೆಚ್ಚಿರುವ ಈ ಸಮುದಾಯಗಳು ಸಾಮಾಜಿಕ ಸಂದರ್ಭಗಳು ಅವಕಾಶ ಕಡಿಮೆ. ಒಟ್ಟು ತೆಲುಗು ಭಾಷಿಕರಲ್ಲಿ ಶೇ.೧೦.೨ರಷ್ಟು ಪುರುಷರು ಹಾಗೂ ಶೇ.೧೮.೦ರಷ್ಟು ಮಹಿಳೆಯರು ತೆಲುಗು ಏಕಭಾಷಿಕರಾಗಿದ್ದಾರೆ. ಇದಕ್ಕೆ ಕಾರಣ ಈ ಸಮುದಾಯದಲ್ಲಿ ಹೆಚ್ಚು ಅನಕ್ಷರಸ್ಥರಿರುವುದರಿಂದ ವೈವಾಹಿಕ ಕಾರಣಗಳಿಂದ ಏಕ ಭಾಷಿಕರಾಗಿದ್ದಾರೆ.

ದ್ವಿಭಾಷಿಕ ಪ್ರಮಾಣವನ್ನು ಗಮನಿಸಿದಾಗ ಒಟ್ಟು ೫೯.೪ ರಷ್ಟು ತೆಲುಗು ಕನ್ನಡ ದ್ವಿಭಾಷಿಕರಲ್ಲಿ ೬೦.೦ ಪುರುಷರು ೫೮.೯ ರಷ್ಟು ಮಹಿಳೆಯರಲ್ಲಿಯೂ ಕಾಣವುದು ಗಮನಾರ್ಹ. ಅನೇಕ ಸಂದರ್ಭದಲ್ಲಿ ಇವರು ಕನ್ನಡಿಗರೊಂದಿಗೆ ವ್ಯವಹರಿಸುವಾಗ ಸಾಮಾಜಿಕ ಸಂಪರ್ಕ ಮಾಡುವಾಗ, ಕೆಲಸ ಮಾಡುವಾಗ ಬಹುಸಂಖ್ಯೆಯಲ್ಲಿರುವ ಕನ್ನಡಿಗರೊಂದಿಗೆ ಸಂವಹನ ಮಾಡಬೇಕಾಗುತ್ತದೆ. ಆದ್ದರಿಂದ ತೆಲುಗು ಏಕಭಾಷಿಕರು ಕನ್ನಡಕ್ಕೆ ಪಲ್ಲಟಗೊಂಡಿದ್ದಾರೆ. ಸಮಾಜದಲ್ಲಿ ಅಥವಾ ಕನ್ನಡ ಪ್ರದೇಶದಲ್ಲಿ ತಮ್ಮ ಸ್ಥಾನಮಾನವನ್ನು ಹೆಚ್ಚಿಸಿಕೊಳ್ಳಲು ಕನ್ನಡ ಕಲಿಯುವ ಸಂದರ್ಭಗಳು ಅಧಿಕವಾಗಿವೆ. ಪುರುಷರಷ್ಟು ಮಹಿಳೆಯರು ಕೂಡ ಕನ್ನಡ-ತೆಲುಗು ಹಾಗೂ ತೆಲುಗು-ಕನ್ನಡ ಭಾಷೆಯನ್ನು ಮಾತಾಡುತ್ತಾರೆ. ಏಕೆಂದರೆ ಇವರು ಹೆಚ್ಚಾಗಿ ಕೂಲಿ ಮಾಡುವ ಸಂದರ್ಭದಲ್ಲಿ ಸಾಮಾಜಿಕರೊಂದಿಗೆ ಬೆರೆಯುತ್ತಾರೆ. ಹಾಗೂ ಅಕ್ಕಪಕ್ಕದವರೊಂದಿಗೆ ಕನ್ನಡವನ್ನು ಕಲಿಯುವ ಅನಿವಾರ್ಯತೆ, ಅಗತ್ಯತೆ ಇದೆ. ಮತ್ತು ಈ ಸಮುದಾಯದವರ ಮಕ್ಕಳು ಕರ್ನಾಟಕದಲ್ಲಿರುವುದರಿಂದ ಕನ್ನಡಕ್ಕೆ ಬೆಲೆ ಹೆಚ್ಚು ಎನ್ನುವ ಕಾರಣಕ್ಕೆ ಕನ್ನಡ ಶಾಲೆ ಸೇರಿರುವುದರಿಂದ ಮಕ್ಕಳೊಂದಿಗೆ ವ್ಯವಹರಿಸುವುದು ಕನ್ನಡದಲ್ಲಿ ಪ್ರತಿ ಹಂತದಲ್ಲಿ ಕನ್ನಡಿಗರೊಂದಿಗೆ ಕನ್ನಡ ಕಲಿಯುವ ಅವಶ್ಯಕತೆ ಇದೆ. ಹಾಗೂ ಇದರಲ್ಲಿರುವ ಅನೇಕರು ಮೇಲ್ವರ್ಗದವರು, ನೌಕರಿಯಲ್ಲಿರುವವರು, ಮಧ್ಯಮ ವರ್ಗದವರು ಶೈಕ್ಷಣಿಕವಾಗಿ ಉನ್ನತ ಸ್ಥಾನಮಾನ ಹೊಂದಿದವರು ಕನ್ನಡವನ್ನು ಹೆಚ್ಚಿನ ಸಂದರ್ಭಗಳಲ್ಲಿ ಬಳಸುತ್ತಾರೆ. ಆದ್ದರಿಂದ ಹೆಚ್ಚಾಗಿ ಮಾನ್ವಿ ತಾಲ್ಲೂಕಿನಲ್ಲಿ ಇಂತಹ ಸನ್ನಿವೇಶಗಳನ್ನು ಕಾಣಬಹುದು. ಇಲ್ಲಿ ಕನ್ನಡ ತೆಲುಗು ದ್ವಿಭಾಷಿಕರು ಇದ್ದಾರೆ. ಪಟ್ಟಣ ಪ್ರದೇಶದಲ್ಲಿ ಮೂಲ ವೃತ್ತಿಯನ್ನು ಬಿಟ್ಟು ಬೇರೆ ಬೇರೆ ಕೆಲಸ ಮಾಡುವವರು ತಮ್ಮ ಮನೆ ಮಾತಿನೊಂದಿಗೆ ಬೇರೆ ಭಾಷೆಯನ್ನು ಬಳಸುತ್ತಾರೆ. ಉದಾ : ಆಟೋ ಓಡಿಸುವವರು, ಕ್ಷೌರಿಕರು,

ಅಮಾಲಿ ಮಾಡುವವರು, ಕೂಲಿ ಮಾಡುವವರು ಮುಂತಾದವರು ದ್ವಿಭಾಷಿಕರಾಗಿರುವುದು ಈ ಪ್ರದೇಶದಲ್ಲಿ ಕಾಣಬಹುದಾಗಿದೆ.

ಪರಿಶಿಷ್ಟ ಪಂಗಡ (ನಾಯಕ)

ಕರ್ನಾಟಕದಲ್ಲಿ ವಿವಿಧ ಭಾಗಗಳಲ್ಲಿ ಪರಿಶಿಷ್ಟ ಪಂಗಡದ ಸಮುದಾಯದವರು ವಾಸವಾಗಿದ್ದಾರೆ. ಇವರನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ನಾಯಕ, ಬೇಡರು, ಬ್ಯಾಡರು, ತಳವಾರ, ಪಾಳೆಗಾರ ಹಾಗೂ ವಾಲ್ಮೀಕಿ ಎಂದು ಕರೆಯುತ್ತಾರೆ. ಇವರು ಅನೇಕ ವರ್ಷಗಳಿಂದ ಕರ್ನಾಟಕದಲ್ಲಿ ನೆಲಸಿರುವರು. ಇವರ ಮನೆ ಮಾತು ಕನ್ನಡ ಹಾಗೂ ತೆಲುಗು ಎರಡು ಭಾಷೆಗಳನ್ನು ಮಾತಾಡುತ್ತಾರೆ. ಗಡಿ ಪ್ರದೇಶಗಳಲ್ಲಿ ತೆಲುಗು-ಕನ್ನಡ ಹೆಚ್ಚು ಇರುವುದು ಕಾಣುತ್ತದೆ.

ರಾಯಚೂರು ಪ್ರದೇಶದಲ್ಲಿ ನಾಯಕರು ಬಹು ಸಂಖ್ಯಾತರಿರುವುದು ಕಂಡುಬರುತ್ತದೆ. ಇವರು ಇತ್ತೀಚೆಗೆ ರಾಜಕೀಯ ಪ್ರಾಬಲ್ಯವನ್ನು ಮೆರೆದಿದ್ದಾರೆ. ಮಾನ್ವಿಯ ಚುನಾವಣೆ ಸಮಯದಲ್ಲಿ ನಾಯಕರೇ ಅಂತಿಮ ತೀರ್ಮಾನ ನೀಡುವವರಾಗಿದ್ದಾರೆ. ಇವರು ತೆಲುಗು-ಕನ್ನಡ ಮತ್ತು ಕನ್ನಡ ತೆಲುಗು ಎರಡು ಭಾಷೆಗಳನ್ನು ಮಾತನಾಡುತ್ತಾರೆ. ಹಾಗೂ ಇವರಲ್ಲಿ ಅನೇಕರು ಪಕ್ಕದ ಆಂಧ್ರದಿಂದ ಬಂದು ನೆಲೆಸಿದವರು ಬಹುಸಂಖ್ಯಾತರಿದ್ದಾರೆ. ಈ ಪ್ರದೇಶದಲ್ಲಿ ಅವಿಭಕ್ತ ಕುಟುಂಬಗಳೇ ಅಧಿಕ. ಇವರಲ್ಲಿ ಹೆಚ್ಚು ಮಹಿಳೆಯರು ಅವಿದ್ಯಾವಂತರಾಗಿದ್ದಾರೆ. ಮಹಿಳೆಯರು ಹೆಚ್ಚು ಕೆಲಸ ಮಾಡಿ ಕುಟುಂಬದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಮಹಿಳೆಯರು ಕೃಷಿ ಕೆಲಸ, ಕೂಲಿ ಕೆಲಸ, ತರಕಾರಿ ಮಾರುವುದು ಮುಂತಾದ ಕೆಲಸಗಳಲ್ಲಿ ಭಾಗಿಗಳಾಗಿ ಕೆಲಸ ಮಾಡುತ್ತಾರೆ. ಪುರುಷರಿಗಿಂತ ಮಹಿಳೆಯರೇ ಹೆಚ್ಚು ಕೂಲಿ ಕೆಲಸ ಗ್ರಾಮೀಣ ಪ್ರದೇಶದಲ್ಲಿ ಮಾಡುತ್ತಾರೆ. ಈ ಸಮುದಾಯದಲ್ಲಿ ಮೇಲ್ವರ್ಗ, ಮಧ್ಯಮವರ್ಗ, ಉನ್ನತ ವರ್ಗ, ಶೈಕ್ಷಣಿಕ ಅರ್ಹತೆಗಳೆಂದು ಉನ್ನತ ಹುದ್ದೆಯಲ್ಲಿರುವವರು, ಸರ್ಕಾರಿ, ಖಾಸಗೀ ಉದ್ಯೋಗಗಳನ್ನು ಮಾಡುವವರು ಇದ್ದಾರೆ.


ಪಟ್ಟಿ ೬

ಪರಿಶಿಷ್ಟ ಪಂಗಡದಲ್ಲಿನ ಭಾಷಿಕ ಅಂಶಗಳು

ಭಾಷಿಕರು	ಕನ್ನಡ ಏಕಭಾಷಿಕರು	ತೆಲಗು ಏಕಭಾಷಿಕರು	ಕನ್ನಡ-ತೆಲಗು ದ್ವಿಭಾಷಿಕರು	ತೆಲಗು-ಕನ್ನಡ ದ್ವಿಭಾಷಿಕರು
ಒಟ್ಟು ಭಾಷಿಕರು	೧೦.೦	೧೪.೧	೧೮.೯	೪೦.೨
ಪುರುಷರು	೧೬.೮	೯.೬	೧೬.೨	೫೩.೩
ಮಹಿಳೆ	೯.೫	೧೫.೩	೦೯.೦	೫೧.೨

ನಕ್ಷೆ ೬

ಪರಿಶಿಷ್ಟ ಪಂಗಡದಲ್ಲಿನ ಭಾಷಿಕ ಅಂಕಿ ಅಂಶಗಳು



ಮೇಲಿನ ಅಂಶಗಳನ್ನು ಗಮನಿಸಿದಾಗ ಮಹಿಳೆಯರಿಗಿಂತ ಪುರುಷರೇ ಹೆಚ್ಚು ಕನ್ನಡ ಏಕಭಾಷಿಕರಾಗಿ ಕಾಣುತ್ತಾರೆ. ಒಟ್ಟು ತೆಲುಗು ಕನ್ನಡ ದ್ವಿಭಾಷಿಕರಲ್ಲಿ ಮಹಿಳೆಯರಲ್ಲಿಯೇ ಶೇ.೫೧.೨ ಹಾಗೂ ಪುರುಷರು ಪ್ರತಿಶತ ಶೇ.೫೩.೩ರಷ್ಟು ತೆಲುಗು ಕನ್ನಡ ದ್ವಿಭಾಷಿಕರನ್ನು ಕಾಣಬಹುದು. ಒಟ್ಟು ತೆಲುಗು ಭಾಷಿಕರಲ್ಲಿ ಲಿಂಗಾಧಾರಿತ ಭಿನ್ನತೆಗಳನ್ನು ನೋಡಿದಾಗ ಮಹಿಳೆಯರಲ್ಲಿ ೧೫.೩ರಷ್ಟು ಹಾಗೂ ಪುರುಷರಲ್ಲಿ ೯.೬ರಷ್ಟು ಮಾತ್ರ ತೆಲುಗು ಭಾಷಾ ಬಳಕೆಯಾಗುತ್ತಿದೆ. ಈ ಅಂಕಿಗಳನ್ನು ಗಮನಿಸಿದಾಗ ಮಹಿಳೆಯರು ಹೆಚ್ಚಾಗಿ ಹೊರಗಡೆ ದುಡಿಯುವುದರಿಂದ ಕೆಲಸಕ್ಕಾಗಿ ಬೇರೆ ಬೇರೆ ಕಡೆ ಅಲೆಯುವುದರಿಂದ ಹಾಗೂ ಮೂಲತಃ ಹೆಚ್ಚಾಗಿ ತೆಲುಗು ಮಾತೃ ಭಾಷೆಯಾಗಿದ್ದರಿಂದ ಪುರುಷರಿಗಿಂತ ತೆಲುಗು ಏಕಭಾಷಿಕರು ಮಹಿಳೆಯರೇ ಆಗಿದ್ದಾರೆ. ಇವರು ತೆಲುಗಿನ ಸಾಮಾಜಿಕ ಸಂಬಂಧಗಳಿಗೆ ಹೆಚ್ಚು ಒಳಗಾಗುವುದರಿಂದ ಕನ್ನಡ ಕಲಿಯುವ ಸಂದರ್ಭಗಳು ಕಡಿಮೆ ಹಾಗೂ ವಯಸ್ಸನ್ನು ಆಧಾರವಾಗಿಟ್ಟುಕೊಂಡಾಗ ಭಾಷೆಯನ್ನು ಕಲಿಯುವ ಅವಕಾಶ ತಪ್ಪಿಸಿಕೊಂಡಾಗ ಅವರ ಬುದ್ಧಿವಂತೆಗೆ ಅನುಕೂಲವಾಗಿ ಬೇರೆ ಬೇರೆ ಭಾಷೆಯನ್ನು ಕಲಿಯುತ್ತಾರೆ. ಆದ್ದರಿಂದ ಇಲ್ಲಿ ಅರ್ಧಕ್ಕಿಂತಲೂ ಕನ್ನಡ-ತೆಲುಗು ಹಾಗೂ ತೆಲುಗು-ಕನ್ನಡ ಪ್ರಮಾಣ ಅಧಿಕವಾಗಿದೆ.

ಈ ಸಮುದಾಯದವರಲ್ಲಿ ಇತ್ತೀಚೆಗೆ ಕನ್ನಡ ಬಳಕೆಯ ಸಂದರ್ಭಗಳು ಹೆಚ್ಚಾಗುತ್ತಿವೆ. ಇದರಿಂದ ಸಾಕ್ಷರತೆಯ ಕೌಶಲಗಳು ಕನ್ನಡದಲ್ಲಿಯೇ ಅಧಿಕವಾಗುತ್ತಿವೆ. ಕರ್ನಾಟಕ ಸರ್ಕಾರದ ಆಡಳಿತದ ನಿರ್ಧಾರಗಳಿಂದಾಗುವ ಪ್ರಯೋಜನವನ್ನು ಪಡೆದುಕೊಳ್ಳುವ ಪ್ರಯತ್ನದಲ್ಲಿ ಕನ್ನಡ ಭಾಷೆಗೆ ಪಲ್ಲಟಗಳು

ಹೆಚ್ಚಾಗುತ್ತಿವೆ. ಈ ಸಮುದಾಯದವರಲ್ಲಿ ಮಧ್ಯಮ ಮೇಲ್ ಮಧ್ಯಮ ಉನ್ನತ ವರ್ಗದಲ್ಲಿ ಸರ್ಕಾರಿ ಹುದ್ದೆಗಳಲ್ಲಿರುವವರು ಆರ್ಥಿಕವಾಗಿ ಸಾಮಾಜಿಕವಾಗಿ ಮುಂದುವರಿಯಲು ಪ್ರಯತ್ನಿಸಿರುವುದು ಹೆಚ್ಚು ಇಂಗ್ಲೀಶ್ -ಕನ್ನಡದಲ್ಲಿ ಸಾಕ್ಷರತೆಯ ಕೌಶಲಗಳನ್ನು ಪಡೆಯುತ್ತಿದ್ದಾರೆ. ಕೂಲಿ, ಸ್ವಯಂ ಉದ್ಯೋಗವನ್ನು ಮಾಡುತ್ತಿರುವುದರಲ್ಲಿ ಹೆಚ್ಚು ತೆಲುಗು ಭಾಷೆಯನ್ನು ಉಳಿಸಿಕೊಂಡಿದ್ದು ಮಹಿಳೆಯರು. ಈ ಪ್ರಮಾಣ ಪುರುಷರಲ್ಲಿ ಕಡಿಮೆಯಾಗಿದೆ. ಸಾಂಪ್ರದಾಯಿಕ ವೃತ್ತಿಗಳಿಂದ ಇತರ ವೃತ್ತಿಗೆ ಪಲ್ಲಟವಾಗಿರುವವರಲ್ಲಿ ಭಾಷಾ ಪಲ್ಲಟವಾಗಿರುವವರಲ್ಲಿ ಪಲ್ಲಟಗಳು ಉಂಟಾಗಿರುವುದು ಒಂದೆಡೆ ಕಂಡುಬಂದರೆ, ಇತರ ವೃತ್ತಿಗಳಿಂದ ಸರ್ಕಾರದ ಉನ್ನತ ಉದ್ಯೋಗಗಳನ್ನು ಪಡೆದುಕೊಂಡಿರುವವರಲ್ಲಿಯೂ ಭಾಷಾ ಪಲ್ಲಟಗಳು ಉಂಟಾಗಿರುವುದು ಕಾರಣವಾಗಿದೆ.

ಇತರ ಜಾತಿಗಳು

ಇಳಿಗೇರಿ

ಈಡಿಗ, ಇಳಿಗ, ಬಿಲ್ಲದ, ದೀವರ್ ಎಂದು ಕರೆಸಿಕೊಳ್ಳುವ ಇವರು ಆಂಧ್ರದಿಂದ ವಲಸೆ ಬಂದವರೆಂದು ತಿಳಿಯುತ್ತದೆ. ಇವರಲ್ಲಿ ಅನೇಕ ಪಂಗಡಗಳಿವೆ ಉಪಜಾತಿಗಳಿವೆ. ಇವರಲ್ಲಿ ಅವಿಭಕ್ತ ಕುಟುಂಬಗಳು ಹೆಚ್ಚು. ಇವರು ಮೂಲತಃ ಆಂಧ್ರದಿಂದ ಬಂದು ನೆಲೆಸಿರುವುದರಿಂದ ಇವರ ಮನೆ ಮಾತು ತೆಲುಗು ಆಗಿದೆ. ಇವರು ಕರ್ನಾಟಕದ ಗಡಿ ಜಿಲ್ಲೆಗಳಾದ ಬಳ್ಳಾರಿ, ಕೋಲಾರ್ ಮುಂತಾದ ಕಡೆ ಇರುವಂತೆ ರಾಯಚೂರಿನಲ್ಲಿಯೂ ಕೂಡ ನೆಲಸಿದ್ದಾರೆ. ಹಾಗೂ ತೆಲುಗು ಭಾಷೆಯೊಂದಿಗೆ ಕನ್ನಡವನ್ನು ಕಲಿತ ಕನ್ನಡ ಭಾಷಿಕರು ಆಗಿದ್ದಾರೆ.

ಕುಂಬಾರ

ಕುಂಬಾರರು ಕರ್ನಾಟಕದಲ್ಲಿ ಬಹುತೇಕ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ರಾಯಚೂರಿನಲ್ಲಿ ಹಾಗೂ ಮಾನ್ವಿಯಲ್ಲಿ ಇವರು ನೆಲಸಿದ್ದಾರೆ. ಇವರು ಸಾಂಪ್ರದಾಯಿಕ ವೃತ್ತಿಯಾದ ಮಣ್ಣಿನ ಪಾತ್ರೆಗಳನ್ನು ತಯಾರಿಸುವುದು ಆಗಿದೆ. ಇವರು ವೀರಶೈವ ಕುಂಬಾರ ಹಾಗೂ ಗುಂಡಭಕ್ತ ಕುಂಬಾರರು ಎಂದು ಕರೆಸಿಕೊಳ್ಳುವವರು ಇಲ್ಲಿ ನೆಲೆಸಿದ್ದಾರೆ. ಇವರು ಕನ್ನಡ ಭಾಷೆಯನ್ನು ಮನೆ ಮಾತಾಗಿ ಬಳಸುತ್ತಾರೆ ಹಾಗೂ ಬರಹದ ಭಾಷೆಯಾಗಿ ಕನ್ನಡವನ್ನೇ ಬಳಸುತ್ತಾರೆ. ವ್ಯಾಪಾರದ ಸಂದರ್ಭದಲ್ಲಿ ಇವರು ತೆಲುಗು ಭಾಷೆಗೆ ಪಲ್ಲಟ ಮಾಡಿಕೊಂಡಿದ್ದಾರೆ. ಆದ್ದರಿಂದ ಕೆಲವು ಕುಟುಂಬದವರು ತೆಲುಗು-ಕನ್ನಡವನ್ನು ಬಳಸುತ್ತಾರೆ.

ಕಬ್ಬೇರ

ಕಬ್ಬೇರ ಸಮುದಾಯದವರು ರಾಯಚೂರು ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ. ಇವರನ್ನು ಗಂಗಾ ಮತಸ್ಥರೆಂದು ಕರೆಯುತ್ತಾರೆ. ಇವರ ಮನೆ ಮಾತು ಕನ್ನಡವಾಗಿದೆ. ಈ ಸಮುದಾಯದವರಲ್ಲಿ ಕೆಲವರು ಆಂಧ್ರದಿಂದ ವಲಸೆ ಬಂದವರಾಗಿದ್ದಾರೆ. ಉದ್ಯೋಗಕ್ಕಾಗಿ, ವ್ಯಾಪಾರಕ್ಕಾಗಿ ಇವರು ಇಲ್ಲಿ ಬಂದು ನೆಲೆಸಿದ್ದಾರೆ. ಇವರು ಕೃಷಿಕೂಲಿಯೊಂದಿಗೆ ಅನೇಕ ವ್ಯಾಪಾರಗಳನ್ನು ಮಾಡಿಕೊಂಡಿದ್ದಾರೆ. ಇವರಲ್ಲಿ ಹೆಚ್ಚಾಗಿ ಮಹಿಳೆಯರಿಗಿಂತ ಪುರುಷರೇ ಕನ್ನಡ, ತೆಲುಗು ದ್ವಿಭಾಷಿಕರಾಗಿದ್ದಾರೆ.

ಅಗಸ

ರೋಬಿ, ಮಡಿವಾಳ, ಅಗಸ, ಸಕಲವಾಡು ಎಂದು ಕರೆಸಿಕೊಳ್ಳುವ ಅಗಸರು ಕರ್ನಾಟಕದ ಎಲ್ಲ ಜಿಲ್ಲೆಯಲ್ಲಿ ಕಂಡುಬರುತ್ತಾರೆ. ಕರ್ನಾಟಕದ ಗಡಿಭಾಗಗಳಲ್ಲಿ ಇವರ ಭಾಷೆ ಕನ್ನಡ, ತೆಲುಗು ಆಗಿದೆ. ಇವರು ಹೆಚ್ಚಾಗಿ ಕನ್ನಡ ಭಾಷೆಯನ್ನು ಬಳಸುವುದಲ್ಲದೆ, ಬರವಣಿಗೆ ಭಾಷೆಯಾಗಿ ಕನ್ನಡವನ್ನೇ ಬಳಸುತ್ತಾರೆ. ರಾಯಚೂರು ಪ್ರದೇಶದಲ್ಲಿ ಇವರು ಕೃಷಿಯೊಂದಿಗೆ ಸಾಂಪ್ರದಾಯಿಕ ವೃತ್ತಿಯಾಗಿರುವ ಬಟ್ಟೆ ಒಗೆಯುವುದು, ಇಸ್ತ್ರೀ ಮಾಡುವುದು ಹಾಗೂ ಡ್ರೈಕ್ಲೀನ್ ಮಾಡುವುದು ಹಾಗೂ ಕೆಲ ಕುಟುಂಬಗಳು ಕೂಲಿ ಮಾಡಿ ಜೀವನ ನಡೆಸುತ್ತಿದ್ದಾರೆ. ನಗರದಲ್ಲಿ ಹೆಚ್ಚಾಗಿ ಖಾಸಗಿ, ಸರಕಾರಿ ಉದ್ಯೋಗವನ್ನು ಇವರು ಮಾಡುತ್ತಿದ್ದಾರೆ. ಇವರು ಸಾಂಪ್ರದಾಯಿಕ ವೃತ್ತಿ ಮಾಡುತ್ತಿರುವುದರಿಂದ ಹೆಚ್ಚಿನವರು ಕನ್ನಡ-ತೆಲುಗು ದ್ವಿಭಾಷಿಕರಾಗಿದ್ದಾರೆ.

ಮುಸ್ಲಿಂ

ದೇಶದ ಬಹುತೇಕ ಕಡೆ ಮುಸ್ಲಿಂರು ವಾಸವಾಗಿದ್ದಾರೆ. ಇವರು ಕರ್ನಾಟಕದಲ್ಲಿ ಹಿಂದಿ/ಉರ್ದು ಭಾಷೆಯನ್ನು ಮನೆ ಮಾತಾಗಿ ಬಳಸುತ್ತಿದ್ದಾರೆ. ಇವರು ರಾಯಚೂರು ಪ್ರದೇಶದಲ್ಲಿ ರಾಜಕೀಯ ಪ್ರಾಬಲ್ಯ ಮೆರೆದಿದ್ದಾರೆ. ಇವರು ಜಿಲ್ಲೆಯಾದ್ಯಂತ ಬಹುತೇಕರು ವಾಸವಾಗಿದ್ದಾರೆ. ನಗರ ಪ್ರದೇಶದಲ್ಲಿ ಮುಸ್ಲಿಂರು ಬಹುಭಾಷಿಕರಾಗಿದ್ದಾರೆ. ತೆಲುಗು-ಕನ್ನಡದೊಂದಿಗೆ ತಮ್ಮ ಮನೆ ಮಾತು ಹಿಂದಿಯನ್ನು ಕೂಡ ಬಳಸುತ್ತಾರೆ. ಆದ್ದರಿಂದ ಇವರು ಬಹುಭಾಷಿಕರಾಗಿರುವುದು ಸಹಜವಾಗಿದೆ. ಇವರು ಹೆಚ್ಚಾಗಿ ನಗರ ಪ್ರದೇಶದಲ್ಲಿ ವ್ಯಾಪಾರವನ್ನು ಮಾಡುವುದರಿಂದ ಇವರು ಹಿಂದಿ ಭಾಷೆಯೊಂದಿಗೆ ಕನ್ನಡ-ತೆಲುಗಿನಲ್ಲಿ ವ್ಯವಹರಿಸಬೇಕಾಗುತ್ತದೆ. ಇದರಲ್ಲಿ ಮಹಿಳೆಯರಲ್ಲಿ ಹೆಚ್ಚು ಹಿಂದಿ ಏಕಭಾಷಿಕರಾಗಿದ್ದಾರೆ. ಇವರು ಹೊರಗಡೆ ಸಾಮಾಜಿಕ ಸಂಪರ್ಕ ಕಡಿಮೆ ಇರುವುದರಿಂದ ಭಾಷಾ ಪಲ್ಲಟಗಳು ಇವರಲ್ಲಿ ಕಡಿಮೆ.


ಪಟ್ಟಿ ೭

ಇತರ ಜಾತಿಯಲ್ಲಿನ ಅಂಕಿ ಅಂಶಗಳು

ಭಾಷಿಕರು	ಕನ್ನಡ ಏಕಭಾಷಿಕರು	ತೆಲಗು ಏಕಭಾಷಿಕರು	ಕನ್ನಡ-ತೆಲಗು ಏಕಭಾಷಿಕರು	ತೆಲಗು-ಕನ್ನಡ ಏಕಭಾಷಿಕರು
ಒಟ್ಟು ಭಾಷಿಕರು	೧೪.೮	೧.೦	೨೦.೦	೪೩.೫
ಪುರುಷರು	೫.೫	೧.೦	೧೯.೫	೬೦.೯
ಮಹಿಳೆ	೧೨.೫	೧.೫	೧೭.೩	೬೧.೦

ನಕ್ಷೆ ೭

ಇತರ ಜಾತಿಯಲ್ಲಿನ ಅಂಕಿ ಅಂಶಗಳು



ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಒಟ್ಟು ಏಕಭಾಷಿಕರ ಪ್ರಮಾಣದಲ್ಲಿ ಮಹಿಳೆಯರೇ ಹೆಚ್ಚು ಕನ್ನಡ ಬಳಸುವವರಾಗಿದ್ದಾರೆ. ಕನ್ನಡ ಏಕಭಾಷಿಕರೆಂದು ಹೇಳಿಕೊಳ್ಳುವವರೂ ಅಗಸರು, ಕುಂಬಾರರು ಹಾಗೂ ಕಬ್ಬೇರರು. ಈ ಜಾತಿಯವರಲ್ಲಿನ ಮನೆ ಮಾತು ಕನ್ನಡವೇ ಆಗಿದೆ. ತೆಲುಗು ಕಲಿಯುವ ಸಂದರ್ಭಗಳು ಹೆಚ್ಚಾಗಿ ಇಲ್ಲದಂತೆ ತೋರುತ್ತದೆ. ಈ ಸಮುದಾಯದವರು ಆರ್ಥಿಕವಾಗಿ ಸಾಮಾಜಿಕವಾಗಿ, ಹಿಂದುಳಿದವರಾಗಿದ್ದಾರೆ. ಸಾಕ್ಷರತೆಯ ಪ್ರಮಾಣಗಳು ಕಡಿಮೆ. ತೆಲುಗು ಏಕಭಾಷಿಕರೆಂದು ಕರೆಸಿಕೊಳ್ಳುವವರು ಹೆಚ್ಚಾಗಿ ಲಿಂಗಾಧಾರಿತವಾಗಿ ಹೇಳುವುದಾದರೆ ಹೆಚ್ಚು ವ್ಯತ್ಯಾಸ ಕಾಣುವುದಿಲ್ಲ. ವೈವಾಹಿಕ ಕಾರಣಗಳಿಂದಾಗಿ ಕೆಲ ಮಹಿಳೆಯರು ಏಕ ಭಾಷಿಕರಾಗಿರುವುದು ಕಂಡುಬರುತ್ತದೆ. ಇತರ ಜಾತಿಯವರು ಹೆಚ್ಚಾಗಿ ಕೃಷಿ ಹಾಗೂ ಕೂಲಿ ಸಂಪ್ರದಾಯಿಕ ವೃತ್ತಿಯನ್ನು ಮಾಡುವವರಾಗಿದ್ದಾರೆ.

ಅನೇಕ ಸಂದರ್ಭಗಳಲ್ಲಿ ಇವರು ಬೇರೆ ಬೇರೆ ಕಡೆ ಹೋಗಿ ಕೆಲಸ ನಿರ್ವಹಿಸಬೇಕಾಗಿರುವುದರಿಂದ ಬೇರೆ ಭಾಷೆಗೆ ಪಲ್ಲಟ ಅನಿವಾರ್ಯವಾಗಿ ಮಾಡಿಕೊಳ್ಳಬೇಕಾಗಿದೆ. ಆದ್ದರಿಂದ ತೆಲುಗು-ಕನ್ನಡ ಕನ್ನಡ-ತೆಲುಗು ದ್ವಿಭಾಷಿಕರ ಪ್ರಮಾಣವು ಹೆಚ್ಚಾಗಿರುವುದು ಕಂಡುಬರುತ್ತದೆ. ಇಳಿಗರು, ಕಬ್ಬೇರು ಮುಂತಾದವರು ಆಂಧ್ರದಿಂದ ವಲಸೆ ಬಂದಿರುವುದರಿಂದ ತೆಲುಗು ಕನ್ನಡ ದ್ವಿಭಾಷಿಕರ ಪ್ರಮಾಣ ಹೆಚ್ಚಾಗಿದೆ. ಶೈಕ್ಷಣಿಕ ಸಂದರ್ಭವನ್ನು ತೆಗೆದುಕೊಂಡಾಗ ಕನ್ನಡ-ಇಂಗ್ಲೀಷ್ ಭಾಷೆಗೆ ಹೆಚ್ಚು ಪಲ್ಲಟವಾಗುತ್ತಿರುವುದು ಕಂಡುಬರುತ್ತದೆ.

ಇದುವರೆಗೆ ನೋಡಿದ ಎಲ್ಲಾ ಅಂಕಿ-ಅಂಶಗಳನ್ನು ಗಮನಿಸಿದಾಗ, ವರ್ಗ, ಜಾತಿ, ಕಸುಬು, ತಲೆಮಾರು, ಗ್ರಾಮೀಣ, ನಗರ ಸಂದರ್ಭದ ಭಾಷಿಕ ಸಂರಚನೆಯಲ್ಲಿ ಅನೇಕ ಸಂಗತಿಗಳು ನಮಗೆ ಕಂಡುಬರುತ್ತದೆ. ಹಾಗೂ ಸಾಮಾಜಿಕ ಭಿನ್ನಾಂಶಗಳಲ್ಲಿ ಕೂಡ ವ್ಯತ್ಯಾಸಗಳನ್ನು ಕಾಣಬಹುದಾಗಿದೆ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಮೇಲ್ ಜಾತಿಗಳೆಂದು ಕರೆಸಿಕೊಳ್ಳುವ ಜಾತಿಗಳ ಭಾಷೆ ಒಂದು ವೈಯಕ್ತಿಕ ಪ್ರತಿಷ್ಠೆಯಾಗಿ ಬಳಕೆಯಾಗುತ್ತದೆ. ಈ ಗಡಿ ಪ್ರದೇಶದಲ್ಲಿ ಬಹುಸಂಖ್ಯಾತ ಭಾಷಿಕರು ತೆಲುಗು ಭಾಷೆಗೆ ಪಲ್ಲಟವಾಗಿರುವುದು ಇದರಿಂದ ನಮಗೆ ತಿಳಿಯುತ್ತದೆ. ಆದರೆ ಬಳ್ಳಾರಿ ಹಾಗೂ ಕೋಲಾರ ಜಿಲ್ಲೆಗೆ ಹೋಲಿಸಿದಾಗ ಇದರ ಪ್ರಮಾಣ ತೀರ ಕಡಿಮೆಯಾಗಿದೆ. ಇಲ್ಲಿ ಕನ್ನಡ ಏಕಭಾಷಿಕರೇ ಹೆಚ್ಚಾಗಿದ್ದಾರೆ. ಸಾಮಾಜಿಕ ಸಂಪರ್ಕದಿಂದ ಗಡಿ ಪ್ರದೇಶದ ತೆಲುಗಿನ ಪ್ರಭಾವದಿಂದ ಸ್ವಲ್ಪ ಮಟ್ಟಿಗೆ ಕನ್ನಡ ತೆಲುಗು ಭಾಷೆಯೊಂದಿಗೆ ಕೂಡಿ ಬಳಕೆ ಮಾಡುತ್ತಿದೆ. ಇದರಿಂದ ಕನ್ನಡ-ತೆಲುಗು ದ್ವಿಭಾಷಿಕರ ಪ್ರಮಾಣ ಕಡಿಮೆಯಾಗಿದೆ. ಶೈಕ್ಷಣಿಕ ಸಂದರ್ಭಗಳಿಗೆ ಒಳಗಾದಾಗ ಹಾಗೂ ಭಾಷಾ ಕೌಶಲಗಳು ಕೂಡ ಶೈಕ್ಷಣಿಕ ಸಂದರ್ಭದಲ್ಲಿ ಗಟ್ಟಿಗೊಳ್ಳುತ್ತವೆ.

ಈ ಎಲ್ಲಾ ಜಾತಿಗಳನ್ನು ಸಮೀಕ್ಷಿಸಿದಾಗ ಕನ್ನಡಿಗರಿಗೆ ತೆಲುಗನ್ನು ಗ್ರಹಿಸುವ ಸಾಮರ್ಥ್ಯಗಳು ಹೆಚ್ಚಿರುವುದು ಕಂಡುಬರುತ್ತವೆ. ಹಾಗೂ ಕೆಲವು ಕಡೆ ಪೂರ್ಣ ಪ್ರಮಾಣದ ದ್ವಿಭಾಷಿಕತೆಯನ್ನು ಕಾಣಬಹುದು. ಅರೆ ದ್ವಿಭಾಷಿಕತೆ ಕೆಲವು ಕಡೆ ಕಾಣಬಹುದಾಗಿದೆ ಹಾಗೂ ತೆಲುಗು ಏಕ ಭಾಷಿಕರೆನಿಸಿಕೊಂಡ ಸಮಾಜಗಳಲ್ಲಿ ಮನೆಯ ಹೊರಗಡೆ ತೆಲುಗನ್ನು ಬಿಟ್ಟು ಕನ್ನಡವನ್ನು ಹೆಚ್ಚು ಮಾತನಾಡುತ್ತಾರೆ.

ಶಿಕ್ಷಣಕ್ಕಾಗಿ, ಉದ್ಯೋಗಕ್ಕಾಗಿ, ವೈವಾಹಿಕ ಸಂಬಂಧಗಳಿಂದಾಗಿ ತೆಲುಗ-ಕನ್ನಡ ದ್ವಿಭಾಷಿಕರು ಸಾಮಾಜೋಭಾಷಿಕಾಂಶಯ ಹಾಗೂ ಸಮಾಜದ ಮೇಲ್ಮುಖ ಚಲನೆಯಿಂದಾಗಿ ಪ್ರತಿಷ್ಠೆಯ ಭಾಷೆಯಾಗಿ ಭಾಷೆ ಬಳಕೆಯಾಗುತ್ತದೆ. ಬಹುಸಂಖ್ಯಾತರು ಬಳಸುವ ಭಾಷೆಯನ್ನು ತೆಲುಗು ಭಾಷಿಕರು ಬಳಕೆ ಮಾಡುತ್ತಿದ್ದಾರೆ. ಕಸುಬುಗಳನ್ನು ಆಧರಿಸಿ ಹಾಗೂ ದ್ವಿಭಾಷಿಕರಾದವರಲ್ಲಿ ಸ್ವಲ್ಪ ಆಂಶಿಕ ಪಲ್ಲಟವಾಗಿರುವುದು ಕಂಡುಬಂದರೆ, ವೈವಾಹಿಕ ಸಂಬಂಧಗಳಿಂದುಂಟಾದ ದ್ವಿಭಾಷಿಕತೆ ಅರೆ ದ್ವಿಭಾಷಿಕ ಉಂಟಾಗುತ್ತದೆ. ಹೀಗೆ ಸಮಾಜದಲ್ಲಿ ದ್ವಿಭಾಷಿಕತೆಯ ಸಂರಚನೆಯ ಸ್ವರೂಪ ಸಾಮಾಜಿಕ ಭಿನ್ನಾಂಶಗಳಿಂದ

ನೋಡಿದಾಗ ಭಿನ್ನವಾಗಿ ಕಾಣುತ್ತದೆ. ಸಮಾಜೋ ಭಾಷಿಕ ಅಂಶಗಳು ಭಾಷಿಕರ ಕಲಿಕೆ ಬಳಕೆಯ ನೆಲೆಗಳಲ್ಲಿ ಬೀರುವ ಪರಿಣಾಮದಿಂದ ಏಕಭಾಷಿಕರು, ದ್ವಿಭಾಷಿಕರು, ಅರೆದ್ವಿಭಾಷಿಕರು ಒಂದು ದ್ವಿಭಾಷಾ ಸಂದರ್ಭದಲ್ಲಿ ಇರುವ ಸಂಗತಿಗಳು ತಿಳಿದುಬರುತ್ತವೆ. ಅದಕ್ಕಾಗಿ ಸಮಾಜದಲ್ಲಿ ಭಾಷೆ ಒಂದೇ ರೀತಿಯಾಗಿರುವುದಿಲ್ಲ.

ಸಾಮಾಜಿಕ ಚಲನೆಯಿಂದುಂಟಾದ ಭಾಷೆಯು ಸಮಾಜದ ವಿವಿಧ ಸಮುದಾಯಗಳಲ್ಲಿ ಅದು ವಿವಿಧ ರೀತಿಯಲ್ಲಿ ವ್ಯತ್ಯಾಸವನ್ನು ಉಂಟು ಮಾಡುತ್ತದೆ. ಜಾತಿಯ ಕಟ್ಟಳೆಗಳಿಂದಾಗಿ ಕೆಳವರ್ಗ ಮೇಲ್ವರ್ಗ ಮದ್ಯಮವರ್ಗ ಮೇಲ್ ಮಧ್ಯಮ ವರ್ಗ ಎನ್ನುವ ಅನೇಕ ವಿಭಾಗಗಳನ್ನು ಮಾಡಿರುವುದು ಇಲ್ಲಿ ಭಾಷೆ ಬಳಕೆಯಲ್ಲಿ ಸಾಮಾಜಿಕವಾಗಿ ಅನೇಕ ನಿರ್ಬಂಧಗಳಿಗೆ ಒಳಪಟ್ಟಿದ್ದರಿಂದ ಪ್ರತಿಯೊಂದು ವರ್ಗವು ತನ್ನ ಅನುಕೂಲಕ್ಕೆ ತಕ್ಕಂತೆ ತನ್ನದೇ ಆದ ರೀತಿಯಲ್ಲಿ ಭಾಷೆಯೊಂದನ್ನು ಸೃಷ್ಟಿ ಮಾಡಿಕೊಂಡಿರುತ್ತದೆ ಅಂತೆಯೇ ರಾಯಚೂರು ಮಾನ್ವಿ ಪರಿಸರ ಭಾಷೆಯು ಸಾಮಾಜಿಕವಾಗಿ ಸಂಪರ್ಕಕ್ಕಾಗಿ ತನ್ನ ಭಾಷೆಯನ್ನು ಚಲನೆಗೆ ತಂದುಕೊಂಡಿದೆ. ''ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳಿಂದ ಹಾಗೂ ಶಿಕ್ಷಣಗಳಿಂದ ಸಮಾಜ ವರ್ಗೀಕೃತವಾಗಿದೆ. ಇಲ್ಲಿ ಬ್ರಾಹ್ಮಣರು ಮತ್ತು ಬಹುತೇಕ ಲಿಂಗಾಯತರು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಮುಂದುವರಿದವರಾಗಿದ್ದಾರೆ. ಆದರೆ ಹರಿಜನ, ಕುರುಬರು, ಬ್ಯಾಡರು ಇತ್ಯಾದಿ ಹಿಂದುಳಿದ ಜಾತಿಗಳೆನಿಸಿವೆ. ಬ್ರಾಹ್ಮಣರು ಪ್ರತಿಷ್ಠಿತ ವರ್ಗದವರಾದ್ದರಿಂದ ಅವರು ತಮ್ಮದೇ ಆದ ಪ್ರಭೇದವನ್ನು ಬೆಳೆಸಿಕೊಂಡಿರುವರು. ಹರಿಜನರು ಇತ್ಯಾದಿ ದಲಿತ ಸೇರಿದವರು ಕೆಲವು ಊರುಗಳಲ್ಲಿ ಹರಿಜನರು ಊರಿನಿಂದ ಸುಮಾರು ದೂರದಲ್ಲಿ ಹರಿಜನ ಕೇರಿಗಳಲ್ಲಿ ವಾಸಿಸುತ್ತಾರೆ. ಸಾಮಾಜಿಕ ಅಂತರ ಹೆಚ್ಚಾದಷ್ಟು ಭಾಷೆಯ ಅಂತರವೂ ಹೆಚ್ಚು. ಬ್ರಾಹ್ಮಣರು ಹರಿಜನರ ನಡುವೆ ಇರುವ ಸಾಮಾಜಿಕ ಅಂತರ ಹೆಚ್ಚಾದ್ದರಿಂದ ಅವರಿಬ್ಬರ ಭಾಷೆಯ ಅಂತರವೂ ಹೆಚ್ಚು. ಬ್ರಾಹ್ಮಣರ ಮತ್ತು ಲಿಂಗಾಯತರ ಸಾಮಾಜಿಕ ಅಂತರ ಕಡಿಮೆಯಾದ್ದರಿಂದ ಅವರಿಬ್ಬರ ಸಾಮಾಜಿಕ ಅಂತರವೂ ಕಡಿಮೆ ಎಂದು ರಾಯಚೂರು ಕನ್ನಡದ ಲೇಖನದಲ್ಲಿ ಡಿ.ಪಿ.ಗಿರಿಧರರವರು(೧೯೭೬) ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಸಾಮಾಜಿಕ ಅಂತರವನ್ನು ಗುರುತಿಸಲು ಅವರು ಅನೇಕ ಭಾಷೆಯಲ್ಲಿನ ಅಂಶಗಳನ್ನು ಆಧಾರವಾಗಿಟ್ಟು ಉದಾಹರಣೆ ಸಮೇತ ವಿವರಿಸುತ್ತಾರೆ. ರಾಯಚೂರು ಪರಿಸರದ ದಲಿತರ ಕನ್ನಡ ವೈಶಿಷ್ಟ್ಯಗಳನ್ನು ಕುರಿತು ಡಾ. ಅಶೋಕ ಕುಮಾರ ರಂಜೇರೆಯವರು(೨೦೦೬) ತಮ್ಮ ಲೇಖನದಲ್ಲಿ ಹೀಗೆ ಹೇಳುತ್ತಾರೆ ''ರಾಯಚೂರು ಪ್ರದೇಶದ ಬ್ರಾಹ್ಮಣರು, ಲಿಂಗಾಯತರು, ಲಿಂಗಾಯತೇತರು ಮತ್ತು ದಲಿತರು ಬಳಸುವ ಕನ್ನಡಗಳ ಮಧ್ಯೆ ಸ್ಪಷ್ಟ ವ್ಯತ್ಯಾಸಗಳನ್ನು ಕಾಣಬಹುದಾಗಿದೆ. ಹೀಗೆ ವ್ಯತ್ಯಾಸವಿರಲು ಹಲವಾರು ಕಾರಣಗಳಿವೆ. ಪ್ರಾದೇಶಿಕವಾಗಿ ಬೆಟ್ಟಗುಡ್ಡಗಳ ನದಿಗಳ, ಕಾಡುಗಳ ಭಾಷಿಕ ಸಂಪರ್ಕ ಕಡಿದು ಹಾಕಿದಂತೆ ಇಲ್ಲಿನ ಜಾತಿ, ಧರ್ಮ, ಅಂತಸ್ತುಗಳು ಕೂಡಾ ಎರಡು ಸಮುದಾಯಗಳ ನಡುವಿನ

ಸಂಪರ್ಕವನ್ನು ನಿಯಂತ್ರಿಸಿವೆ. ಹಾಗಾಗಿ ಬ್ರಾಹ್ಮಣ, ಲಿಂಗಾಯತ, ಲಿಂಗಾಯತೇತರ ಮತ್ತು ದಲಿತ ಸಮುದಾಯಗಳ ಕನ್ನಡದಲ್ಲಿ ಸ್ಪಷ್ಟ ವ್ಯತ್ಯಾಸಗಳನ್ನು ಗುರುತಿಸಬಹುದಾಗಿದೆ. ಈ ವ್ಯತ್ಯಾಸಗಳಿಗೆ ನೈಸರ್ಗಿಕ ತಡೆಗೋಡೆಗಳು ಕಾರಣವಲ್ಲ, ಬದಲಿಗೆ ಸಾಮಾಜಿಕ ಕಾರಣಗಳು ಈ ವ್ಯತ್ಯಾಸಕ್ಕೆ ಮುಖ್ಯ ಕಾರಣ'' ಎನ್ನುತ್ತಾರೆ. ಸಾಮಾಜಿಕ ಕಾರಣಗಳನ್ನು ತಮ್ಮ ಲೇಖನದಲ್ಲಿ ಉದಾ. ಸಹಿತವಾಗಿ ವಿವರಿಸಿದ್ದಾರೆ.

ಈ ರೀತಿ ಸಾಮಾಜಿಕ ಭಿನ್ನಾಂಶಗಳಿಂದ ಕೂಡಿದ ರಾಯಚೂರು ಮಾನ್ವಿ ಪರಿಸರದ ಭಾಷೆ ವಿಶಿಷ್ಟತೆಯಿಂದ ಕೂಡಿರುವುದಲ್ಲದೆ ಇಲ್ಲಿ ಭಾಷಾ ದ್ವೀಪದ ಪ್ರದೇಶ ಇರುವುದರಿಂದ ಸಾಮಾಜಿಕ ಭಿನ್ನಾಂಶಗಳಿರುತ್ತವೆ. ಹಾಗೂ ಆಂಧ್ರಗಡಿ ಪ್ರದೇಶವಾಗಿದ್ದರಿಂದ ಭಾಷಿಕ ಸಂರಚನೆಯು ವಿಶಿಷ್ಟವಾಗಿರುವಂತೆ ತೋರುತ್ತದೆ. ಕರ್ನಾಟಕದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಪ್ರಾದೇಶಿಕ ಭಿನ್ನತೆಗಳಿರುವುದು ಭಾಷೆಯಲ್ಲಿ ಸಾಮಾನ್ಯ. ಆದರೆ ರಾಯಚೂರು ಪ್ರದೇಶದಲ್ಲಿ ಸಾಮಾಜಿಕ ಭಿನ್ನವಾಗಿರುವುದು ಕೂಡಾ ಗಮನಸಬೇಕಾಗುತ್ತದೆ. ಸಾಮಾಜಿಕ ಭಿನ್ನಾಂಶಗಳು ವ್ಯತ್ಯಾಸವನ್ನು ಕುರಿತು ಅಧ್ಯಯನಗಳು ಕರ್ನಾಟಕದಲ್ಲಿ ಕಡಿಮೆ ಎಂದರೆ ತಪ್ಪಾಗಲಾರದು.

ಅಡಿಟಿಪ್ಪಣಿಗಳು

೧. ಕೃಷ್ಣಪರಮೇಶ್ವರಭಟ್, ಕನ್ನಡ ತೆಲಗು ದ್ವಿಭಾಷಿಕತೆ ಅಧ್ಯಯನ, ೧೯೯೫, ಪು.೧

೨. ಭಾಗಲಕ್ಷ್ಮಿ ಎಂ., ದ್ವಿಭಾಷಿಕರು, ೨೦೦೭, ಪು.೧೫೯

೩. ಅದೇ, ಪು.೧೬೧

೪. ನಾರಾಯಣ ಕೆ.ವಿ., ದ್ವಿಭಾಷಿಕರು, ೧೯೯೮, ಪು.೧೯

೫. ಶ್ರೀಧರ ಎನ್.ಎಸ್., ಇಂದಿನ ಕನ್ನಡ ರಚನೆ ಮತ್ತು ಬಳಕೆ, ೧೯೯೫, ಪು.೧೦

೬. ನಾರಾಯಣ ಕೆ.ವಿ., ಭಾಷೆಯ ಸುತ್ತಮುತ್ತ, ೧೯೯೮, ಪು.೨೦

೭. ಅದೇ, ಪು.೨೨

ಅಧ್ಯಾಯ ೫

ರಾಯಚೂರು ಮಾನ್ವಿ ತಾಲ್ಲೂಕಿನ ದ್ವಿಭಾಷಿಕ ಪರಿಸರ

೫

ರಾಯಚೂರು ಮಾನ್ವಿ ತಾಲ್ಲೂಕಿನ ದ್ವಿಭಾಷಿಕ ಪರಿಸರ

ರಾಯಚೂರು ಜಿಲ್ಲೆ ಅನೇಕ ವರ್ಷಗಳಿಂದ ಬೇರೆ ಬೇರೆ ರಾಜ ಮನೆತನಗಳ ಆಡಳಿತಕ್ಕೆ ಒಳಪಟ್ಟಿತ್ತು. ಅದಕ್ಕಾಗಿ ಇಲ್ಲಿ ಆಡಳಿತ ಮಾಡುವ ಅರಸರ ಭಾಷೆಯು ಜಾರಿಯಲ್ಲಿತ್ತು. ಮುಖ್ಯವಾಗಿ ಹೈದ್ರಾಬಾದಿನ ನಿಜಾಮರು ಮತ್ತು ವಿಜಯನಗರದ ಅರಸರು ಹಾಗೂ ಬಿಜಾಪುರದ ಸುಲ್ತಾನರೊಡನೆ ರಾಯಚೂರಿನ ಸಂಪತ್ತಿಗಾಗಿ ಆಗಾಗ ಯುದ್ಧ ನಡೆಯುತ್ತಿತ್ತು. ಈ ಪ್ರದೇಶವು ಕೃಷ್ಣ-ತುಂಗಭದ್ರ ನದಿಗಳ ಎಡ-ಬಲಗಳಲ್ಲಿ ಹರಿಯುವುದರಿಂದ ರಾಯಚೂರು ಸಂಪತ್ತಿಗಾಗಿ ಹಲವು ಸಾರಿ, ಭಾರಿ ಆಕ್ರಮಣಗಳು ನಡೆದಿದ್ದು ಇತಿಹಾಸ.

ರಾಯಚೂರಿನ ಚರಿತ್ರೆಯನ್ನು ಗಮನಿಸಿದಾಗ ನಿಜಾಮರ ಆಡಳಿತದ ಫಲವಾಗಿ ಉರ್ದು ಭಾಷೆಯನ್ನು, ವಿಜಯನಗರದ ಅರಸರ ಆಡಳಿತದ ಫಲವಾಗಿ ತೆಲುಗು ಭಾಷೆಯನ್ನು ಅನಿವಾರ್ಯವಾಗಿ ಕಲಿಯಬೇಕಾಯಿತು. ಮೂಲತಃ ರಾಯಚೂರಿನವರು ಕನ್ನಡಿಗರಾಗಿದ್ದರು. ರಾಯಚೂರು ಮತ್ತು ಮಾನ್ವಿ ಪ್ರದೇಶಗಳು ಆಂಧ್ರದ ಗಡಿ ಭಾಗದಲ್ಲಿರುವುದರಿಂದ ಇಲ್ಲಿಯೂ ತೆಲುಗುವಿನ ಪ್ರಭಾವವಾಗಿರುವುದು ಗಮನಾರ್ಹ. ಇಲ್ಲಿ ಒಂದು ಭಾಷೆಯನ್ನು ಆಡಳಿತದ ಒತ್ತಾಯಕ್ಕಾಗಿ, ಹಾಗೂ ಇನ್ನೊಂದು ಭಾಷೆಯನ್ನು ಸಾಮರಸ್ಯಕ್ಕಾಗಿ ಕಲಿಯಬೇಕಾಯಿತು. ಆದರೆ ಕಾಲಕ್ರಮೇಣದಲ್ಲಿ ಉರ್ದುಭಾಷೆಯು ಹೆಚ್ಚು ಅಭಿವೃದ್ಧಿ ಕಾಣಲಿಲ್ಲ ಹಾಗೂ ಮೊದಲಿನಿಂದಲೂ ತೆಲುಗು ಭಾಷಿಕರೊಂದಿಗೆ ಒಳ್ಳೆಯ ಸಾಮರಸ್ಯ ಹೊಂದಿರುವುದರಿಂದ, ತೆಲುಗು ಕನ್ನಡದೊಂದಿಗೆ ಸೇರಿ ಎರಡನೇ ಭಾಷೆಯಾಗಿ ಬಂತು. ಅನಂತರದಲ್ಲಿ ಕೆಲವರು ಕೃಷಿಗಾಗಿ, ಉದ್ಯೋಗಕ್ಕಾಗಿ ಹಾಗೂ ವಿವಾಹ ಕಾರಣಗಳಿಂದಾಗಿ ರಾಯಚೂರು ಪ್ರದೇಶಕ್ಕೆ ವಲಸೆ ಬಂದರು. ರಾಯಚೂರಿಗೆ ವಲಸೆ ಬರಲು ಕಾರಣ ಏನು? ಎನ್ನುವುದನ್ನು ಪ್ರಶ್ನೆ ಮಾಡಿಕೊಂಡರೆ, ಇಲ್ಲಿನ ನೀರಾವರಿ ವ್ಯವಸ್ಥೆ, ಕಡಿಮೆ ದರದಲ್ಲಿ ಉತ್ತಮ ಭೂಮಿ ದೊರಕುತ್ತಿತ್ತು. ಅಲ್ಲದೆ ಅಲ್ಪ ವೇತನಕ್ಕಾಗಿ ಹೆಚ್ಚು ದುಡಿಯುವ ಬಡ ಕೂಲಿ ಕಾರ್ಮಿಕರ ಸಂಖ್ಯೆ ಹೆಚ್ಚಾಗಿತ್ತು. ಇಲ್ಲಿ ಸಿಗುವ ಕಾರ್ಮಿಕರು ಹೇರಳವಾಗಿ ಸಿಗುತ್ತಿತ್ತು. ಆದ್ದರಿಂದ ರಾಯಚೂರು ಮತ್ತು ಮಾನ್ವಿ ತಾಲೂಕಿನ ನಗರ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಆಂಧ್ರದ ರೆಡ್ಡಿಗಳು ಈ ಪ್ರದೇಶಕ್ಕೆ ವಲಸೆ ಬಂದರು. ಕನ್ನಡಿಗರೊಂದಿಗೆ

ಮೊದಲು ವ್ಯವಹರಿಸಲು ಕಷ್ಟವಾದರೂ ಇವರು ಕನ್ನಡವನ್ನು ನಿಧಾನವಾಗಿ ಬೇಗನೆ ಕಲಿತುಕೊಂಡರು. ನಂತರದಲ್ಲಿ ಕನ್ನಡ-ತೆಲುಗು ದ್ವಿಭಾಷಿಕರಾದರು.

ಮಾನ್ವಿ, ರಾಯಚೂರು ಪ್ರದೇಶಕ್ಕೆ ಲಗ್ಗೆ ಇಟ್ಟ ಆಂಧ್ರದ ಕೆಲ ಸಮುದಾಯಗಳು ತೆಲುಗಿನೊಂದಿಗೆ ಕನ್ನಡವನ್ನು ಕಲಿತರು. ಆಂಧ್ರದ ಕೆಲ ಗಡಿ ಗ್ರಾಮಗಳಿಗೆ ಅನಿವಾರ್ಯವಾಗಿ ವೈವಾಹಿಕ ಸಂಪರ್ಕದಿಂದ ಕನ್ನಡಿಗರು ಅಲ್ಲಿ ನೆಲೆಸುವ ಸಂದರ್ಭ ಬಂದಾಗ ಕನ್ನಡಿಗರೊಂದಿಗೆ ತೆಲುಗು ಭಾಷೆಯನ್ನು ಮಾತನಾಡಲು ಪ್ರಾರಂಭಿಸಿದರು. ಇಂತಹ ಅನೇಕ ಸಂದರ್ಭಗಳಲ್ಲಿ ಸಾಮಾಜಿಕ ಸಂಪರ್ಕವೇರ್ಪಟ್ಟಾಗ ನಿರಂತರವಾಗಿ ಭಾಷೆ ಕೊಡು-ಕೊಳ್ಳುವಿಕೆ ಪ್ರಾರಂಭವಾಯಿತು.

ಕರ್ನಾಟಕದ ಅನೇಕ ಗಡಿ ಜಿಲ್ಲೆಗಳಾದ, ಬಳ್ಳಾರಿ, ಕೋಲಾರ, ಚಿತ್ರದುರ್ಗ ಹಾಗೂ ತುಮಕೂರುಗಳಲ್ಲಿ ಕನ್ನಡದೊಂದಿಗೆ ತೆಲುಗು ದ್ವಿಭಾಷಿಕತೆ ಇರುವಂತೆ, ರಾಯಚೂರು ಗಡಿ ಜಿಲ್ಲೆಯಾಗಿದ್ದರಿಂದ ಇಲ್ಲಿಯೂ ಕೂಡ ಕನ್ನಡ-ತೆಲುಗು ದ್ವಿಭಾಷಿಕತೆ ಕಂಡುಬಂದಿದೆ. ಆದರೆ ಬೇರೆ ಜಿಲ್ಲೆಗೆ ಹೋಲಿಸಿದರೆ ರಾಯಚೂರಿನಲ್ಲಿ ಕಡಿಮೆ ಪ್ರಮಾಣದಲ್ಲಿ ತೆಲುಗು ಪ್ರಭಾವ ಆಗಿದೆ. ರಾಯಚೂರು ಮಾತ್ರವಲ್ಲದೆ ಬಹುಭಾಷಿಕತೆಯನ್ನು ಮತ್ತು ಅರೆಬಹುಭಾಷಿಕತೆಯನ್ನು ಕಾಣಬಹುದಾಗಿದೆ. ಆದರೆ ಮಾನ್ವಿಯಲ್ಲಿ ಬಹುಭಾಷಿಕತೆಯ ಪ್ರಮಾಣ ತೀರಾ ಕಡಿಮೆ. ಒಟ್ಟಾರೆಯಾಗಿ ಮಾನ್ವಿ ರಾಯಚೂರು ಪ್ರದೇಶದ ಮೇಲೆ ತೆಲುಗು ಪ್ರಭಾವವಾಗಿರುವುದು ಖಚಿತವಾಗುತ್ತದೆ.

ರಾಯಚೂರು-ಮಾನ್ವಿ ಪರಿಸರದ ಕನ್ನಡದ ಸ್ಥಿತಿಗತಿ ಹಾಗೂ ಇದು ತೆಲುಗಿನೊಂದಿಗೆ ಹೊಂದಿರುವ ಸಂಬಂಧವನ್ನು ನಾವು ಗಮನಿಸಬೇಕಾಗಿದೆ. ತೆಲುಗು-ಕನ್ನಡದೊಂದಿಗೆ ಇಲ್ಲಿನ ಭಾಷಿಕ ಸಂಪರ್ಕ ಇರುವುದು ಇಂದಿನದಲ್ಲ, ಅದು ಪ್ರಾಚೀನ ಕಾಲದಿಂದಲೂ ಇದೆ. ಭಾಷಾವಾರು ಪ್ರಾಂತ್ಯಗಳು ರಚನೆಯಾದಾಗಿನಿಂದ ತೆಲುಗು-ಕನ್ನಡ ಮಾತನಾಡುವ ಪ್ರದೇಶಗಳನ್ನು ಕರ್ನಾಟಕ-ಆಂಧ್ರ ಎಂದು ಗುರುತಿಸಲಾಯಿತು. ಆದರೆ ಈ ಮೊದಲು ಈ ರೀತಿ ಇರಲಿಲ್ಲ. ಚಾರಿತ್ರಿಕ ಐತಿಹಾಸಿಕ ಅಂಶಗಳನ್ನು ಗಮನಿಸಿದಾಗ ವಿಜಯನಗರ ಕಾಲದಿಂದಲೂ ರಾಯಚೂರಿನಲ್ಲಿ ಕನ್ನಡ ತೆಲುಗು ಸಂಬಂಧವು ಇತ್ತು. ಕೃಷ್ಣ ದೇವರಾಯ ಕನ್ನಡದ ಅರಸನಾಗಿದ್ದರೂ ಕೂಡ ಪ್ರದೇಶದ ತಾರತಮ್ಯ ತೋರದೆ ತೆಲುಗಿಗೆ ಉನ್ನತವಾದ ಸ್ಥಾನವನ್ನು ನೀಡಿದ್ದ ಹಾಗೂ ತೆಲುಗು ಸಾಹಿತ್ಯಕ್ಕೆ ಕೂಡ ಪ್ರೇರಣೆ ನೀಡಿದ್ದ ಹಾಗೂ ಆಂಧ್ರದ ಕೆಲ ಭಾಗಗಳು ಕೃಷ್ಣ ದೇವರಾಯನ ಹಿಡಿತದಲ್ಲಿದ್ದರಿಂದ ಅಲ್ಲಿನ ಜನ ಸಂಪರ್ಕಕ್ಕಾಗಿ ಕನ್ನಡದೊಂದಿಗೆ ನಿರಂತರ ಸಂಬಂಧವನ್ನು ಹೊಂದಿದ್ದರು.

ಯಾವುದಾದರೊಂದು ಭಾಷಾ ಸಮುದಾಯವನ್ನು ಅಥವಾ ದ್ವಿಭಾಷಾ ಸಮುದಾಯವನ್ನು ತೆಗೆದುಕೊಂಡಾಗ ಅದನ್ನು ಒಂದೇ ದೃಷ್ಟಿಕೋನದಿಂದ ನೋಡಬಾರದು. ಏಕೆಂದರೆ ಒಂದು ಸಮುದಾಯದಲ್ಲಿ ಅನೇಕ ಭಾಷೆಗಳಿರಬಹುದು. ಅವರ ಆಚಾರ-ವಿಚಾರ, ಸಂಪ್ರದಾಯ ಬೇರೆಯಾಗಿದ್ದರೂ ಕೂಡ ಅಲ್ಲಿ

ಎರಡು ಭಾಷೆಗಳು ಬಳಕೆಯಾಗುತ್ತವೆ ಎಂದರೆ ಅಲ್ಲಿ ಸಾಮರಸ್ಯವು ಕೂಡ ಇರುತ್ತದೆ ಎಂಬುದನ್ನು ಮರೆಯಬಾರದು ಹಾಗೂ ಇಲ್ಲಿ ಭಾಷಾ ಸಂಘರ್ಷವೂ ಇರಬಹುದು. ೧೯೫೬ರಲ್ಲಿ ಭಾಷಾವಾರು ಪ್ರಾಂತ್ಯಗಳಾಗಿ ಗಡಿಗಳನ್ನಾಗಿ ವಿಂಗಡಿಸಲಾಯಿತು. ಆದರೆ ಭಾಷೆಗೆ ಗಡಿ ಮಾಡಲು ಸಾಧ್ಯವಾಗಲಿಲ್ಲ. ಕರ್ನಾಟಕದಲ್ಲಿ ತೆಲುಗು ಭಾಷೆ ಆಂಧ್ರದಲ್ಲಿ ತೆಲುಗುವಿನೊಂದಿಗೆ ಕನ್ನಡ ಭಾಷೆ ಹಾಗೆಯೇ ಮುಂದುವರಿಯಿತು. ಹಾಗೂ ಸಂದರ್ಭಕ್ಕನುಗುಣವಾಗಿ ಸಮಾಜದೊಂದಿಗೆ ತೆಲುಗು ಭಾಷಿಕರು ತಮ್ಮ ಭಾಷೆಯನ್ನು ಬಳಸುತ್ತಲೇ ಬಂದಿದ್ದಾರೆ. ಕನ್ನಡಿಗರೊಂದಿಗೆ ಬೆರತುಕೊಂಡು ಕನ್ನಡವನ್ನು ಸಹ ಕಲಿತಿದ್ದಾರೆ ಹಾಗೂ ಇವರು ಕನ್ನಡ ಕಲಿಯಲು ಅನಿವಾರ್ಯತೆಯು ಕೂಡಾ ಇದೆ. ಏಕೆಂದರೆ ಕರ್ನಾಟಕದಲ್ಲಿ ಪ್ರಾದೇಶಿಕ ಭಾಷೆಗೆ(ಕನ್ನಡಕ್ಕೆ) ಹೆಚ್ಚು ಬೆಲೆ ಇದೆ ಮತ್ತು ಆಡಳಿತದಲ್ಲಿ ಕನ್ನಡ ಇರುವುದರಿಂದ ತೆಲುಗು ಭಾಷಿಕರ ಮಕ್ಕಳು ಕನ್ನಡ ಮಾಧ್ಯಮದಲ್ಲಿ ಓದುತ್ತಿದ್ದಾರೆ. ಮತ್ತು ಕನ್ನಡಿಗರು ತೆಲುಗರನ್ನು ಸಾಮಾಜಿಕ ಸಂಪರ್ಕಕ್ಕಾಗಿ ಅವರೊಂದಿಗೆ ತೆಲುಗು ಭಾಷೆಯನ್ನು ಮಾತಾಡುವುದು ಕೂಡ ಅನಿವಾರ್ಯವಾಗಿದೆ. ಇಲ್ಲಿ ಗಡಿಭಾಗದಲ್ಲಿ ಕನ್ನಡ ಭಾಷಿಕರು ಎರಡು ಭಾಷೆಗಳನ್ನು ಸರಳವಾಗಿ ಗ್ರಹಿಸಲು ಅರ್ಥೈಹಿಸಲು ಹಾಗೂ ಮಾತನಾಡಲು ಕಲಿತಿದ್ದಾರೆ. ಪರಭಾಷೆಯನ್ನು ಮಾತಾಡುವುದು ಒಂದು ಪ್ರತಿಷ್ಠೆಯಾಗಿದೆ. ಅದಕ್ಕಾಗಿ ಅವರು ತೆಲುಗು ಮಾತಾಡುವುದು ಅಷ್ಟೇ ಅಲ್ಲ ರಾಯಚೂರು, ಮಾನ್ವಿ, ದೇವದುರ್ಗ, ಸಿಂಧನೂರು ತಾಲ್ಲೂಕುಗಳಲ್ಲಿ ಇವರು ಮನೋರಂಜನೆಗಾಗಿ ತೆಲುಗು ಟಿ.ವಿ ಚಾನಲ್ ಗಳಾದ ಈ ಟಿ.ವಿ, ಮಾ ಟಿ.ವಿ, ಜೆಮಿನಿ ಟಿ.ವಿ.ಯನ್ನು ತಪ್ಪದೇ ನೋಡುತ್ತಾರೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಅವರನ್ನು ಸಂದರ್ಶಿಸಿ ಪ್ರಶ್ನಿಸಿದಾಗ ತೆಲುಗು ಭಾಷೆಯ ಚಾನಲ್ ಗಳು ಹೆಚ್ಚು ಮನೋರಂಜನೆಯನ್ನು ನೀಡುತ್ತವೆ. ಅಲ್ಲದೇ ಕನ್ನಡಕ್ಕಿಂತಲೂ ಭಿನ್ನವಾದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತವೆ ಎಂದು ಹೇಳುತ್ತಾರೆ. ಹಾಗೂ ಇದಕ್ಕೆ ತೆಲುಗರು ಕೂಡ ಕನ್ನಡ ಚಾನೆಲ್ ಹಾಗೂ ತೆಲುಗು ಚಾನಲ್‌ನ್ನು ನೋಡುವುದರೊಂದಿಗೆ ಇವರು ಕನ್ನಡ ಭಾಷೆಯ ದಿನಪತ್ರಿಕೆಗಳನ್ನು ಪ್ರತಿಷ್ಠೆಗಾಗಿ ಕೂಡಾ ಓದುತ್ತಾರೆ.

ಹೀಗೆ ಒಂದಿಲ್ಲೊಂದು ಭಾಷಾ ಸಂಪರ್ಕಕ್ಕಾಗಿ ಅನುಕೂಲವಾಗುವಂಥ ಭಾಷೆಯನ್ನು ಬಳಸುತ್ತಾರೆ. ಅದರೊಂದಿಗೆ ಅನೇಕ ವಿವಾಹ ಸಂದರ್ಭದಲ್ಲಿ ಕೂಡ ಕೊಡುಕೊಳ್ಳುವಿಕೆ ನಡೆಯುತ್ತದೆ. ಆಚಾರ-ವಿಚಾರ ಊಟ-ಉಪಚಾರ ಉಡುಗೆ-ತೊಡುಗೆ ಎಲ್ಲವನ್ನು ಒಬ್ಬರಿಗೊಬ್ಬರು ಅನುಕರಿಸುತ್ತಾರೆ ಹಾಗೂ ಅನುಸರಿಸುತ್ತಾರೆ. ಹಾಗೂ ಜೀವನ ಕ್ರಮಗಳನ್ನು ಕಷ್ಟ-ಸುಖಗಳನ್ನು ಕನ್ನಡಿಗರು-ತೆಲುಗರೊಂದಿಗೆ ಪರಸ್ಪರ ಹಂಚಿಕೊಳ್ಳುತ್ತಾರೆ. ಹಾಗಾಗಿ ಭಾಷಾ ವಿಷಯದಲ್ಲಿ ಆರೋಗ್ಯಕರವಾದ ಸಂಬಂಧಗಳನ್ನು ಇಂದಿಗೂ ಮುಂದುವರಿಸಿಕೊಂಡು ಬಂದಿದ್ದಾರೆ. ಇದು ಇತಿಹಾಸದ ಉದ್ದಕ್ಕೂ ನಡೆಯುತ್ತಾ ಬಂದಿದೆ. ಕನ್ನಡ-ತೆಲುಗರ ಮಧ್ಯ ಅಪೂರ್ವವಾದ ಮೈತ್ರಿ ಭಾವನೆಯು ನೆಲಸಿತ್ತೆಂದು ಹಲವು ಚರಿತ್ರೆಕಾರರು

ಅಭಿಪ್ರಾಯಪಡುತ್ತಾರೆ. ಹೀಗೆ ಕನ್ನಡಿಗರೊಂದಿಗೆ ತೆಲುಗರ ಭಾಷೆಯೊಂದಿಗೆ ಗಡಿಗಳನ್ನು ನಿರ್ಮಾಣ ಮಾಡಲು ಸಾಧ್ಯವಿಲ್ಲ. ಭೂ ಪ್ರದೇಶವನ್ನು ಗೆರೆ ಹಾಕಿ ಇಷ್ಟೇ ಎಂದು ಹೇಳಬಹುದು. ಆದರೆ ಭಾಷೆ ಪ್ರದೇಶಗಳಿಗೆ ಗಡಿ ಹಾಕಲು ಬರುವುದಿಲ್ಲ.

ರಾಯಚೂರು ಮಾನ್ವಿ ಪರಿಸರದ ಕನ್ನಡ-ತೆಲುಗಿನ ಸಂಬಂಧ

ರಾಯಚೂರು ಜಿಲ್ಲೆಯ ಪೂರ್ವದಲ್ಲಿರುವ ಆಂಧ್ರ ಪ್ರದೇಶದ ಮಹೆಬೂಬ್ ನಗರ ಹಾಗೂ ದಕ್ಷಿಣದಲ್ಲಿ ಆಂಧ್ರದ ಕರ್ನೂಲ್ ಜಿಲ್ಲೆಯು ಕರ್ನಾಟಕದ ಗಡಿ ಭಾಗಗಳಾಗಿವೆ. ಇಲ್ಲಿ ರಾಯಚೂರಿಗೆ ಗದ್ವಾಲ್ (ಆಂಧ್ರ) ಆದೋನಿ, ಮಂತ್ರಾಲಯದ ಗ್ರಾಮಗಳು ರಾಯಚೂರಿಗೆ ಹೊಂದಿಕೊಂಡಿವೆ. ಆದ್ದರಿಂದ ಕನ್ನಡದೊಂದಿಗೆ-ತೆಲುಗು ಮತ್ತು ತೆಲುಗುವಿನೊಂದಿಗೆ ಕನ್ನಡವನ್ನು ಕಲಿತು ದ್ವಿಭಾಷಿಕರಾಗಿದ್ದಾರೆ. ಆಂಧ್ರದ ಕೆಲ ಕುಟುಂಬಗಳು ರಾಯಚೂರಿಗೆ ವಲಸೆ ಬಂದು ಇಲ್ಲಿ ಕನ್ನಡಿಗರೊಂದಿಗೆ ವ್ಯವಹಾರ ಮಾಡುತ್ತಿದ್ದಾರೆ. ಆದ್ದರಿಂದ ಭಾಷಾ ಕಲಿಕೆ ಅನಿವಾರ್ಯವಾಗಿದೆ. ಆಂಧ್ರದೊಂದಿಗೆ ಕನ್ನಡಿಗರು ವಿವಾಹ ಸಂಪರ್ಕ ಹೊಂದಿರುವುದು ಇಲ್ಲಿ ಸಹಜವಾಗಿದೆ. ಹಾಗೂ ವಿವಾಹವಾಗಿ ಬಂದಿರುವಂಥ ಮಹಿಳೆಯರು ಮತ್ತು ಕರ್ನಾಟಕದಿಂದ ಆಂಧ್ರಕ್ಕೆ ವಿವಾಹವಾಗಿ ಹೋಗಿರುವಂತ ಮಹಿಳೆಯರಲ್ಲಿಯೂ ಕ್ರಮವಾಗಿ ತೆಲುಗು ಮತ್ತು ಕನ್ನಡವನ್ನು ಕಲಿಯಬೇಕಾಗಿದೆ.

ಆಂಧ್ರದ ಗಡಿ ಭಾಗದಲ್ಲಿರುವ ಕನ್ನಡಿಗರು ತೆಲುಗು ಭಾಷೆಗೆ ಹೊಂದಿಕೊಂಡಿದ್ದಾರೆ. ಅಂತೆಯೇ ಕರ್ನಾಟಕದ ಗಡಿ ಭಾಗದಲ್ಲಿರುವ ತೆಲುಗರು ಕನ್ನಡಕ್ಕೆ ಹೊಂದಿಕೊಂಡಿರುವುದು ಸಹಜ ಹಾಗೂ ಅನಿವಾರ್ಯವಾಗಿದೆ. ತೆಲುಗು ಮನೆ ಮಾತು ಉಳ್ಳವರು ಕನ್ನಡವನ್ನು ಸಾಮಾಜಿಕ ಸಂಪರ್ಕಕ್ಕಾಗಿ ಹಾಗೂ ಕನ್ನಡ ಮನೆ ಮಾತು ಉಳ್ಳವರು ತೆಲುಗು ಭಾಷೆಯನ್ನು ಸಾಮಾಜಿಕ ಸಂಪರ್ಕಕ್ಕಾಗಿ ಬಳಸುತ್ತಿದ್ದಾರೆ. ಅಕ್ಕ-ಪಕ್ಕದ ಮನೆಯವರೊಂದಿಗೆ, ಸ್ನೇಹಿತರೊಂದಿಗೆ ಇತರ ಸಂಪರ್ಕದೊಂದಿಗೆ ತಮ್ಮ ಭಾಷೆಯನ್ನು ಬಳಸಿಕೊಳ್ಳುತ್ತಿದ್ದಾರೆ ಹಾಗೂ ಶಿಕ್ಷಣ ಸಂದರ್ಭಕ್ಕೆ ಬಂದರೆ ಆಂಧ್ರದ ಗಡಿಭಾಗದಲ್ಲಿ ತೆಲುಗು ಮಾಧ್ಯಮ ಶಾಲೆಗಳು ಇವೆ ಮತ್ತು ಇಲ್ಲಿಗೆ ವಲಸೆ ಬಂದ ಕನ್ನಡಿಗರ ಮಕ್ಕಳು ಕನ್ನಡ ಕಲಿಯುವ ಸಂದರ್ಭಗಳು ಕಡಿಮೆ. ಹಾಗೆಯೇ ಕರ್ನಾಟಕದ ಗಡಿ ಭಾಗದಲ್ಲಿ ವಲಸೆ ಬಂದ ತೆಲುಗು ಕುಟುಂಬಗಳು ತೆಲುಗು ಮಾಧ್ಯಮದಲ್ಲಿ ಓದುವುದಿಲ್ಲ. ಬದಲಾಗಿ ಕನ್ನಡ ಮಾಧ್ಯಮ ಹಾಗೂ ಇಂಗ್ಲೀಶ್ ಮಾಧ್ಯಮದಲ್ಲಿ ಅಧ್ಯಯನ ಮಾಡುತ್ತಾರೆ. ಕರ್ನಾಟಕದಲ್ಲಿ ವಾಸಿಸುವುದರಿಂದ ಕನ್ನಡಕ್ಕೆ ಬೆಲೆ ಹೆಚ್ಚು ಎನ್ನುವ ಕಾರಣಕ್ಕೆ ಕನ್ನಡ ಭಾಷೆಯ ಶಿಕ್ಷಣವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಮಂತ್ರಾಲಯದಲ್ಲಿ ಎರಡು ಕನ್ನಡ ಶಾಲೆಗಳಿವೆ ಹಾಗೂ ಅಕ್ಕ ಪಕ್ಕದಲ್ಲಿ ಕೆಲವೇ ಕೆಲವು ಬೆರಳೆಣಿಕೆಯಷ್ಟು ಮಾತ್ರ ಕನ್ನಡ ಶಾಲೆಗಳು ಆಂಧ್ರದ ಗಡಿ ಭಾಗದಲ್ಲಿವೆ. ಹಾಗೆಯೇ ರಾಯಚೂರಿನಲ್ಲಿ ಐದು ತೆಲುಗು ಮಾಧ್ಯಮ ಶಾಲೆಗಳು ಇರುವುದು ಕ್ಷೇತ್ರ ಶಿಕ್ಷಣಾಧಿಕಾರಿಗಳು ನೀಡಿದ ಅಂಕಿ-ಅಂಶಗಳಿಂದ ತಿಳಿಯುತ್ತವೆ. ಒಟ್ಟಾರೆಯಾಗಿ

ಕರ್ನಾಟಕದಲ್ಲಿ ತೆಲುಗಿನ ಸ್ಥಿತಿ ಹೇಗಿದೆಯೊ ಹಾಗೆಯೇ ಕೂಡ ಆಂಧ್ರದ ಗಡಿಗಳಲ್ಲಿ ಕನ್ನಡದ ಸ್ಥಿತಿಯನ್ನು ಗುರುತಿಸಲಾಗಿದೆ.

ಬಹುಭಾಷಿಕತೆ

ರಾಯಚೂರು ನಗರ ಪ್ರದೇಶದಲ್ಲಿ ಬಹುಭಾಷಿಕತೆ ಇರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂತು. ಅನೇಕ ಕುಟುಂಬಗಳು ಕನ್ನಡ-ತೆಲುಗುವಿನೊಂದಿಗೆ ಉರ್ದು ಭಾಷೆಯನ್ನು ಮಾತಾಡುತ್ತಾರೆ. ಇಲ್ಲಿ ಮುಖ್ಯವಾಗಿ ಮುಸ್ಲಿಂರು ಅಧಿಕ ಸಂಖ್ಯೆಯಲ್ಲಿರುವುದರಿಂದ ಅವರ ಮನೆ ಮಾತು ಉರ್ದು ಆಗಿರುವುದರಿಂದ, ಆಡಳಿತ ಭಾಷೆಯಾಗಿರುವಂತ ಕನ್ನಡದೊಂದಿಗೆ ವ್ಯಾಪಾರದ ಸಂದರ್ಭದಲ್ಲಿ ತೆಲುಗು ಭಾಷೆಯನ್ನು ಈ ಸಮುದಾಯದವರು ಅರ್ಥೈಸಿಕೊಳ್ಳುವುದು ಅಷ್ಟೇ ಅಲ್ಲ ಮಾತನ್ನಾಡುತ್ತಾರೆ. ಇವರು ಅನೇಕ ಸಂದರ್ಭಗಳಲ್ಲಿ ಈ ಮೂರು ಭಾಷೆಯನ್ನು ಬಳಸುತ್ತಾರೆ. ಇವರ ನೆರೆಹೊರೆಯಲ್ಲಿ ಇರುವಂತೆ ಕೆಲ ಕುಟುಂಬಗಳು ಈಗಾಗಲೇ ಕಲಿತಿರುವ ಕನ್ನಡದೊಂದಿಗೆ ಉರ್ದುವನ್ನು (ಹಿಂದಿ) ಹಾಗೂ ತೆಲುಗನ್ನು ಇನ್ನುಳಿದ ಸಮುದಾಯಗಳು ಕೂಡಾ ಮಾತನಾಡುತ್ತಾರೆ. ಆದ್ದರಿಂದ ರಾಯಚೂರು ನಗರದಲ್ಲಿ ಬಹುಭಾಷಿಕ ಪ್ರಸಂಗಗಳು ಸಾಮಾಜಿಕ ಸಂಪರ್ಕದಿಂದಾಗಿ ಹಾಗೂ ಉರ್ದು ಭಾಷೆಯು ಸಾರ್ವತ್ರಿಕವಾಗಿರುವಂತೆ ಮುಸ್ಲಿಂ ಸಮುದಾಯದವರಿಗೆ ತೋರುತ್ತದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು ನೀಡಿರುವ ಅಂಕಿ ಅಂಶಗಳನ್ನು ಗಮನಿಸಿದಾಗ ರಾಯಚೂರಿನಲ್ಲಿ ಉರ್ದು ಶಾಲೆಗಳ ಸಂಖ್ಯೆಯು, ಉರ್ದು ಭಾಷೆ ಇರುವುದು ಖಚಿತವಾಗುತ್ತದೆ.

ಕ್ರ.ಸಂ.	ಮಾಧ್ಯಮ	ಒಟ್ಟು ಶಾಲೆಗಳ ಸಂಖ್ಯೆ
೧.	ಕನ್ನಡ	೨೫೬
೨.	ಉರ್ದು	೨೫
೩.	ತೆಲುಗು	೦೫
೪.	ಹಿಂದಿ	೦೧
೫.	ಇಂಗ್ಲೀಶ್	೦೬

ಈ ಮೇಲಿನ ಅಂಕಿ-ಅಂಶಗಳನ್ನು ಗಮನಿಸಿದಾಗ ಕನ್ನಡವನ್ನು ಬಿಟ್ಟು ಎರಡನೇ ಸ್ಥಾನ ಉರ್ದುವಿಗೆ ಇದೆ. ಮತ್ತು ಇದರಲ್ಲಿ ನಗರದ ಪ್ರದೇಶದಲ್ಲಿ ೧೯ ಶಾಲೆಗಳಿವೆ. ಗ್ರಾಮಾಂತರ ಪ್ರದೇಶದಲ್ಲಿ ೬ ಉರ್ದು ಶಾಲೆಗಳಿರುವುದು ಬೆಳಕಿಗೆ ಬಂದಿದೆ. ಇದರಲ್ಲಿ ಉರ್ದು ಮಾತನಾಡುವವರ ಸಂಖ್ಯೆ ನಗರದಲ್ಲಿ ಅಧಿಕವಾಗಿರುವುದು ಕಂಡುಬರುತ್ತದೆ. ೧೯ ಉರ್ದು ಶಾಲೆಗಳಲ್ಲಿ ಅಭ್ಯಾಸ

ಮಾಡುತ್ತಿರುವ ಮಕ್ಕಳು ಅಪ್ಪಟ ಉರ್ದು ಭಾಷಿಕರ ಮಕ್ಕಳಾಗಿವೆ. ಇಲ್ಲಿನ ಉರ್ದು ಭಾಷಿಕರು ಅನೇಕ ವ್ಯಾಪಾರಗಳನ್ನು ಮಾಡುತ್ತಾ ಆ ಸಂದರ್ಭದಲ್ಲಿ ಬಳಕೆಯಲ್ಲಿರುವ ಭಾಷೆಗಳನ್ನು ಮಾತಾಡುತ್ತಾರೆ. ತಮ್ಮ ಸಮುದಾಯದಲ್ಲಿ ಈ ಭಾಷೆಯನ್ನು ಉಳಿಸಿಕೊಂಡು ಬಂದು ಭಾಷಾ ಸಂಗೋಪನೆ ಮಾಡುತ್ತಿದ್ದಾರೆ. ಬಂಧುಗಳೊಂದಿಗೆ ನೆರೆ ಹೊರೆಯವರೊಂದಿಗೆ ಸ್ನೇಹಿತರೊಂದಿಗೆ ಇವರು ಉರ್ದುವನ್ನೇ ಮಾತಾಡುತ್ತಾರೆ. ಉರ್ದು ಭಾಷಿಕರ ಮಹಿಳೆಯರು ಹೆಚ್ಚಾಗಿ ಏಕಭಾಷಿಕರಿರುವುದು ಕಂಡುಬರುತ್ತದೆ. ಈ ಹೆಣ್ಣು ಮಕ್ಕಳು ಜನಸಂಪರ್ಕ ಕಡಿಮೆ ಹೊಂದಿದ್ದಾರೆ. ಆದ್ದರಿಂದ ಇವರಲ್ಲಿ ಬಹುತೇಕರು ಏಕ ಭಾಷಿಕರಾಗಿದ್ದಾರೆ. ಪುರುಷರು ಹೆಚ್ಚಾಗಿ ಜನ ಸಂಪರ್ಕ ಹೊಂದಿರುವುದರಿಂದ ಇವರಲ್ಲಿ ಬಹು ಭಾಷಿಕರು ಅಧಿಕ ಸಂಖ್ಯೆಯಲ್ಲಿದ್ದಾರೆ. ಇತರೆ ಸಮುದಾಯದ ಪುರುಷರಿಗೆ ಹೋಲಿಸಿದರೆ ಮುಸ್ಲಿಂ ಪುರುಷರು ಬಹುಭಾಷಿಕರಾಗಿರುವುದು ಕಂಡುಬರುತ್ತದೆ.

ಕನ್ನಡದೊಂದಿಗೆ ಉರ್ದು ಮತ್ತು ತೆಲುಗು ಭಾಷೆಯನ್ನು ಇತರ ಸಮುದಾಯದವರು ಬೇರೆ ಬೇರೆ ಸಂದರ್ಭಗಳಲ್ಲಿ ಬಳಸುತ್ತಾರೆ. ಮರಾಠಿಗರು ಸಿಳ್ಳ್ಯಾಕ್ಯಾತರು ಮಾರವಾಡಿಗರು ಹಾಗೂ ಇತರೆ ವರ್ಗದವರು ಬಹುಭಾಷಿಕರಾಗಿದ್ದಾರೆ. ಮೂಲತಃ ಇವರ ಮನೆ ಮಾತು ಬೇರೆ ಬೇರೆಯಾಗಿದೆ. ಸಿಳ್ಳ್ಯಾಕ್ಯಾತರ ಮನೆ ಮಾತು ಹಾಗೂ ಮಾರವಾಡಿಗಳ ಮನೆ ಮಾತು ಮರಾಠಿ ಮತ್ತು ಹಿಂದಿಯಾಗಿದೆ. ವಿವಿಧ ಆವರಣಗಳಲ್ಲಿ ಕನ್ನಡ-ತೆಲುಗು ಭಾಷೆಯನ್ನು ಇವರು ಬಳಸುತ್ತಾರೆ. ಇವರಲ್ಲಿ ಸಿಳ್ಳ್ಯಾಕ್ಯಾತರ ಮಹಿಳೆಯರಲ್ಲಿ ಕೂಡ ಬಹುಭಾಷಿಕರಾಗಿರುವುದು ವಿಶೇಷವಾಗಿದೆ. ಈ ಮಹಿಳೆಯರು ಕೂಲಿ ಕೆಲಸ ಮತ್ತು ಇತರ ಉದ್ಯೋಗದಲ್ಲಿರುವುದು ಬಹುಭಾಷಿಕರಾಗಿರುವುದಕ್ಕೆ ಕಾರಣವಾಗಿದೆ.

ಮುಸ್ಲಿಂರು, ಜೈನರು ಮರಾಠಿಗರ ಪ್ರಭಾವದಿಂದ ಇವರಲ್ಲಿ ಕೆಲಸ ಮಾಡುವ ಅನೇಕರು ಇವರ ಭಾಷೆಯನ್ನು ಕಲಿತು ಕನ್ನಡ ತೆಲುಗು ಮಾತನಾಡುತ್ತಿರುವುದು ವಿಶೇಷವೆನಿಸಿದೆ. ಕೂಲಿ ಕಾರ್ಮಿಕರು ಆಟೋ ಚಾಲಕರು ಫುಟ್ ಬಾತ್ ವ್ಯಾಪಾರಿಗಳು ಇತರೆ ಸಮುದಾಯದವರು ಉರ್ದುವನ್ನು ಬಳಸುತ್ತಾರೆ. ಉರ್ದು ಭಾಷಿಕರು ಅನೇಕ ವರ್ಷಗಳಿಂದ ಇಲ್ಲಯೇ ನೆಲೆಸಿದ್ದಾರೆ. ನಿಜಾಮರ ಆಡಳಿತದ ಸಂದರ್ಭದಲ್ಲಿ ಉರ್ದು ಭಾಷಿಕರ ಆಡಳಿತ ಇದ್ದುದರಿಂದ ಇಲ್ಲಿ ಈಗಲೂ ಅನೇಕ ಉರ್ದು ಪದಗಳನ್ನು ಕನ್ನಡಿಗರು ಬಳಸುತ್ತಿದ್ದಾರೆ. ಉರ್ದು ಮೂಲ ಭಾಷಿಕರು ರಾಯಚೂರಿನಲ್ಲಿ ಇನ್ನೂ ನೆಲಸಿದ್ದಾರೆ. ಇವರು ಕನ್ನಡ-ತೆಲುಗಿನೊಂದಿಗೆ ಉರ್ದು ಭಾಷೆಯನ್ನು ಬಳಸುತ್ತಾರೆ ಹಾಗೂ ಉರ್ದುವಿನ ಪದಗಳೊಂದಿಗೆ ಕನ್ನಡ-ನುಡಿ ಮಿಶ್ರಣ ಮಾಡಿ ಬಳಸುತ್ತಿದ್ದಾರೆ.

ರಾಯಚೂರು ಪರಿಸರದ ಕನ್ನಡ-ಉರ್ದುವಿನ ಸಂಬಂಧ

ರಾಯಚೂರು ಜಿಲ್ಲೆಯ ಮತ್ತೊಂದು ವಿಶೇಷವೆಂದರೆ, ರಾಯಚೂರಿನ ನಗರ ಪ್ರದೇಶದಲ್ಲಿ ಉರ್ದುವಿನ ಪ್ರಭಾವ ದಟ್ಟವಾಗಿದೆ. ಕೇವಲ ಮುಸ್ಲಿಂರಷ್ಟೇ ಉರ್ದುವನ್ನು ಬಳಸುವುದಿಲ್ಲ ವಿವಿಧ

ಸಮುದಾಯದವರು ಕೂಡ ಅನೇಕ ಅವರಣಗಳಲ್ಲಿ ಉರ್ದು ಬಳಸುತ್ತಾರೆ. ಇದು ವಿಶಿಷ್ಟವಾಗಿರುವುದು ಕಂಡುಬರುತ್ತದೆ. ಇದಕ್ಕೆ ಇಲ್ಲಿ ಭಾಷಿಕ ಪರಿಸರವು ಕಾರಣವಾಗಿದೆ. ಇದಕ್ಕೆ ಐತಿಹಾಸಿಕ ಹಿನ್ನೆಲೆಯೂ ಕಾರಣವಾಗಿದೆ. ಈ ಹಿಂದೆ ರಾಯಚೂರಿನ ಪ್ರದೇಶವು ಹೈದ್ರಾಬಾದಿನ ನಿಜಾಮನ ಆಡಳಿತಕ್ಕೆ ಒಳಪಟ್ಟಿದ್ದರಿಂದ ಹಾಗೆಯೇ ಆಡಳಿತ ಭಾಷೆಯು ಉರ್ದುವಿನಲ್ಲಿ ಇದ್ದುದ್ದರಿಂದ ಇವರ ಅವಧಿಯಲ್ಲಿ ಶಿಕ್ಷಣ ಸಂಸ್ಥೆಗಳು ಕೂಡ ಉರ್ದುವಿನ ಪ್ರಭಾವಕ್ಕೆ ಇಲ್ಲಿನ ಪರಿಸರವು ಒಳಗಾಗಿದೆ.

ದೇಶದ ನಾನಾ ಭಾಗಗಳಿಂದ ಉರ್ದು ಭಾಷಿಕರು ಉದ್ಯೋಗಕ್ಕಾಗಿ, ವಿದ್ಯಾಭ್ಯಾಸಕ್ಕಾಗಿ ಹಾಗೂ ವ್ಯವಹಾರದ ಅನುಕೂಲಕ್ಕಾಗಿ, ರಾಯಚೂರಿಗೆ ಬಂದು ನೆಲೆ ನಿಲ್ಲುವ ಸಂದರ್ಭದಲ್ಲಿ ತಮ್ಮ ಮಾತೃ ಭಾಷೆ ಉರ್ದುವಿನ ಜೊತೆಗೆ ವ್ಯವಹಾರಿಕ ಭಾಷೆಯಾಗಿ ಕನ್ನಡ ಭಾಷೆಯನ್ನು ಬಳಸಿಕೊಳ್ಳುವ ಅನಿವಾರ್ಯತೆಗಳು ಎದುರಾಗಿದ್ದವು. ಈ ಅನಿವಾರ್ಯತೆಯನ್ನು ನೀಗಿಸಲು ಉರ್ದು ಭಾಷಿಕರು ಕನ್ನಡದೊಂದಿಗೆ ವ್ಯವಹರಿಸಬೇಕಾದ ಸಂದರ್ಭಗಳು ಅವಶ್ಯಕವಾಗಿದ್ದವು. ಆದುದರಿಂದ ಉರ್ದು ಭಾಷಿಕರು ಕನ್ನಡವನ್ನು ಕಲಿತು ದ್ವಿಭಾಷಿಕರಾಗಿದ್ದರು.

ಉರ್ದು ಭಾಷಿಕರಲ್ಲದವರು ಕನ್ನಡದೊಂದಿಗೆ ಉರ್ದುವನ್ನು ಬಳಸಿ ಮಾತಾನಾಡುತ್ತಾರೆ. ಆದರೆ ಸಂಪೂರ್ಣವಾಗಿ ಮಾತನಾಡುವುದಿಲ್ಲ. ಕನ್ನಡದೊಂದಿಗೆ ಉರ್ದುವನ್ನು ಅರೆಭಾಷಿಕವಾಗಿ ಮಾತಾನಾಡುತ್ತಾರೆ. ಉರ್ದುವನ್ನು ಕನ್ನಡಿಗರು ಸುಲಭವಾಗಿ ಅರ್ಥೈಸಬಲ್ಲರು ಆದರೆ ಬಳಕೆಯ ಸಂದರ್ಭದಲ್ಲಿ ಹಿಂದಿ ಮಿಶ್ರಿತ ಉರ್ದು ಅಥವಾ ಕನ್ನಡ ಮಿಶ್ರಿತ ಉರ್ದುವನ್ನು ಬಳಸುತ್ತಾರೆ.

ದ್ವಿತೀಯ ಭಾಷೆಗಳಾಗಿ ಕನ್ನಡ-ತೆಲುಗು ಬಳಸುತ್ತಿರುವವರು

ಕನ್ನಡ-ತೆಲುಗು ಭಾಷೆಗಳನ್ನು ದ್ವಿತೀಯ ಭಾಷೆಗಳಾಗಿ ಬಳಸುತ್ತಿರುವವರು ತಮ್ಮ ಮನೆ ಮಾತು ಹಿಂದಿ, ಉರ್ದು, ಮರಾಠಿ, ತಮಿಳು ಭಾಷೆಗಳನ್ನು ಮಾತಾಡುತ್ತಿದ್ದಾರೆ. ಇವರು ವಿವಿಧ ಸಂದರ್ಭದಲ್ಲಿ ಕನ್ನಡ-ತೆಲುಗು ಭಾಷೆಗಳನ್ನು ಎರಡನೇ ಭಾಷೆಯಾಗಿ ಮಾತಾಡುತ್ತಾರೆ. ರಾಯಚೂರು ಪರಿಸರದಲ್ಲಿ ಇಂತಹ ಸನ್ನಿವೇಶಗಳು ಅಲ್ಲಲ್ಲಿ ಸಿಗುತ್ತವೆ. ಅಂತಹವುಗಳಲ್ಲಿ ಕೆಲವು ಸಮೂದಾಯಗಳೆಂದರೆ ಮುಸ್ಲಿಂರು, ಜೈನರು(ಮಾರ್ವಾಡಿ), ಸಿಳ್ಳ್ಯಾಕ್ಯಾತರು, ಭಜಂತ್ರಿಯರು, ಲಂಬಾಣಿಗರು, ಸಾವಾಜಿ(ಮರಾಠರು)ಗಳು ಮುಂತಾದವರು ಎರಡನೇ ಭಾಷೆಯಾಗಿ ಕನ್ನಡವನ್ನು ಮಾತಾಡುತ್ತಾರೆ.

ಮುಸ್ಲಿಂರ ಮನೆ ಮಾತು ಉರ್ದುವಾದರೂ ಕೂಡ ಇವರು ವ್ಯಾಪಾರದ ಸಂದರ್ಭದಲ್ಲಿ ಮನೆಯ ಅಕ್ಕಪಕ್ಕದಲ್ಲಿ, ಸ್ನೇಹಿತರೊಂದಿಗೆ ಹೆಚ್ಚಾಗಿ ಕನ್ನಡ-ತೆಲುಗು ಭಾಷೆಯನ್ನು ಬಳಸುತ್ತಾರೆ. ಜೈನರು(ಮಾರ್ವಾಡಿ)ಗಳು ಮನೆ ಮಾತು ಹಿಂದಿ. ಇವರು ವ್ಯಾಪಾರದ ದೃಷ್ಟಿಯಿಂದ ಬಹುಭಾಷಿಕರಾಗಿದ್ದರೂ ಕೂಡಾ ಕನ್ನಡ ತೆಲುಗನ್ನು ದ್ವಿತೀಯ ಭಾಷೆಗಳಾಗಿ ಮಾತಾಡುತ್ತಾರೆ. ಇವರಲ್ಲಿ ಪುರುಷರೇ ಹೆಚ್ಚು ಬೇರೆ

ಭಾಷೆಗಳನ್ನು ಬಳಸುತ್ತಾರೆ. ಇವರಲ್ಲಿ ಮಹಿಳೆಯರು ಹೆಚ್ಚಿನ ಸಂದರ್ಭಗಳಲ್ಲಿ ಸಾಮಾಜಿಕ ಸಂಪರ್ಕ ಕಡಿಮೆ ಇರುವುದರಿಂದ ತಮ್ಮ ಮನೆ ಮಾತನ್ನೇ ಹೆಚ್ಚು ಬಳಕೆ ಮಾಡುತ್ತಾರೆ. ಆದ್ದರಿಂದ ಪುರುಷರಿಗಿಂತ ಮಹಿಳೆಯರು ದ್ವಿತೀಯ ಭಾಷೆಗಳಾಗಿ ಕನ್ನಡ-ತೆಲುಗು ಬಳಸುವ ಸಂದರ್ಭಗಳು ಕಡಿಮೆ. ಸಿಳ್ಳ್ಯಾಕ್ಯಾತರು ಎಂದು ಕರೆಸಿಕೊಳ್ಳುವವರು ರಾಯಚೂರಿನ ಪರಿಸರದಲ್ಲಿ ಹಾಗೂ ಉಳಿದ ತಾಲೂಕುಗಳಲ್ಲಿ ವಾಸವಾಗಿದ್ದಾರೆ. ಇವರ ಮನೆ ಮಾತು ಮರಾಠಿ. ಸಂಬಂಧಿಕರೊಂದಗೆ, ತಮ್ಮ ಸಮುದಾಯಗಳೊಂದಿಗೆ ಮನೆ ಮಾತನ್ನೇ ಬಳಸುತ್ತಾರೆ. ಹೊರಗಿನ ವಾತಾವರಣದಲ್ಲಿ ಕನ್ನಡ-ತೆಲುಗನ್ನು ದ್ವಿತೀಯ ಭಾಷೆಗಳಾಗಿ ಬಳಸುತ್ತಾರೆ. ಇವರಲ್ಲಿ ಮಹಿಳೆಯರು ಕೂಡಾ ತಮ್ಮ ಮಾತೃ ಭಾಷೆಯೊಂದಿಗೆ ಕನ್ನಡ-ತೆಲುಗನ್ನು ಎರಡನೇ ಭಾಷೆಯಾಗಿ ಬಳಸುತ್ತಾರೆ. ಇವರು ಹೆಚ್ಚು ವ್ಯಾಪಾರ-ವ್ಯವಹಾರಗಳಲ್ಲೂ ಪಾಲ್ಗೊಳ್ಳುವುದು ಕಂಡುಬಂದಿದೆ.

ವಲಸಿಗರಿಂದ ಉಂಟಾದ ದ್ವಿಭಾಷಿಕತೆ

ರಾಯಚೂರು ಜಿಲ್ಲೆಯು ಹೊರ ರಾಜ್ಯದ ಜನರನ್ನು ಉದ್ಯೋಗದ ದೃಷ್ಟಿಯಿಂದ ಬೇರೆ ಬೇರೆ ಕಡೆಯಿಂದ ಜನರನ್ನು ಆಕರ್ಷಿಸುತ್ತದೆ. ಇಲ್ಲಿ ಹೊರ ರಾಜ್ಯಗಳಿಂದ ಅನೇಕ ಕುಟುಂಬಗಳು, ಸಮುದಾಯಗಳು ಬಂದು ನೆಲೆಸಿವೆ. ಸುಮಾರು ವರ್ಷಗಳಿಂದ ವ್ಯಾಪಾರಕ್ಕಾಗಿ, ಕೃಷಿಗಾಗಿ, ಸರ್ಕಾರಿ ಉದ್ಯೋಗಕ್ಕಾಗಿ ರಾಯಚೂರು ಹಾಗೂ ಮಾನ್ವಿ ಪ್ರದೇಶದಲ್ಲಿ ನೆಲೆಸಿದ್ದಾರೆ.

ವಲಸಿಗರು ಇಲ್ಲಿ ಸಿಗುವ ಫಲವತ್ತಾದ ಭೂಮಿಯನ್ನು ಕಡಿಮೆ ದರದಲ್ಲಿ ಖರೀದಿಸಿ, ಕೃಷಿ ಮಾಡಲು ವಲಸೆ ಬಂದಿರುವುದು ಸರ್ವೇ ಸಾಮಾನ್ಯವಾಗಿದೆ. ವಲಸಿಗರಾಗಿ ಬಂದಂತಹ ಅನೇಕ ಕುಟುಂಬಗಳು ಮಾನ್ವಿ ಪ್ರದೇಶದ ಸಾವಿರಾರು ಎಕರೆ ಭೂಮಿಯನ್ನು ಕೃಷಿ ಅವಲಂಬನೆಗಾಗಿ ಖರೀದಿಸಿದ್ದಾರೆ. ಹಾಗೆಯೇ ನೀರಾವರಿ ಮಾಡಿ ಬೇಸಾಯ ಮಾಡುತ್ತಿರುವುದು ಗಮನಕ್ಕೆ ಬರುತ್ತದೆ. ಮಾನ್ವಿ ಪ್ರದೇಶದಲ್ಲಿ ತುಂಗಭದ್ರ ನದಿಯ ನೀರು, ನೀರಾವರಿಗೆ ಅತ್ಯಂತ ಅನುಕೂಲಕರವಾಗಿದೆ. ಅದೇ ರೀತಿ ವಲಸಿಗರಾಗಿ ರಾಯಚೂರಿಗೆ ಅನೇಕ ಕುಟುಂಬಗಳು ಆಂಧ್ರದಿಂದ ವಲಸೆ ಬಂದಿದ್ದಾರೆ. ಇಲ್ಲಿ ಕೃಷ್ಣಾನದಿ ಹಾಗೂ ತುಂಗಭದ್ರ ನದಿಗಳು ಎಡ-ಬಲದಲ್ಲಿ ಹರಿಯುತ್ತಿರುವುದರಿಂದ ಅನೇಕ ಎಕರೆ ಭೂಮಿಗೆ ನೀರಾವರಿ ವ್ಯವಸ್ಥೆ ಸುಗಮವಾಗಿರುವುದು. ಅದೇ ರೀತಿ ಬೇರೆ ಬೇರೆ ಕುಟುಂಬಗಳು ವಲಸೆ ಬಂದು ಕೃಷಿಯನ್ನು ಅವಲಂಬಿಸಿರುವುದನ್ನು ಕಾಣುತ್ತೇವೆ.

ಕೇವಲ ಕೃಷಿ ಕೆಲಸಕ್ಕೆ ಮಾತ್ರವಲ್ಲದೆ ರಾಯಚೂರಿನ ಶಾಖೋತ್ಪನ್ನ ವಿದ್ಯುತ್ ಘಟಕ ಇರುವುದರಿಂದ ಹರಿಯಾಣ, ಪಂಜಾಬ್, ಮಧ್ಯಪ್ರದೇಶ ಮುಂತಾದ ಪ್ರದೇಶಗಳಿಂದ ಉದ್ಯೋಗವನ್ನು ಆಶ್ರಯಿಸಿ ಅನೇಕ ಕುಟುಂಬಗಳು ಶಕ್ತಿ ನಗರದಲ್ಲಿ ಬಂದು ನೆಲೆಸಿವೆ. ಇಂಥ ವಲಸಿಗರಿಗೆ ಇನ್ನು ಭಾಷೆ ಸಮಸ್ಯೆ ಕಾಡುತ್ತಿರುವುದು ಗೋಚರಿಸುತ್ತದೆ. ಆದರೂ ಇವರಲ್ಲಿ ದ್ವಿಭಾಷಿಕರು. ಅರೆ ದ್ವಿಭಾಷಿಕರೂ

ಇದ್ದಾರೆ. ಅಲ್ಲದೇ ಬೇರೆ ಬೇರೆ ಉದ್ಯೋಗಗಳಿಗೂ ಕೂಡ ಬಂದು ನೆಲೆಸಿದ್ದಾರೆ. ಇವರಿಂದ ದ್ವಿಭಾಷಿಕತೆ ಹಾಗೂ ಬಹುಭಾಷಿಕತೆ ಉಂಟಾಗುತ್ತದೆ.

ಕನ್ನಡ ಭಾಷಾ ಪ್ರಭೇದಗಳ ಮೇಲೆ ತೆಲುಗು ಭಾಷಾ ಪ್ರಭಾವ

ಕ್ರ.ಸಂ.	ಜಿಲ್ಲೆಗಳು	ತೆಲುಗು
೦೧.	ಬೀದರ್	+
೦೨.	ಗುಲ್ಬರ್ಗಾ	+
೦೩.	ಬಿಜಾಪುರ	-
೦೪.	ಬೆಳಗಾವಿ	-
೦೫.	ರಾಯಚೂರು	+
೦೬.	ಬಳ್ಳಾರಿ	++
೦೭.	ಕೊಪ್ಪಳ	-
೦೮.	ಬಾಗಲಕೋಟೆ	-
೦೯.	ಗದಗ	-
೧೦.	ಚಿತ್ರದುರ್ಗ	++
೧೧.	ತುಮಕೂರು	+++
೧೨.	ಕೋಲಾರ	++
೧೩.	ಬೆಂಗಳೂರು ಉತ್ತರ	++
೧೪.	ಮೈಸೂರು	+
೧೫.	ಕೊಡಗು	-
೧೬.	ಚಾಮರಾಜನಗರ	+
೧೭.	ದಕ್ಷಿಣ ಕನ್ನಡ	-
೧೮.	ಉತ್ತರ ಕನ್ನಡ	-
೧೯.	ಶಿವಮೊಗ್ಗ	-
೨೦.	ಮಂಡ್ಯ	+
೨೧.	ಹಾಸನ -	
೨೨.	ಚಿಕ್ಕಮಗಳೂರು	-
೨೩.	ಧಾರವಾಡ	-

೨೪.	ಉಡುಪಿ	-
೨೫.	ಹಾವೇರಿ	-
೨೬.	ಬೆಂಗಳೂರು ದಕ್ಷಿಣ	+

+++ = ಹೆಚ್ಚು, ++ = ಸಾಧಾರಣ, + = ಕಡಿಮೆ, - = ಇಲ್ಲ

ಆಧಾರ : ಡಾ.ಎಂ.ಭಾಗ್ಯಲಕ್ಷ್ಮಿ, ದ್ವಿಭಾಷಿಕರು, ಪು.೯೩

ಈ ಪಟ್ಟಿಯನ್ನು ಗಮನಿಸಿದಾಗ ಕನ್ನಡದ ಮೇಲೆ ತೆಲುಗು ಪ್ರಭಾವವಾಗಿರುವುದು ಕಾಣುತ್ತದೆ. ಚಿತ್ರದುರ್ಗ, ತುಮಕೂರು, ಕೋಲಾರ, ಬೆಂಗಳೂರು(ಉತ್ತರ) ಈ ಭಾಗಗಳು ಅಧಿಕ ಪ್ರಮಾಣದಲ್ಲಿ ತೆಲುಗು ಪ್ರಭಾವವಾಗಿರುವುದು ಕಾಣಬಹುದಾಗಿದೆ. ಆದರೆ, ರಾಯಚೂರಿನ ಮೇಲೆ ಅಷ್ಟೊಂದು ಪ್ರಭಾವ ಬೀರಿಲ್ಲದಿರುವುದು ಕಾಣುತ್ತದೆ. ಕೋಲಾರ ಜಿಲ್ಲೆಯು ಆಂಧ್ರಪ್ರದೇಶವನ್ನು ಸುತ್ತುವರಿದಿರುವುದರಿಂದ ಹಾಗೂ ದಕ್ಷಿಣದಲ್ಲಿ ಬೆಂಗಳೂರು ಇರುವುದರಿಂದ ಈ ಪ್ರದೇಶದಲ್ಲಿ ತೆಲುಗು ಹೆಚ್ಚು ಪ್ರಭಾವ ಬೀರಿದೆ. ತಮಿಳು ನಾಡಿನ ಕೆಲವು ಗಡಿ ಭಾಗಗಳಲ್ಲಿ ತೆಲುಗು ಪ್ರಭಾವವಿರುವುದು ಇಲ್ಲಿ ಗಮನಾರ್ಹವಾದದ್ದು. ಆದ್ದರಿಂದ ರಾಯಚೂರಿಗಿಂತ ಕೋಲಾರ, ತುಮಕೂರು ಮತ್ತು ಚಿತ್ರದುರ್ಗಗಳಲ್ಲಿ ತೆಲುಗು ಪ್ರಭಾವ ಅಧಿಕವಾಗಿದೆ. ಬಳ್ಳಾರಿಗೆ ಹೋಲಿಸಿದರೆ ರಾಯಚೂರು ಕಡಿಮೆ ಪ್ರಮಾಣದಲ್ಲಿ ತೆಲುಗು ಪ್ರಭಾವವಾಗಿದೆ.

ರಾಯಚೂರಿಗೆ ಬೀದರ್ ಹಾಗೂ ಕಲ್ಬುರ್ಗಿ ಜಿಲ್ಲೆಯ ಪೂರ್ವ ಗಡಿ ಭಾಗದಲ್ಲಿ ತೆಲುಗು ಪ್ರಭಾವವಿದ್ದರೂ ಇಲ್ಲಿ ಉರ್ದುವಿನ ಪ್ರಭಾವ ಅಧಿಕವಾಗಿರುವುದು ಕಂಡುಬರುತ್ತದೆ. ಕೋಲಾರ ಚಿತ್ರದುರ್ಗಕ್ಕೆ ಹೋಲಿಸಿದರೆ, ಪ್ರಮಾಣ ಕಡಿಮೆ. ಈ ಕೋಷ್ಟಕದಲ್ಲಿ ರಾಯಚೂರಿಗೆ ಅಧಿಕ ಪ್ರಮಾಣದಲ್ಲಿ ಆಗಿಲ್ಲದಿದ್ದರೂ ಕಡಿಮೆ ಪ್ರಮಾಣದಲ್ಲಿ ತೆಲುಗಿನ ಪ್ರಭಾವ ಕನ್ನಡದ ಮೇಲೆ ಆಗಿರುವುದು ಕಂಡುಬರುತ್ತದೆ.

ಅಡಿಟಿಪ್ಪಣಿ

೧. ಸಂಗಮೇಶ ಸವದತ್ತಿಮಠ, ಕನ್ನಡ ಭಾಷಾ ಪ್ರಬೇಧಗಳು, ೧೯೯೮, ಪು.೨೩

ಅಧ್ಯಾಯ ೬

ಭಾಷಾ ಸಂಪರ್ಕ

೬.೧. ಭಾಷಾ ಮನೋಭಾವ

೬.೨. ಭಾಷಾ ಸಂಗೋಪನೆ

೬.೩. ನುಡಿಬೆರಕೆ, ನುಡಿಜಿಗಿತ

೬

ಭಾಷಾ ಸಂಪರ್ಕ

ಜಗತ್ತಿನಲ್ಲಿ ಭಾಷೆಯೊಂದು ರೂಪುಗೊಂಡಿರುವುದು, ಸಾಮಾಜಿಕ ಸಂಪರ್ಕಕ್ಕೆಂದು ನಮಗೆಲ್ಲ ಗೊತ್ತಿರುವಂತಹದ್ದು. ಭಾಷೆಯ ಸಂಪರ್ಕದಿಂದ ಅನೇಕ ರೀತಿಯ ಸಂವಹನಗಳು ಆಗುವುದರಿಂದ ಭಾಷೆ ಬೆಳೆಯುತ್ತದೆ. ಇದರೊಂದಿಗೆ ಸಮಾಜವು ಸಂಸ್ಕೃತಿಯು ಬೆಳೆಯುತ್ತದೆ. ಭಾಷೆಯು ನಮಗೆ ಅಭಿಪ್ರಾಯ ಸಂವಹನಕ್ಕೆ ಇದೆ ಎಂದು ಎಲ್ಲರೂ ಸಾಮಾನ್ಯವಾಗಿ ಒಪ್ಪುತ್ತಾರೆ. ನಾವು ಇನ್ನೊಬ್ಬರೊಡನೆ ಅಭಿಪ್ರಾಯ ಸಂವಹನ ಮಾಡಲು ಮಾತ್ರವಲ್ಲ, ಆ ಇನ್ನೊಬ್ಬರ ಅಭಿಪ್ರಾಯ ನಮಗೆ ಸಂವಹನಗೊಳ್ಳಲು ಭಾಷೆ ಬೇಕು. ಸುದ್ದಿಗಳನ್ನು ಹರಡಲು, ಯೋಗಕ್ಷೇಮ ವಿಚಾರಿಸಲು, ಮಾಹಿತಿಯನ್ನು ಪಡೆಯಲು, ಸರಳವಾದ ವ್ಯವಹಾರವನ್ನು ನಡೆಸಲು, ವೃತ್ತಿ ಜೀವನವನ್ನು ನಿರ್ವಹಿಸಲು, ಆಡಳಿತ ಕ್ರಿಯೆಯಲ್ಲಿ ಭಾಗಿಗಳಾಗಲು ಹೀಗೆ ಒಂದಕ್ಕಿಂತ ಹೆಚ್ಚು ಹಾಗು ಸಮಾಜದಲ್ಲಿರುವ ಬೇರೆ ಬೇರೆ ಭಾಷೆಗಳ ನಡುವೆ ಭಾಷಾ ಸಂಪರ್ಕ ಅನಿವಾರ್ಯವಾಗಿದೆ. ಈ ಭಾಷಾ ಸಂಪರ್ಕದಿಂದಾಗಿ ಮತ್ತು ಸಾಮಾಜಿಕ ಸಂದರ್ಭಗಳಿಂದಾಗಿ ಒಂದು ಭಾಷೆಯನ್ನು ಬಲ್ಲ ಜನರು ಇನ್ನೊಂದು ಭಾಷೆಯನ್ನು ಕಲಿಯುವುದು ಅವಶ್ಯಕವಾಗಿದೆ.

ಭಾಷಾ ಸಂಪರ್ಕ ದ್ವಿಭಾಷಿಕ ಪರಿಸರದಲ್ಲಿ ಸಾಮಾನ್ಯವಾಗಿರುವಂತದ್ದು. ಏಕ ಭಾಷಿಕರಲ್ಲಿ ಸಾಮಾನ್ಯವಾಗಿ ಭಾಷಾಸಂಪರ್ಕ ಕಡಿಮೆ. ಸಾಮಾಜಿಕ ಸಂಪರ್ಕದ ಕೊರತೆಯಿಂದಾಗಿ ಹೆಂಗಸರು, ವೃದ್ಧರು ಜನ ಸಮುದಾಯದ ಹೊರಗೆ ವಾಸಿಸುವವರು, ಆದಿವಾಸಿಗಳು, ಊರಿನಿಂದ ಬಹಿಷ್ಕರಿಸಲ್ಪಟ್ಟವರು ಹೀಗೆ ಮುಂತಾದ ಸಮುದಾಯದವರು ಭಾಷಾ ಸಂಪರ್ಕದ ಕೊರತೆ ಅನುಭವಿಸುತ್ತಿರುತ್ತಾರೆ. ಇವರು ಕೊನೆಯವರೆಗೂ ಏಕಭಾಷಿಕರಾಗಿಯೇ ಉಳಿಯುತ್ತಾರೆ. ದ್ವಿಭಾಷಿಕ ಪರಿಸರದಲ್ಲಿ ಭಾಷಾ ಸಂಪರ್ಕವು ಅನೇಕ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಕಾರಣಗಳಿಂದ ಉಂಟಾಗುತ್ತದೆ. ಭಾಷಾ ಸಂಪರ್ಕವು ದ್ವಿಭಾಷಿಕ ಸನ್ನಿವೇಶಗಳಲ್ಲಿ ಮಾತ್ರವಲ್ಲದೆ ಬಹುಭಾಷಿಕ ಸನ್ನಿವೇಶಗಳಲ್ಲಿ ಹೆಚ್ಚಾಗಿರುತ್ತದೆ. ಈ ಪ್ರಕ್ರಿಯೆ ಭಾಷೆಯ ಬೆಳವಣಿಗೆಗೆ ಪೂರಕವಾಗಿದೆ. ಹಾಗೂ ಭಾಷಿಕವಾಗಿ ಅನೇಕ ವ್ಯತ್ಯಾಸಗಳಿಗೆ ಕಾರಣವಾಗಿದೆ.

ಬೇರೆ ಬೇರೆ ಭಾಷೆಗಳನ್ನು ಮನೆ ಭಾಷೆಯಾಗುಳ್ಳ ಎರಡು ಭಾಷಾ ಸಮಾಜಗಳ ಮಧ್ಯೆ ಸಂಪರ್ಕವೇರ್ಪಟ್ಟಾಗ ಆ ಎರಡು ಸಮಾಜಗಳು ಪರಸ್ಪರರ ಭಾಷೆಯನ್ನು ಕಲಿಯಬೇಕಾಗಿ ಬರಬಹುದು. ಅಥವಾ ಅವುಗಳಲ್ಲಿ ಒಂದು ಸಮಾಜದವರು ಮಾತ್ರ ಇನ್ನೊಂದರ ಭಾಷೆಯನ್ನು ಕಲಿಯಬಹುದು. ಇಂತಹ ಸಂಪರ್ಕ ಸಂದರ್ಭದಲ್ಲಿ ಇಡೀ ಸಮಾಜವೇ ಇನ್ನೊಂದು ಭಾಷೆಯನ್ನು ಕಲಿಯಬೇಕಾಗಿ ಬರಬಹುದು ಅಥವಾ ಸಮಾಜದ ಕೆಲವೇ ವ್ಯಕ್ತಿಗಳು ಇನ್ನೊಂದು ಭಾಷೆಯನ್ನು ಕಲಿತು ಮಧ್ಯವರ್ತಿಯಾಗಿರಬಹುದು. ಹಾಗೂ ಇಂತಹ ವ್ಯಕ್ತಿಗಳ ಸಂಖ್ಯೆ ಕ್ರಮೇಣ ಹೆಚ್ಚುತ್ತಾ ಇಡೀ ಸಮಾಜವೇ ಕಾಲಾನಂತರದಲ್ಲಿ ಇನ್ನೊಂದು ಭಾಷೆ ಕಲಿಯುವ ಸ್ಥಿತಿಯನ್ನು ತಲುಪಬಹುದು. ಇವೆಲ್ಲ ಸಾಮಾಜಿಕ, ಆರ್ಥಿಕ, ಸ್ಥಾನಮಾನಗಳು, ಜನಸಂಖ್ಯೆ, ಸಾಮಾಜಿಕ ಧೋರಣೆ ಇತ್ಯಾದಿ ಹಲವಾರು ಸಾಮಾಜಿಕ ಸಂಗತಿಗಳಿಗೆ ಸಂಬಂಧಿಸಿದಂತೆ ಆಯಾ ಸಮಾಜಗಳ ನಡುವಿನ ಸಾಪೇಕ್ಷ ಸಂಬಂಧವನ್ನು ಅವಲಂಬಿಸಿದೆ. ಹೀಗಲ್ಲದೆ ಸಾಮಾಜಿಕ ಸಂಪರ್ಕದ ನೇರ ಅವಶ್ಯಕತೆ ಇಲ್ಲದೆಯೂ ಶಿಕ್ಷಣ, ಆಡಳಿತ ಇತ್ಯಾದಿ ಕಾರಣಗಳಿಂದ ಇನ್ನೊಂದು ಭಾಷೆಯನ್ನು ಕಲಿಯಬೇಕಾಗಬಹುದು ಅಥವಾ ಅನ್ಯಭಾಷಿಕರ ಮಧ್ಯೆ ವಿವಾಹ ಸಂಬಂಧಗಳು ಏರ್ಪಟ್ಟಾಗ ಉಂಟಾಗುವ ಅವಶ್ಯಕತೆಯಿಂದಲೂ ಇನ್ನೊಂದು ಭಾಷೆಯನ್ನು ವೈಯಕ್ತಿಕ ಕಾರಣಗಳಿಗಾಗಿ ಕಲಿಯಬೇಕಾಗಿ ಬರಬಹುದು."(ಕೃಷ್ಣ ಪರಮೇಶ್ವರ ಭಟ್ಟ, ೧೯೯೫:೧) ಇಂತಹ ಹಲವಾರು ಕಾರಣಗಳಿಂದಾಗಿ ದ್ವಿಭಾಷಿಕ ಮತ್ತು ಬಹುಭಾಷಿಕ ಸಂದರ್ಭಗಳಲ್ಲಿ ಸಾಮಾಜಿಕ ಸಂಪರ್ಕಗಳು ಉಂಟಾಗಬಹುದು. ಭಾಷಿಕ ಬದಲಾವಣೆಗಳು ಆಗುವುದು ಈ ದ್ವಿಭಾಷಿಕ ಸನ್ನಿವೇಶದಿಂದಾದರೂ ಕೂಡ ಭಾಷೆಯ ಸಂಪರ್ಕದಿಂದ ಹಲವು ಪರಿಣಾಮಗಳನ್ನು ಬೀರುತ್ತದೆ.

ಎರಡು ಬೇರೆ ಬೇರೆ ಭಾಷೆಗಳ ಮಧ್ಯೆ ಸಂಪರ್ಕ ಏರ್ಪಟ್ಟಾಗ ಪ್ರಭಾವಿತವಾದ ಭಾಷೆಯು ಕೆಲವು ಅಲ್ಪಸಂಖ್ಯಾತ ಭಾಷೆಯ ಮೇಲೆ ಹೆಚ್ಚು ಪರಿಣಾಮ ಬೀರಿ ಭಾಷಿಕ ವ್ಯತ್ಯಾಸಗಳನ್ನು ಕಂಡರೂ ಸಹ ಭಾಷೆಯ ರಚನೆ ಹಾಗೂ ಬಳಕೆ ದೃಷ್ಟಿಯಲ್ಲಿ ಬದಲಾವಣೆಯಾಗುತ್ತವೆ. ಕೆಲವು ಪರಿಸರದಲ್ಲಿ ಅಲ್ಪಸಂಖ್ಯಾತರ ಮಾತೃ ಭಾಷೆಗಳು ಒಂದೆಡೆ ಹಾಗೆ ಉಳಿದಿವೆ. ಸಮಾಜದ ಹೊರಗಿನ ಸಂಪರ್ಕಕ್ಕಾಗಿ ಬಹುಸಂಖ್ಯಾತರ ಅಥವಾ ಪ್ರತಿಷ್ಠಿತ ಸಮಾಜದ ಭಾಷೆಯೊಡನೆ ಕಸಿ ಮಾಡಿದ ಬೇರೆ ಬೇರೆ ರೀತಿಯ ಮಿಶ್ರ ಭಾಷೆಗಳನ್ನು ಸಂಪರ್ಕ ಭಾಷೆಯನ್ನಾಗಿ ಬಳಸಲಾಗುತ್ತಿದೆ. ಹಾಗೂ ಕೆಲವೊಮ್ಮೆ ದ್ವಿಭಾಷಿಕ ಸಂದರ್ಭದಲ್ಲಿ ಎರಡು ಭಾಷೆಗಳು ಸಂಪರ್ಕಗೊಂಡು ಮತ್ತೊಂದು ಭಾಷೆ ಜನ್ಮತಾಳಬಹುದು. ಅವು ಪಿಜಿನ್, ಕ್ರಿಯೋಲ್ ಭಾಷೆಗಳಾಗುತ್ತವೆ. ಇಂತಹ ಕೆಲವು ಸನ್ನಿವೇಶಗಳು ದಕ್ಷಿಣದ ಕೆಲ ದೇಶಗಳಲ್ಲಿ ಭಾಷೆಗಳ ಸಂಪರ್ಕದ ಬಗೆಗಿನ ಅಧ್ಯಯನಗಳು ತಿಳಿಸುತ್ತವೆ. ಮತ್ತು ಎರಡು ಭಾಷೆಗಳ ಸಂಪರ್ಕದಿಂದ ಮಿಶ್ರ ಭಾಷೆಯ ಸೃಷ್ಟಿಯಾಗುತ್ತದೆ.

“ಚಲನಶೀಲವಾದ ಭಾಷಾ ಸಂಪರ್ಕ ಸದಾ ಬದಲಾಗುತ್ತಿರುತ್ತದೆ. ಹಾಗೆಯೇ ದ್ವಿಭಾಷಾ ಪರಿಸರದಲ್ಲಿ ಭಾಷೆಗಳ ಸಂಪರ್ಕದಿಂದ ಉಂಟಾಗುವ ಭಾಷಿಕ ಸನ್ನಿವೇಶಗಳು (ಪಿಜಿನ್ , ಕ್ರಿಯೋಲ್, ನುಡಿಮಿಶ್ರಣ, ನುಡಿಪಲ್ಲಟ, ಡೈಗ್ಲಾಸಿಯಾ, ಭಾಷಾ ಸಂಗೋಪನೆ, ಭಾಷಾ ಪಲ್ಲಟ) ಪ್ರತಿಯೊಂದು ದ್ವಿಭಾಷಿಕ ಪರಿಸರಗಳಲ್ಲಿಯೂ ಭಿನ್ನ ನೆಲೆಗಳಲ್ಲಿ ಕಾಣಿಸಿಕೊಳ್ಳುತ್ತಿರುತ್ತದೆ. ಎರಡು ಭಿನ್ನ ಭಾಷೆಗಳ ಸಂಪರ್ಕದಿಂದ ಉಂಟಾದ ದ್ವಿಭಾಷಾ ಪರಿಸರಗಳಲ್ಲಿನ ಭಾಷಿಕರ ಭಾಷಾ ಧೋರಣೆಗಳು ಭಾಷೆಗಳ ಬಗೆಗಿನ ಮನೋಭಾವ, ಭಾಷಿಕರ ನಡವಳಿಕೆಗಳು ಇವೂ ಸಹ ಭಿನ್ನ ನೆಲೆಗಳಲ್ಲಿ ಕಾಣುತ್ತವೆ” ಎಂದು ಎಂ.ಭಾಗ್ಯಲಕ್ಷ್ಮಿ(೨೦೦೭:೧೫೫) ಅವರು ಅಭಿಪ್ರಾಯ ಪಡುತ್ತಾರೆ.

ರಾಯಚೂರು ಪರಿಸರದ ದ್ವಿಭಾಷಿಕ ಸಂದರ್ಭಗಳಲ್ಲಿ ಉಂಟಾಗಿರುವ ಭಾಷಿಕ ಸನ್ನಿವೇಶಗಳು, ಭಾಷಿಕ ಪ್ರಕ್ರಿಯೆಗಳು ಭಾಷಿಕ ಮನೋಭಾವನೆ, ಭಾಷೆ ಸಂಗೋಪನೆ, ಭಾಷಿಕರ ನಡವಳಿಕೆ ಮುಂತಾದ ಭಾಷಿಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಸಹಾಯಕವಾದ ಮಾಹಿತಿಯನ್ನು ಈ ಅಧ್ಯಯನ ಒದಗಿಸುತ್ತದೆ.

ರಾಯಚೂರು ಪ್ರದೇಶದಲ್ಲಿ ಅನೇಕ ಶತಮಾನಗಳಿಂದಲೂ ಕನ್ನಡ-ತೆಲುಗು, ಕನ್ನಡ-ಉರ್ದು, ಕನ್ನಡ-ಇಂಗ್ಲೀಶ್ ದ್ವಿಭಾಷಿಕತೆ ಇರುವುದು ಚಾರಿತ್ರಿಕ ಆಧಾರಗಳಿಂದ ತಿಳಿದುಬರುತ್ತದೆ. ಆದ್ದರಿಂದ ಅನೇಕ ವರ್ಷಗಳಿಂದಲೂ ಕನ್ನಡಿಗರು ಮತ್ತು ತೆಲುಗರೂ ಹಾಗೂ ಉರ್ದು ಭಾಷಿಕರು ಒಟ್ಟಿಗೆ ಬದುಕುತ್ತಿರುವುದು ಸಹಜವಾಗಿದೆ. ಇಲ್ಲಿ ರಾಜಕೀಯ ಗಡಿಗಳನ್ನು ಮೀರಿಯೂ ಜನ ಸಮುದಾಯಗಳಲ್ಲಿ ದ್ವಿಭಾಷಿಕತೆಯೂ ನೆಲೆಗೊಂಡಂತೆ ತೋರುತ್ತದೆ. ಶತಮಾನಗಳ ದ್ವಿಭಾಷಿಕ ಸಂದರ್ಭದಲ್ಲಿ ಈ ಮೂರು ಭಾಷಿಕರು ಒಟ್ಟಿಗೆ ಬದುಕುತ್ತಿದ್ದರು. ೧೯೫೬ರಲ್ಲಿ ಭಾಷಾವಾರು ಪ್ರಾಂತ್ಯಗಳ ವಿಘಟನೆಯ ಕಾಲದಲ್ಲಿ ಹರಿದು ಹಂಚಿ ಹೋಗಬೇಕಾಯಿತು. ಭಾಷಿಕರ ಮಧ್ಯೆ ರಾಜಕೀಯ ಗಡಿಗಳನ್ನು ಹಾಕಬಹುದೇ ವಿನಃ ಭಾಷಿಕ ಗಡಿಗಳನ್ನು ಹಾಕಲು ಸಾಧ್ಯವಿಲ್ಲ.

ರಾಯಚೂರು ಜಿಲ್ಲೆಯೂ ಭಾಷಾವಾರು ಪ್ರಾಂತ್ಯಗಳಿಂದ ವಿಭಜನೆಯಾದ ನಂತರದಲ್ಲಿ ಹೈದ್ರಾಬಾದ್ ನಿಜಾಮನ ಆಡಳಿತಕ್ಕೆ ಒಳಪಟ್ಟಿತು. ಇಲ್ಲಿ ಉರ್ದು ಆಡಳಿತ ಭಾಷೆಗೆ ಕನ್ನಡಿಗರು ತಲೆಬಾಗಬೇಕಾಯಿತು ಹಾಗೂ ರಾಯಚೂರು ಮಾನ್ವಿ ತಾಲೂಕುಗಳು ಆಂಧ್ರದ ಗಡಿ ಭಾಗಗಳಿಗೆ ಅಂಟಿಕೊಂಡಿರುವುದರಿಂದ ತೆಲುಗು ಭಾಷೆಗಳು ಸಾಂಸ್ಕೃತಿಕ ಕೊಡುಕೊಳ್ಳುವಿಕೆಯಿಂದ ತೆಲುಗು ಭಾಷೆಯ ಪ್ರಭಾವವೂ ಇತ್ತು. ರಾಯಚೂರು ಜಿಲ್ಲೆಯು ಪ್ರಾಂತ್ಯವಾರು ವಿಭಜನೆಯಾಗುವ ಮುಂಚೆ ಬ್ರಿಟಿಷರ ಆಡಳಿತಕ್ಕೂ ಒಳಪಟ್ಟಿತ್ತು. ಆದ್ದರಿಂದ ಇಂಗ್ಲೀಶ್ ಪ್ರಭಾವವು ರಾಯಚೂರು ಪ್ರದೇಶದ ಮೇಲೆ ಸಹಜವಾಗಿಯೇ ಆಗಿದೆ.

[illegible]

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕನ್ನಡದೊಂದಿಗೆ ತೆಲುಗು, ಉರ್ದು, ಇಂಗ್ಲೀಶ್, ದ್ವಿಭಾಷಿಕ ಸಂದರ್ಭಗಳು ಜರುಗಿರುವುದು ಸಹಜವಾಗಿಯೇ ಕಾಣುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಕನ್ನಡದ ಭಾಷಿಕ ಭಿನ್ನತೆಗಳು ಹಲವು ಕಾರಣಗಳಿಂದ ಭಾಷಿಕ ಸನ್ನಿವೇಶಗಳಿಗೆ ತಕ್ಕಂತ ಬದಲಾಗುತ್ತಾ ನಡೆದಿದೆ.


ಸಮಾಜದಲ್ಲಿ ಆಗುತ್ತಿರುವ ಹಲವು ಬದಲಾವಣೆಗಳು ಸರ್ಕಾರದ ಆಡಳಿತಾತ್ಮಕ ನಿರ್ಧಾರಗಳು ಜಾಗತೀಕರಣ ಪ್ರಕ್ರಿಯೆಯಿಂದಾಗಿ ಉಂಟಾಗುವ ಪರಿಣಾಮಗಳು ಇಲ್ಲಿ ದ್ವಿಭಾಷಾ ಪರಿಸರವನ್ನು ನಿರ್ಮಿಸಿವೆ. ಹಾಗೂ ಭಾಷಿಕರಲ್ಲೆ ಮತ್ತೊಂದು ಭಾಷೆಯ ಬಗೆಗಿನ ಮನೋಭಾವಗಳು ಯಾವ ರೀತಿಯ ಬದಲಾವಣೆಗಳಿಗೆ, ಪರಿಣಾಮಗಳಿಗೆ ಎಡೆ ಮಾಡಿಕೊಟ್ಟಿದೆ ಎನ್ನುವುದು ಅತ್ಯಂತ ಆಸಕ್ತಿದಾಯಕ ವಿಷಯವಾಗಿದೆ.

ದ್ವಿಭಾಷಿಕ ಪ್ರದೇಶದಲ್ಲಿ ಭಾಷಿಕರ ಭಾಷಾ ಮನೋಭಾವಗಳು ಒಂದು ಭಾಷೆಯ ಅಳಿವು ಉಳಿವಿಗೆ ಕಾರಣವಾಗಿರುತ್ತವೆ. ಆದ್ದರಿಂದ ರಾಯಚೂರು ಪರಿಸರದ ಪ್ರಸ್ತುತ ದ್ವಿಭಾಷಿಕರಲ್ಲಿ ಆಗುತ್ತಿರುವ ಪಲ್ಲಟಗಳು ಮತ್ತು ಸಂಗೋಪನೆಯಿಂದ ದ್ವಿಭಾಷಾ ಸನ್ನಿವೇಶಗಳಲ್ಲಿ ಯಾವ ಸನ್ನಿವೇಶವನ್ನು ಹೆಚ್ಚಿನ ಸಂದರ್ಭಗಳಲ್ಲಿ ಉಳಿಸಿಕೊಳ್ಳುತ್ತದೆ ಎಂಬುದನ್ನು ಹಾಗೂ ಇಂತಹ ಕುತೂಹಲ ಸಂಗತಿಗಳನ್ನು ಕುರಿತಂತೆ ತಿಳಿದುಕೊಳ್ಳುವ ಅವಶ್ಯವಿದೆ. ಆದ್ದರಿಂದ ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಗಳನ್ನು ಆಧಾರವಾಗಿಟ್ಟುಕೊಂಡು ಕೆಲವು ನಕ್ಷೆಗಳ ಮೂಲಕ ದ್ವಿಭಾಷಿಕರಲ್ಲಾಗುತ್ತಿರುವ ಪಲ್ಲಟಗಳನ್ನು ತೋರಿಸಲಾಗಿದೆ.

ಭಾಷಿಕರಲ್ಲಾಗಿರುವ ಭಾಷಾ ಪಲ್ಲಟವನ್ನು ಮತ್ತು ಭಾಷಾ ಸಂಗೋಪನೆಯನ್ನು ಕುರಿತಂತೆ ಮೌಖಿಕ ಮತ್ತು ಸಾಕ್ಷರತೆಯ ನೆಲೆಗಳಲ್ಲಿ, ಭಾಷಾ ಬಳಕೆಯ ಆವರಣಗಳಲ್ಲಿ, ಭಾಷಾ ಕೌಶಲಗಳ ನೆಲೆಯಲ್ಲಿ ಮತ್ತು ಭಾಷಾ ಬಳಕೆಯ ನೆಲೆಗಳಲ್ಲಿ ದ್ವಿಭಾಷಿಕರಲ್ಲಾಗುತ್ತಿರುವ ಭಾಷಾ ಪಲ್ಲಟ ಮತ್ತು ಭಾಷಾ ಸಂಗೋಪನೆಯ ನೆಲೆಗಳನ್ನು ಕುರಿತಂತೆ ಕೆಲವು ಅಂಶಗಳ ಆಧಾರದಿಂದ ನಕ್ಷೆಗಳಲ್ಲಿ ಕಾಣಬಹುದಾಗಿದೆ. ನಕ್ಷೆ-೧ರಲ್ಲಿ ಕಾಣುತ್ತಿರುವ ಕನ್ನಡಿಗರು ತೆಲುಗು ಭಾಷೆಯನ್ನು ಕಲಿತು ದ್ವಿಭಾಷಿಕರಾಗು ತ್ತಿರುವ ಪ್ರಮಾಣ ತಲೆಮಾರುಗಳಲ್ಲಿ ಕಡಿಮೆಯಾಗುತ್ತಿದೆ.


ನಕ್ಷೆ ೧

ಕನ್ನಡಿಗರು ದ್ವಿಭಾಷಿಕರಾಗುತ್ತಿರುವ ಪ್ರಮಾಣ ತಲೆಮಾರುಗಳಲ್ಲಿ ಇಳಿಮುಖವಾಗುತ್ತಿರುವುದು.




ನಕ್ಷೆ ೨

ತೆಲುಗು ಭಾಷಿಕರು ದ್ವಿಭಾಷಿಕರಾಗುತ್ತಿರುವ ಪ್ರಮಾಣ ತಲೆಮಾರುಗಳಲ್ಲಿ ಏರುತ್ತಿರುವುದು.




ನಕ್ಷೆ ೩

ತಲೆಮಾರುಗಳಲ್ಲಿ ಬದಲಾಗುತ್ತಿರುವ ತೆಲುಗು ಸಾಕ್ಷರತೆಯ ಕೌಶಲಗಳು



ನಕ್ಷೆ ೪

ತಲೆಮಾರುಗಳಲ್ಲಿ ಬದಲಾಗುತ್ತಿರುವ ಕನ್ನಡದ ಸಾಕ್ಷರತೆಯ ಕೌಶಲಗಳು



ಈ ನಕ್ಷೆಯಲ್ಲಿ ಲಿಂಗಾಧಾರಿತವಾಗಿ ನೋಡಿದಾಗಲೂ ಸಹ ಇಳಿಮುಖವಾಗುತ್ತಿದೆ. ತಲೆಮಾರಿನಿಂದ ತಲೆಮಾರಿಗೆ ಮೌಖಿಕ ಕೌಶಲಗಳು ಇಳಿಮುಖವಾಗುತ್ತಿವೆ. ಹೆಚ್ಚಾಗಿ ಗ್ರಹಿಕೆಯ ನೆಲೆಯಲ್ಲಿ ತೆಲುಗು ಭಾಷೆಯನ್ನು ಮತ್ತು ಉರ್ದು ಭಾಷೆಯ ನೆಲೆಯನ್ನು ಕನ್ನಡಿಗರು ಪಡೆದುಕೊಂಡಿದ್ದಾರೆ. ಆದರೆ ಮೌಖಿಕ ನೆಲೆಗಳಲ್ಲಿ ತೆಲುಗು ಭಾಷೆಯನ್ನು ಬಳಸುವ ಅವಶ್ಯಕತೆಗಳು ಕಡಿಮೆ ಆಗುತ್ತಿರುವುದು ಕಾಣುತ್ತದೆ. ಕನ್ನಡಿಗರಲ್ಲಿ ಪುರುಷರು ಹೊರ ಆವರಣಗಳಲ್ಲಿ ತೆಲುಗು ಭಾಷಿಕರ ಜೊತೆ ವ್ಯವಹರಿಸುವುದರಿಂದ ಮೌಖಿಕ ನೆಲೆಯಲ್ಲಿ ತೆಲಗನ್ನು ಬಳಸುವ ಅವಶ್ಯಕತೆ ಇದೆ. ಆದರೆ ಮಹಿಳೆಯರು ಬಹುಪಾಲು ಗ್ರಹಿಕೆಯ ನೆಲೆಯಲ್ಲಿ ಮಾತ್ರ ತೆಲುಗು ಭಾಷೆಯ ಕೌಶಲವನ್ನು ಪಡೆದಿದ್ದಾರೆ. ಇದಕ್ಕೆ ಮುಖ್ಯ ಕಾರಣವೆಂದರೆ, ತೆಲುಗು ಭಾಷೆಯ ಸಿನಿಮಾ, ಧಾರವಾಹಿಗಳು ಮುಂತಾದ ಕಾರ್ಯಕ್ರಮಗಳನ್ನು ನೋಡುವುದರಿಂದ ತೆಲುಗು ಭಾಷೆಯ ಗ್ರಹಿಕೆಯ ನೆಲೆಗಳು ಹೆಚ್ಚು ಇವೆ. ತೆಲುಗನ್ನು ಕಲಿತು ಬಳಸುವ ಅವಶ್ಯಕತೆ ಕನ್ನಡದ ಮಹಿಳೆಯರಿಗೆ ಇಲ್ಲ.

ನಕ್ಷೆ-೩ನ್ನು ನೋಡಿದರೆ ಮೊದಲಿನ ನಕ್ಷೆಗಿಂತ ವಿರುದ್ಧವಾಗಿದೆ. ತೆಲುಗು ಭಾಷಿಕರು ಕನ್ನಡವನ್ನು ಕಲಿತು ದ್ವಿಭಾಷಿಕರಾಗುತ್ತಿರುವ ಪ್ರಮಾಣ ತಲೆಮಾರುಗಳಲ್ಲಿ ಏರುತ್ತಿದೆ. ಲಿಂಗಾಧಾರಿತವಾಗಿ ನೋಡಿದಾಗಲೂ ಸಹ ಪುರುಷರಲ್ಲಿ ಮತ್ತು ಮಹಿಳೆಯರಲ್ಲಿ ದ್ವಿಭಾಷಿಕರಾಗುತ್ತಿರುವ ಪ್ರಮಾಣ ಮೊದಲ ತಲೆಮಾರುಗಳಿಗಿಂತಲೂ ಎರಡು ಮತ್ತು ಮೂರನೇ ತಲೆಮಾರುಗಳಲ್ಲಿ ಹೆಚ್ಚಾಗಿದೆ. ಪುರುಷರಿಗೆ ಹೋಲಿಸಿದರೆ ಮಹಿಳೆಯರು ಕನ್ನಡದಲ್ಲಿ ಗ್ರಹಿಕೆಯ ಕೌಶಲವನ್ನು ಹೆಚ್ಚಾಗಿ ಪಡೆದುಕೊಂಡಿದ್ದಾರೆ. ಪುರುಷರಲ್ಲಿ ಕನ್ನಡದ ಮೌಖಿಕ ಕೌಶಲಗಳೆರಡೂ ತೆಲಮಾರುಗಳಲ್ಲಿ ಹೆಚ್ಚಾಗಿದೆ. ಭಾರತ ದೇಶದಲ್ಲಿ ದ್ವಿಭಾಷಿಕತೆ ಮತ್ತು ಬಹುಭಾಷಿಕತೆಗಳು ಸಮುದಾಯಗಳ ನಿತ್ಯ ವ್ಯವಹಾರದ ಭಾಗವಾಗಿರುವುದರಿಂದ ಅನೇಕ ಭಾಷೆಗಳನ್ನು ಭಾಷಿಕರು ಗ್ರಹಿಕೆಯ ನೆಲೆಗಳಲ್ಲಿ ಪಡೆದಿರುತ್ತಾರೆ. ಆದರೆ ಭಾಷೆಗಳನ್ನು ಕುರಿತು ಬಳಸುವ ಅವಶ್ಯಕತೆಗಳು ಒದಗಿರದೇ ಇರಬಹುದು. ಜೊತೆಗೆ, ಸಿನಿಮಾ, ರೇಡಿಯೋ, ಟಿ.ವಿ., ಸಾಂಸ್ಕೃತಿಕ ಆಚರಣೆಗಳು ಇವೆಲ್ಲವೂ ಒಂದಿಲ್ಲೊಂದು ರೀತಿಯಲ್ಲಿ ಅನೇಕ ಭಾಷೆಗಳನ್ನು ಕಿವಿಯ ಮೇಲೆ ಹಾಕುತ್ತಿರುತ್ತವೆ. ಆದುದರಿಂದ ಭಾಷೆಗಳನ್ನು ಕೇಳಿಸಿಕೊಳ್ಳುವ ಸಂದರ್ಭಗಳಿರುವುದರಿಂದ ಅನೇಕ ಭಾಷೆಗಳನ್ನು ಗ್ರಹಿಸುತ್ತಲೇ ದ್ವಿಭಾಷಿಕರೂ, ಬಹುಭಾಷಿಕರೂ ಆಗುವ ನೆಲೆಗೆ ಭಾಷಿಕರು ತಲುಪುತ್ತಾರೆ.

ತೆಲುಗರು ಮೊದಲ ತಲೆಮಾರುಗಳಿಗಿಂತ ಹೆಚ್ಚಾಗಿ ಈಗಿನ ತಲೆಮಾರುಗಳಲ್ಲಿ ಕನ್ನಡವನ್ನು ಕಲಿತು ದ್ವಿಭಾಷಿಕರಾಗುತ್ತಿರುವುದು ಎದ್ದು ಕಾಣುತ್ತದೆ. ಏಕೆಂದರೆ ತೆಲುಗು ಭಾಷಿಕರಲ್ಲಿ ಹೆಚ್ಚಿನ ಭಾಷಿಕರು ವಲಸೆಯ ಕಾರಣದಿಂದ ಇಲ್ಲಿನ ಸಾಮಾಜಿಕ ಪರಿಸರದ ಭಾಷಷೆಯನ್ನು ಕಲಿತು ಬಳಸುವ ಅವಶ್ಯಕತೆಗಳು ಉಂಟಾಗಿವೆ. ಇದನ್ನು ಲಿಂಗಾಧಾರಿತವಾಗಿ ನೋಡಿದರೂ ಸಹ ದ್ವಿಭಾಷಿಕರಾಗುವ ಅವಶ್ಯಕತೆಗಳು ಮಹಿಳೆಯರಲ್ಲಿ ಪುರುಷರಲ್ಲಿ ಅಧಿಕವಾಗಿದೆ. ಕನ್ನಡದ ಸಾಮಾಜಿಕ ಸಂದರ್ಭಗಳಿಗೆ

ಒಳಗಾದ ಅವಿದ್ಯಾವಂತ ಮಹಿಳೆಯರಲ್ಲಿ ಕೆಲವು ವಿವಾಹಿತ ಮಹಿಳೆಯರು ಗ್ರಹಿಕೆಯ ನೆಲೆಯಲ್ಲಿ ಮಾತ್ರ ಕನ್ನಡವನ್ನು ಪಡೆದುಕೊಂಡಿದ್ದಾರೆ. ಇವರಿಗೆ ಮಾತಿನ ನೆಲೆಯಲ್ಲಿ ಕನ್ನಡವನ್ನು ಕಲಿತು ಬಳಸುವ ಅವಶ್ಯಕತೆಗಳು ಹೆಚ್ಚಿನ ಸಂದರ್ಭಗಳಲ್ಲಿ ಒದಗಿಬರದೇ ಇರುವುದರಿಂದ ಅರೆ ದ್ವಿಭಾಷಿಕರಾಗಿರುವ ಸನ್ನಿವೇಶಗಳು ಇವೆ. ತೆಲುಗರಲ್ಲಿ ಪುರುಷರು ಸಾಮಾಜಿಕ ವ್ಯವಹಾರಗಳಿಗೆ, ಉದ್ಯೋಗಕ್ಕಾಗಿ, ರಾಜಕೀಯ, ಆಡಳಿತಾತ್ಮಕ, ವ್ಯಾಪಾರ ವಾಣಿಜ್ಯಗಳ ಕಾರಣದಿಂದಾಗಿ ಕನ್ನಡವನ್ನು ಕಲಿತು ಬಳಸುವ ಅಗತ್ಯಗಳು ಹೆಚ್ಚಾಗಿ ಇವೆ.

ನಕ್ಷೆ - ೩ನ್ನು ಗಮನಿಸಿದಾಗ ಎರಡು ಭಾಷೆಯಲ್ಲಿನ ಸಾಕ್ಷರತೆಯಲ್ಲಿ ಉಂಟಾಗುತ್ತಿರುವ ಪಲ್ಲಟಗಳನ್ನು ನೋಡಿದಾಗ ವ್ಯತ್ಯಾಸಗಳಿರುವುದು ಕಾಣುತ್ತವೆ. ತಲೆಮಾರುಗಳಲ್ಲಿ ಸಾಕ್ಷರತೆಯ ಅಂತರವಿರುವುದು ಕಾಣುತ್ತಿದೆ. ಲಿಂಗಾಧಾರಿತವಾಗಿ ನೋಡಿದಾಗ ಮಹಿಳೆಯರಲ್ಲಿ ಮೊದಲ ತಲೆಮಾರುಗಳಲ್ಲಿ ಸಾಕ್ಷರತೆಯ ಪ್ರಮಾಣ ಕಡಿಮೆ ಇದ್ದು, ಎರಡನೇ ಮತ್ತು ಮೂರನೇ ತಲೆಮಾರಿಗೆ ಸ್ವಲ್ಪಮಟ್ಟಿಗೆ ಹೆಚ್ಚಾದಂತೆ ತೋರುತ್ತದೆ.

ನಕ್ಷೆ - ೪ರಲ್ಲಿ ಕನ್ನಡದ ಸಾಕ್ಷರತೆಯ ಕೌಶಲಗಳನ್ನು ನೋಡಿದಾಗ ಮೊದಲ ತಲೆಮಾರುಗಳಲ್ಲಿ ಓದು ಬರಹಗಳ ನಡುವಿದ್ದ ಸಾಕ್ಷರತೆಯ ಅಂತರ ಎರಡು ಮತ್ತು ಮೂರನೇ ತಲೆಮಾರುಗಳಲ್ಲಿ ಕಡಿಮೆಯಾಗುತ್ತಾ ಒಂದು ಕನ್ನಡದ ಸಾಕ್ಷರತೆಯನ್ನು ಪಡೆಯುವುದು ಹೆಚ್ಚಾಗಿ ಕಾಣುತ್ತಿದೆ. ಇದನ್ನು ಲಿಂಗಾಧಾರಿತವಾಗಿ ನೋಡಿದಾಗಲೂ ಮೊದಲ ತಲೆಮಾರಿನ ಮಹಿಳೆಯರಲ್ಲಿ ಸಾಕ್ಷರತೆಯ ಪ್ರಮಾಣ ಕಡಿಮೆ ಇದ್ದು, ಎರಡು ಮತ್ತು ಮೂರನೇ ತಲೆಮಾರುಗಳಲ್ಲಿ ಹೆಚ್ಚಾಗಿರುವುದು ಕಾಣುತ್ತದೆ. ಹಾಗೆಯೇ ಪುರುಷರಲ್ಲಿ ಸಹ ಮೊದಲ ತಲೆಮಾರುಗಳಿಗಿಂತ ಈಗಿನ ತಲೆಮಾರುಗಳಲ್ಲಿ ಸಾಕಷ್ಟು ಹೆಚ್ಚಾಗಿರುವುದು ಕಾಣುತ್ತಿದೆ.

ತೆಲುಗು ಭಾಷಿಕರು ತೆಲುಗಿನ ಸಾಕ್ಷರತೆಯ ಕೌಶಲಗಳನ್ನು ಪಡೆಯುವಲ್ಲಿ ತಲೆಮಾರು ಆಗುತ್ತಿರುವ ಬದಲವಣೆಗಳನ್ನು ಗಮನಿಸಿದಾಗ ಮೊದಲ ತಲೆಮಾರುಗಳಲ್ಲಿ ಸಾಕ್ಷರತೆಯನ್ನು ಪಡೆಯುವಲ್ಲಿ ಭಾಷಿಕರಲ್ಲಿದ್ದ ಅಂತರ ಎರಡು ಮತ್ತು ಮೂರನೆಯ ತಲೆಮಾರುಗಳಲ್ಲಿ ಕಡಿಮೆಯಾಗಿದೆ. ಮೊದಲ ತಲೆಮಾರುಗಳಲ್ಲಿ ಮಹಿಳೆಯರು ಅವಿದ್ಯಾವಂತರಾಗಿದ್ದು, ಸಾಕ್ಷರತೆಯ ಸಂದರ್ಭಗಳಿಗೆ ಒಳಗಾಗುವುದು ಬಹಳ ಕಡಿಮೆ ಸಂದರ್ಭಗಳಲ್ಲಿ ಇದ್ದು, ಇತ್ತೀಚೆಗೆ ಸಮಾಜದಲ್ಲಿನ ಹಲವು ಬದಲಾವಣೆಗಳ ಅರಿವಿನಿಂದಾಗಿ ಮಹಿಳೆಯರು ಸಾಕ್ಷರತೆಯನ್ನು ಪಡೆಯುತ್ತಿರುವುದು ಹೆಚ್ಚಾಗುತ್ತಿದೆ.

ಸಾಮಾಜಿಕ ಚಲನೆಯಲ್ಲಿ ಮೇಲ್ಮುಖವಾಗಿ ಚಲಿಸಲು ಕನ್ನಡ ಭಾಷೆಯ ಸಾಕ್ಷರತೆಯ ಕೌಶಲಗಳನ್ನು ಪಡೆಯುವಲ್ಲಿ ಭಾಷಾ ಪಲ್ಲಟಗಳಾಗುತ್ತಿವೆ. ತೆಲುಗಿನಲ್ಲಿ ಓದಿದರೆ ಅಥವಾ ಉರ್ದುವಿನಲ್ಲಿ ಓದಿದರೆ ಉಪಯೋಗವಿಲ್ಲ. ಕನ್ನಡದಲ್ಲಿ ಓದಿದರೆ ಹೆಚ್ಚು ಉಪಯೋಗ ಎಂಬ ತೆಲುಗು ಮತ್ತು ಉರ್ದು

ಭಾಷಿಕರ ಮನೋಭಾವದಿಂದ ಕನ್ನಡದ ಅದರಲ್ಲೂ ಶಿಕ್ಷಣದ ಸಂದರ್ಭಗಳಲ್ಲಿ ಸಾಕ್ಷರತೆಯ ಕಡೆಗೆ ಕೆಳವರ್ಗಮಧ್ಯಮವರ್ಗಗಳಲ್ಲಿ ಭಾಷಾ ಪಲ್ಲಟಗಳು ಆಗುತ್ತಿವೆ. ತೆಲುಗು ಮಾಧ್ಯಮಗಳಿಂದ ಕನ್ನಡ ಮಾಧ್ಯಮಗಳಿಗೆ ಭಾಷಾ ಪಲ್ಲಟವಾಗುತ್ತಿರುವುದು ಇತ್ತೀಚಿನ ದಿನಗಳಲ್ಲಿ ಅಧಿಕವಾಗಿದೆ.

೬.೧. ಭಾಷಾ ಮನೋಬಾವ

ಬೇರೆ ಬೇರೆ ಭಾಷಾ ಸನ್ನಿವೇಶಗಳಿಗೆ ಸೇರಿದ ವ್ಯಕ್ತಿಗಳೊಡನೆ ಸಂಪರ್ಕ ಏರ್ಪಟ್ಟಾಗ ಅಥವಾ ದ್ವಿಭಾಷಿಕ ಸಂದರ್ಭದಲ್ಲಿ ಸಮಾಜದೊಂದಿಗೆ ಸಂವಹನ ಏರ್ಪಟ್ಟಾಗ ಭಾಷಿಕರ ಮನೋಭಾವ ಬೇರೆ ಬೇರೆಯಾಗಿರುತ್ತವೆ. ಅನಿವಾರ್ಯ ಸಂದರ್ಭಗಳಲ್ಲಿ ಬೇರೆ ಭಾಷೆಯನ್ನು ಕಲಿಯುವಾಗ ತೊಂದರೆಗಳು ಅನುಭವಿಸಿದರೂ ಕೂಡಾ ಮಾತೃಭಾಷೆ ಹಾಗೂ ಇತರ ಭಾಷೆ(ಕಲಿಯುವ ಭಾಷೆ) ಬಗೆಗೆ ಅದರ ಮನೋಭಾವನೆ ಬೇರೆಯಾಗಿರುತ್ತದೆ. ಕನ್ನಡ ತೆಲುಗು ದ್ವಿಭಾಷಿಕ ಸಂದರ್ಭದಲ್ಲಿ ಇಂತಹ ಮನೋಭಾವನೆ ಉಂಟಾಗುವುದು ಸಹಜವಾಗಿದೆ. ತೆಲುಗು ಭಾಷಿಕರು ಕನ್ನಡವನ್ನು ಕಲಿಯಬೇಕಾದ ಅನಿವಾರ್ಯತೆ ಉಂಟಾಗುವುದು ರಾಜಕೀಯ, ಆಡಳಿತಾತ್ಮಕ ಕಾರಣಗಳಿಂದಾಗಿ ಭಾಷೆಯನ್ನು ಅನಿವಾರ್ಯತೆಯಿಂದ ಕಲಿಯುತ್ತಾರೋ? ಅಥವಾ ಅವರು ವಾಸ ಮಾಡುವ ಪರಿಸರಕ್ಕೆ ಹೊಂದಿಕೊಳ್ಳುವುದಕ್ಕೆ ಭಾಷೆ ಕಲಿಯುತ್ತಾರೋ? ಎಂದು ಯೋಚಿಸಿದಾಗ ಭಾಷಾ ಸನ್ನಿವೇಶಗಳಲ್ಲಿ ಪ್ರತಿಯೊಂದು ಹಂತದಲ್ಲಿ ಆಯಾ ಭಾಷಿಕ ಪ್ರದೇಶದಲ್ಲಿ ವ್ಯವಹಾರಕ್ಕಾಗಿ ಕೆಲವೊಂದು ಸಲ ಭಾಷಾ ಕಲಿಕೆ ಉಂಟಾಗುತ್ತದೆ. ವಿವಾಹದಂತಹ ಸಂದರ್ಭದಲ್ಲಿ ಭಾಷೆಯನ್ನು ಅವರ ಮನೋಭಾವಕ್ಕೆ ತಕ್ಕಂತೆ ಕಲಿಯುತ್ತಾರೆ. ಇಲ್ಲಿ ಯಾವುದೇ ಭಾಷೆಯ ಬಗೆಗೆ ಸಂಕೋಚವಿರುವುದಿಲ್ಲ. ಇಲ್ಲಿ ಭಾಷಿಕ ಸ್ವಾಭಿಮಾನ ಅಭಿಮಾನದ ಪ್ರಶ್ನೆಯೇ ಬರುವುದಿಲ್ಲ.

ಭಾಷಾ ಮನೋಭಾವವು ಇದು ಜಾತಿ, ಲಿಂಗ, ವಯಸ್ಸುಗಳಿಗೆ ಅನುಗುಣವಾಗಿ ಅದು ಬದಲಾಗುತ್ತಾ ಹೋಗುತ್ತದೆ. ಆರ್ಥಿಕ, ರಾಜಕೀಯ, ಧಾರ್ಮಿಕ, ಶೈಕ್ಷಣಿಕ ಸನ್ನಿವೇಶಗಳು ಭಾಷಿಕರ ಮನೋಭಾವನೆಯನ್ನು ಬದಲಿಸುತ್ತದೆ. ಉದಾ : ತೆಲುಗು ಭಾಷಿಕರು ಕರ್ನಾಟಕದಲ್ಲಿ ವಾಸಿಸಿದ್ದಾರೆ ಎಂದರೆ ಅವರು ಆಡಳಿತಾತ್ಮಕವಾಗಿಯೋ ಅಥವಾ ಉದ್ಯೋಗ ದೃಷ್ಟಿಯಿಂದಲೋ ಸ್ವ ಇಚ್ಛೆಯಿಂದ ಕನ್ನಡವನ್ನು ಕಲಿಯುವ ಮನೋಭಾವ ಅವರಲ್ಲಿ ತನ್ನಿಂದ ತಾನೇ ಹುಟ್ಟಿಕೊಳ್ಳುತ್ತದೆ. ದ್ವಿಭಾಷಿಕರು ಇರುವಂತ ಪ್ರದೇಶದಲ್ಲಿ ಎರಡು ಭಾಷೆಗಳ ಬಗೆಗೆ ಎರಡು ಭಾಷೆಗಳನ್ನು ಆತ್ಮೀಯತೆಯನ್ನೊಳಗೊಂಡಂತೆ ಇವರ ಭಾಷಿಕ ಮನೋಭಾವವು ಕಾಳಜಿ ಪೂರಕವಾಗಿರುತ್ತದೆ. ಇಂತಹ ಸನ್ನಿವೇಶಗಳಲ್ಲಿ ಭಾಷೆಗಳ ಬಗ್ಗೆ ತಾರತಮ್ಯದ ಪ್ರಶ್ನೆ ಬರುವುದಿಲ್ಲ. ಕೆಲವೊಂದು ಸಲ ಭಾಷೆಯ ಬಗೆಗೆ ಇರುವ ಮನೋಭಾವ ಅನೇಕ ಭಾಷಾ ವ್ಯತ್ಯಾಸಗಳನ್ನು ಹಾಗೂ ಪಲ್ಲಟಗಳನ್ನು ಹೊಂದಿ ಭಾಷೆಯ ಬಗೆಗೆ ದುರಾಭಿಮಾನವು ಉಂಟಾಗಬಹುದು. ಇಂತಹ ಸನ್ನಿವೇಶಗಳು ಬಂದಾಗ ಭಾಷಿಕ ಅಭಿಮಾನವು ಬಹಳ ಮುಖ್ಯವಾಗುತ್ತದೆ. ಅದಕ್ಕಾಗಿ, ಭಾಷಿಕ ಮನೋಭಾವವು ಒಂದು ಭಾಷೆಯ ಅಸ್ತಿತ್ವದ ಅಥವಾ ಅಳಿವು ಉಳಿವಿನ

ಸನ್ನಿವೇಶಗಳನ್ನು ತಂದೊಡ್ಡುತ್ತದೆ. ಸಾಮಾಜಿಕವಾಗಿ ವಿವಿಧ ಸ್ತರಗಳಲ್ಲಿ ಭಾಷೆಯ ಮನೋಭಾವವು ಬದಲಾಗುತ್ತಿರುತ್ತದೆ. ಅಂತಸ್ತು, ಅಧಿಕಾರ, ವೈಯಕ್ತಿಕ ಪ್ರತಿಷ್ಠೆ ಇವು ಭಾಷಿಕ ಸ್ಥಾನಮಾನವನ್ನು ನಿರ್ಧರಿಸುತ್ತವೆ. ದ್ವಿಭಾಷಾ ಪರಿಸರದಲ್ಲಿ ಆಯಾ ಭಾಷಿಕರ ಆಚಾರ, ವಿಚಾರ, ಸಂಪ್ರದಾಯ, ನಂಬಿಕೆ, ಆಚರಣೆಗಳು ಭಿನ್ನ ನೆಲೆಯಲ್ಲಿರುವುದರಿಂದ ಭಾಷಿಕ ಮನೋಭಾವವು ವ್ಯತ್ಯಾಸವಾಗಬಹುದು. ಇಂತಹ ವಿಚಾರಗಳನ್ನು ಸಾಮಾಜಿಕ ಮನಶಾಸ್ತ್ರಜ್ಞರು ಭಾಷೆಯ ಮೇಲೆ ಅವರ ಮನೋಭಾವನೆಯನ್ನು ಅಧ್ಯಯನ ಮಾಡಿದ್ದಾರೆ. ಅನೇಕರು ರಾಜಕೀಯ ಸ್ಥಾನಮಾನವನ್ನು ಪಡೆದುಕೊಳ್ಳುವುದಕ್ಕಾಗಿ ಬಹುಸಂಖ್ಯಾತರು ಭಾಷೆಯನ್ನು ಬಳಸುತ್ತಿರುವುದು ನೋಡುತ್ತೇವೆ. ಅಲ್ಪಸಂಖ್ಯಾತರ ಭಾಷೆಗಳು ಇಂತಹ ಸಂದರ್ಭದಲ್ಲಿ ಅಸ್ತಿತ್ವವನ್ನು ಕಳೆದುಕೊಳ್ಳುವ ಭೀತಿ ಎದುರಿಸುತ್ತವೆ.

ಜಾಗತೀಕರಣ, ಉದಾರೀಕರಣ, ನಗರೀಕರಣ, ಕೈಗಾರೀಕರಣದಿಂದಾಗಿ ಉದ್ಯೋಗದ ಅವಕಾಶಗಳು ಹೆಚ್ಚುತ್ತಿರುವುದರಿಂದ ಇಲ್ಲಿ ಅಧಿಕಾರಶಾಹಿ ಭಾಷೆಯನ್ನು ಅನಿವಾರ್ಯವಾಗಿ ಸ್ವೀಕರಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ದ್ವಿಭಾಷಿಕತೆ ಬಹುಭಾಷಿಕತೆಯು ಉಂಟಾಗುತ್ತದೆ. ಆದ್ದರಿಂದ ದ್ವಿಭಾಷಿಕತೆ ಇರುವ ಕಡೆ ಸಾಮಾಜಿಕ ನಡುವಳಿಕೆಗಳು ಬದಲಾಗುತ್ತಿರುತ್ತವೆ. ಕನ್ನಡ-ತೆಲುಗು ದ್ವಿಭಾಷಿಕ ಸನ್ನಿವೇಶಗಳಲ್ಲಿ ಭಾಷೆ ಮನೋಭಾವವು ಹೆಚ್ಚಿನ ಸಂದರ್ಭಗಳಲ್ಲಿ ಆರೋಗ್ಯಪೂರ್ಣವಾಗಿದೆ ಹಾಗೂ ಭಾಷೆಯ ಬಗೆಗೆ ದುರಭಿಮಾನ ಇರುವ ಅಂಶಗಳು ಹೆಚ್ಚು ವ್ಯಕ್ತವಾಗಿಲ್ಲ. ತೆಲುಗು ಭಾಷಿಕರು ಕನ್ನಡವನ್ನು ಕಲಿಸಿರುವುದು ಕೆಲಸ ಮಾಡುವ ಕಡೆ, ಸ್ನೇಹಿತರ ಬಳಿ ಅಕ್ಕಪಕ್ಕದ ಮನೆಯಲ್ಲಿ ಹಾಗಾಗಿ ಹೆಚ್ಚು ಕಷ್ಟವಾಗಿಲ್ಲ.

ಭಾಷಾ ಮನೋಭಾವವನ್ನು ಕುರಿತು (ಡಾ.ಎಂ.ಭಾಗ್ಯಲಕ್ಷ್ಮಿ, ೧೯೬) "ಕರ್ನಾಟಕದಲ್ಲಿ ಕನ್ನಡಕ್ಕೆ ಬೆಲೆ ಹೆಚ್ಚು. ಇದರಿಂದ ಲಾಭವಿದೆ. ತೆಲುಗು ಮಾಧ್ಯಮದಲ್ಲಿ ಓದಿದರೆ ಉಪಯೋಗವಿಲ್ಲ ಎಂಬ ಮನೋಭಾವನೆಗಳಿಂದಾಗಿ ಭಾಷಿಕರಲ್ಲಿ ಕನ್ನಡ ಭಾಷೆಯ ಸಾಕ್ಷರತೆಯ ಕಡೆಗೆ ಪಲ್ಲಟಗಳು ಉಂಟಾಗಿವೆ. ಔಪಚಾರಿಕ ಆವರಣಗಳಲ್ಲಿ ತೆಲುಗು ಭಾಷೆಯನ್ನು ಬಳಸುವ ಹಿಂಜರಿಕೆಯಿರುವುದರಿಂದ ತಮ್ಮ ಜ್ಞಾನಮಾನಗಳನ್ನು ಭಾಷೆಯ ಮೂಲಕ ತೋರಿಸಲು ಕನ್ನಡವನ್ನು ಕಲಿತು ಬಳಸುತ್ತಾರೆ. ಕನ್ನಡದ ಭಾಷಿಕ ಸಂದರ್ಭಗಳಿಗೆ ಒಳಗಾಗುವಾಗ ಹೆಚ್ಚು ಪ್ರಜ್ಞಾಪೂರ್ವಕವಾಗಿರುತ್ತಾರೆ. ತೆಲುಗು ಭಾಷಿಕರಲ್ಲೆ ಉನ್ನತ ವರ್ಗದಲ್ಲಿರುವವರಿಗೆ ತೆಲುಗು ಪ್ರತಿಷ್ಠಿತ ಭಾಷೆಯಾಗಿರುವಂತೆ, ಕನ್ನಡ ಭಾಷೆ ಪ್ರತಿಷ್ಠೆ ಎಂದು ಕಾಣುವುದಿಲ್ಲ. ರಾಜಕೀಯ ಸ್ಥಾನಮಾನಗಳಿಗಾಗಿ, ಆತ್ಮೀಯ ಸ್ನೇಹಕ್ಕಾಗಿ ಮಾತ್ರ ಅವರ ಭಾಷೆಯನ್ನು ಹೆಚ್ಚಿನ ಸಂದರ್ಭದಲ್ಲಿ ಬಳಸಬಹುದಾಗಿದೆ. ಅದೇ ಒಬ್ಬ ಕೆಲಸಗಾರನ ಬಳಿ ಕೆಲಸವನ್ನು ಮಾಡಿಸುವಂತಹ ಸನ್ನಿವೇಶಗಳಲ್ಲಿ ಯಜಮಾನನೇ ಕೆಲಸಗಾರನ ಭಾಷೆಗೆ ಪಲ್ಲಟವನ್ನು ಮಾಡಿಕೊಳ್ಳುತ್ತಾನೆ. ಆಗ ಭಾಷೆಗೆ ಅಧಿಕಾರದ ಸ್ಥಾನಮಾಗಳು ಇರುವುದಿಲ್ಲ. ಇಂತಹ ಸನ್ನಿವೇಶಗಳಲ್ಲಿ ಆರ್ಥಿಕ ಸ್ಥಾನಮಾನಗಳನ್ನು ಮೀರಿ ಭಾಷೆಯ ಸ್ಥಾನ ಮೇಲೇರುತ್ತದೆ. ಅದೇ ಭಾಷೆಯ ಬಗೆಗೆ ಎಷ್ಟೇ ಭಾವನಾತ್ಮಕವಾಗಿ ಮಾತನಾಡಿದರೂ

ವೈವಾಹಿಕ ಸಂಬಂಧಗಳ ವಿಷಯಕ್ಕೆ ಬಂದಾಗ ಅಧಿಕಾರ ಅಂತಸ್ತುಗಳೇ ಮುಖ್ಯವಾಗಿ ಭಾಷೆಯ ಸ್ಥಾನಮಾನ ಕೆಳಮಟ್ಟಕ್ಕೆ ಹೋಗಬಹುದು. ಇಂತಹ ಸಂದರ್ಭಗಳಲ್ಲಿ ಅಂತಸ್ತು, ಅಧಿಕಾರ ಮುಖ್ಯವಾಗಿ ಭಾಷೆಯ ಸ್ಥಾನ ಕೆಳಮಟ್ಟಕ್ಕೆ ಹೋಗುತ್ತದೆ. ಇವೆಲ್ಲ ಅಭಿಪ್ರಾಯಗಳು ತೆಲುಗರಿಗೆ ಕನ್ನಡ ಭಾಷೆಯ ಬಗೆಗಿನ ಮನೋಭಾವವನ್ನು ತೋರಿಸುತ್ತದೆ."

೬.೨. ಭಾಷಾ ಸಂಗೋಪನೆ

ಭಾಷಾ ಸಂಗೋಪನೆ ಎಂದರೆ, ಹೆಸರೇ ಸೂಚಿಸುವಂತೆ ಭಷೆಯನ್ನು ಕಾಪಾಡುವುದು ಅಥವಾ ರಕ್ಷಿಸುವುದು ಅಥವಾ ಉಳಿಸಿಕೊಳ್ಳುವುದು ಮತ್ತು ಉಳಿಸಿ ಬೆಳೆಸುವುದು ಎಂಬ ಮುಂತಾದ ಅರ್ಥಗಳನ್ನು ಅದು ಕೊಡುತ್ತದೆ. ದ್ವಿಭಾಷಿಕ ಬಹುಭಾಷಿಕ ಪ್ರಕ್ರಿಯೆಗಳು ನಡೆಯುವ ಸಂದರ್ಭದಲ್ಲಿ ಈ ಭಾಷಾ ಸಂಗೋಪನೆಯು ಅತ್ಯಂತ ಪ್ರಮುಖವಾಗಿ ಬೇಕಾಗುತ್ತದೆ. ಇದು ಇಂಗ್ಲೀಶ್‌ನ "Language Maintenanc" ಎನ್ನುವುದರ ಸಂವಾದಿ ಪದವಾಗಿ 'ಭಾಷಾ ಸಂಗೋಪನೆ' ಬಳಕೆಯಾಗುತ್ತದೆ.

೧೯೬೦ರ ದಶಕದಿಂದೀಚೆಗೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಈ ಕುರಿತು ಅಧ್ಯಯನಗಳು ಆಗುತ್ತಿವೆ. ಭಾಷಾ ಸಂಗೋಪನೆಯು ವಿವಿಧ ಜೀವನದಲ್ಲಿ ದಿನ ನಿತ್ಯ ನಡೆಯುವ ಇಂದಿನ ಆಧುನಿಕತೆ ಪರಿಣಾಮವಾಗಿ ಅವನ ಶೈಲಿಯ ಹಾಗೂ ಆಚಾರ, ವಿಚಾರ, ನಡೆ, ನುಡಿ, ಸಂಸ್ಕೃತಿ, ಆಧುನಿಕ ಯುಗಕ್ಕೆ ತಕ್ಕಂತಹ ಜೀವನ ವಿಧಾನಗಳು ಕೂಡಾ ಬದಲಾವಣೆಯಾಗಿ ಅನೇಕ ಸಂದರ್ಭದಲ್ಲಿ ಭಾಷಾ ಪಲ್ಲಟವು ಉಂಟಾಗುತ್ತದೆ. ಈ ಭಾಷಾ ಪಲ್ಲಟವಾಗುವ ಸಂದರ್ಭದಲ್ಲಿ ಭಾಷಾ ಸಂಗೋಪನೆಯನ್ನು ಮಾಡಿಕೊಳ್ಳುವ ಉಪಾಯಗಳೇನಾದರೂ ನಡೆದಿದೆಯಾ ಎಂದು ನಾವು ರೂಪಿಸಿಕೊಂಡಿದ್ದೇವಾ? ಎಂದು ಪ್ರಶ್ನಿಸಿಕೊಂಡಾಗ, ಭಾಷಾ ಸಂಗೋಪನೆಯ ಕಾರ್ಯ ಭಾಷಿಕರು ಹೆಚ್ಚು ಜವಾಬ್ದಾರಿಯುತವಾಗಿ ರಕ್ಷಿಸಿಕೊಳ್ಳಬೇಕಾಗುತ್ತದೆ. ಭಾಷಾ ಪಲ್ಲಟ ಹಾಗೂ ಭಾಷಾ ಸಂಗೋಪನೆಯನ್ನು ರೂಪಿಸಿಕೊಳ್ಳಲು ಅನೇಕ ಅಧ್ಯಯನಗಳು ಅವಶ್ಯಕವೆನಿಸುತ್ತವೆ. ಈ ಸಂಗೋಪನ ಕಾರ್ಯವು ಹಲವು ಯೋಜನೆಗಳ ಮೂಲಕ ಕಾಯ್ದುಕೊಂಡು ಹೋಗುವುದು ಪ್ರಮುಖವೆನಿಸುತ್ತದೆ. ಜನರು ತಮ್ಮ ಸಾಮಾಜಿಕ ಚಹರೆಯನ್ನು ತಮಗೆ ಕಾಲಾಂತರದಿಂದ ಬಂದ ಸಂಸ್ಕೃತಿಯನ್ನು ಹಾಗೂ ಅವರು ತಮ್ಮ ರಾಷ್ಟ್ರ, ಜನಾಂಗಗಳಿಗೆ ಸಂಬಂಧಿಸಿದಂತೆ ತಮ್ಮ ಸಾಮಾಜಿಕ ಕುರುಹುಗಳನ್ನು ಉಳಿಸಿಕೊಳ್ಳಲು ತಮ್ಮ ಸ್ವಂತ ಭಾಷೆಯನ್ನು ಬಳಸಿಕೊಂಡು ಉಳಿಸಿಕೊಳ್ಳುತ್ತಾರೆ. ಹಾಗೂ ಮಾನವರು ಸಮರ್ಥವಾಗಿ ಕಲಿತ ಭಾಷೆ ಅಥವಾ ಮಾತೃಭಾಷೆ ತಮ್ಮ ಸ್ವಭಾಷೆಯಲ್ಲೆ ಹೆಚ್ಚು ಸಮರ್ಥವಾಗಿ ಪ್ರಸ್ತುತಪಡಿಸುವ ಶಕ್ತಿ ಸ್ವಭಾಷೆಗೆ ಇದೆ ಎನ್ನುವ ನಂಬಿಕೆಯಿಂದಲೂ ಸಹ ಭಾಷಾ ಸಂಗೋಪನೆ ನಡೆಯುತ್ತಿರುತ್ತದೆ.

ಒಂದೇ ಬಾಷಾ ಕುಟುಂಬಗಳು ಒಂದೆಡೆ ವಾಸಿಸುವುದರಿಂದ ಭಾಷಾ ಸಂಗೋಪನೆ ಹೆಚ್ಚು ಹೆಚ್ಚಾಗಿ ನಡೆಯುತ್ತದೆ. ಭಾಷೆಯ ಸತತ ಬಳಸಿಕೊಳ್ಳುವುದು ಮತ್ತು ಕಡ್ಡಾವೆನಿಸಿದ ಕ್ಷೇತ್ರಗಳಲ್ಲಿ ಕೂಡ ಅದನ್ನು

ಉಪಯೋಗಿಸಿಕೊಳ್ಳುವುದು ನಡೆಯುತ್ತಿರುತ್ತದೆ. ಉದಾ : ರಾಯಚೂರಿನಲ್ಲಿ ಸಿಳ್ಳ್ಯಾಕ್ಯಾತರು ಎಂದು ಕರೆಸಿಕೊಳ್ಳುವ ಒಂದು ಸಮುದಾಯ ಇವರ ವೃತ್ತಿ ಪಕ್ಷಿ ಬೇಟೆಯಾಡುವುದು/ಕೌದಿ ತಯಾರಿಸಿ ಮಾರಾಟ ಮಾಡಿ ಜೀವನ ಸಾಗಿಸುವುದು ಇವರ ಭಾಷೆ 'ಮರಾಠಿ' ಕನಿಷ್ಠ ೫೦ ಕುಟುಂಬಗಳು ಒಂದೆಡೆ ಬಹುದಿನಗಳಿಂದ ನೆಲೆಸಿವೆ ಹೊರಗಡೆ, ವ್ಯವಹಾರದ ಸಂದರ್ಭಗಳಲ್ಲಿ, ಸಾರ್ವಜನಿಕರೊಂದಿಗೆ ಸಂಭಾಷಿಸುವಾಗ ಕನ್ನಡವನ್ನು ಬಳಸಿದರೆ ತಮ್ಮ ಕುಟುಂಬದಲ್ಲಿ ಕಡ್ಡಾಯವಾಗಿ ಮರಾಠಿಯನ್ನೇ ಬಳಸುತ್ತಾರೆ ಎಂಥಹ ಸಂದರ್ಭ ಬಂದರೂ ಅಪ್ಪಿತಪ್ಪಿ ಬೇರೆ ಭಾಷೆಗಳನ್ನು ಅವರು ಬಳಸುವುದಿಲ್ಲ. ಅವರಿಗೆ ಕನ್ನಡದ ಜೊತೆಗೆ ತೆಲುಗು ಕೂಡಾ ಬಲ್ಲವರಾಗಿದ್ದರೂ ತಮ್ಮ ಸಮೂಹದೊಂದಿಗೆ ಪ್ರಯಾಣ ಮಾಡಿದರೆ ಅಥವಾ ತಮ್ಮ ಸಂಬಂಧಿಕರು ಜಿಲ್ಲೆಯಾದ್ಯಂತ ಅಲ್ಲಲ್ಲಿ ಇದ್ದರು ಅವರೊಡನೆ ಕನ್ನಡವನ್ನು ಮಾತಾಡುವುದಿಲ್ಲ 'ಮರಾಠಿ'ಯೊಂದಿಗೆ ಅವರೊಡನೆ ಸಂವಾದಿಸುತ್ತಾರೆ. ಹೀಗೆ ತಮ್ಮೆಲ್ಲ ಆಪ್ತರೊಡನೆ ಮರಾಠಿಯನ್ನೆ ಕಡ್ಡಾಯವಾಗಿ ಬಳಸುತ್ತಾರೆ. ಈ ರೀತಿ ಕೆಲವೊಂದು ಸಂದರ್ಭದಲ್ಲಿ ವ್ಯಕ್ತಿ ಭಾಷೆಗೆ ಯಾವುದೇ ಸಂದರ್ಭದಲ್ಲಿ ಧಕ್ಕೆ ಬರಬಹುದು. ಆದರೆ ಸಮೂದಾಯದ ಭಾಷೆ ಎಂದೂ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವುದಿಲ್ಲ.

೬.೩. ನುಡಿಬೆರಕೆ ಮತ್ತು ನುಡಿಜಗಿತ

ದ್ವಿಭಾಷಿಕ ಪರಿಸರದಲ್ಲಿ ಭಾಷಿಕ ಕೂಡುಕೊಳ್ಳುವಿಕೆ ನಡೆಯುವ ಸಂದರ್ಭದಲ್ಲಿ ಹಾಗೂ ವ್ಯವಹಾರಿಕ ಸನ್ನಿವೇಶಗಳಲ್ಲಿ ಬಹುಮುಖ್ಯವಾಗಿ ನುಡಿಬೆರಕೆ ಮತ್ತು ನುಡಿ ಜಿಗಿತಗಳು ಉಂಟಾಗುವುದು ಸಹಜವಾಗಿದೆ. ನುಡಿ ಜಿಗಿತ ಮತ್ತು ನುಡಿ ಬೆರಕೆಗಳು ಇಂದು ಸಹಜವಾಗಿದೆ. ನುಡಿ ಜಿಗಿತ ಮತ್ತು ನುಡಿ ಬೆರಕೆಗಳು ಇಂದು ಭಾಷಿಕ ಪ್ರಕ್ರಿಯೆಗಳಾಗಿ ಬಳಕೆಯಾಗುತ್ತಿವೆ. ಇಂಗ್ಲೀಶ್ ನ 'Code Swithing'ಗೆ ಸಂವಾದಿಯಾಗಿ ನುಡಿ ಜಿಗಿತ ಅಥವಾ ನುಡಿಪಲ್ಲಟ ಎಂಬ ಪದಗಳನ್ನು ಬಳಸಲಾಗುತ್ತಿದೆ. ಅದೇ ರೀತಿ Code mixingಗೆ ಸಂವಾದಿಯಾಗಿ ನುಡಿ ಬೆರಕೆ, ಭಾಷಾ ಮಿಶ್ರಣ ನುಡಿ ಮಿಶ್ರಣ ಎಂಬ ಪದ ಬಳಕೆಯಲ್ಲಿದೆ.

"ಒಂದು ಭಾಷೆಯ ವಾಕ್ಯವನ್ನು ಆಡುವಾಗ/ಬರೆಯುವಾಗ ಇನ್ನೊಂದು ಭಾಷೆಯ ಭಾಷಾಂಶಗಳನ್ನು ಬೆರಸುವುದು ನುಡಿಬೆರಕೆ ಇಡೀ ವಾಕ್ಯದ ಹಿಂದಿನ ನಿಯಮ ಒಂದು ಭಾಷೆಯದ್ದಾಗಿದ್ದು, ವಾಕ್ಯಾಂಶಗಳು ಮಾತ್ರ ಕೆಲವು ಇನ್ನೊಂದು ಭಾಷೆಯಿಂದ ಬಂದು ಸೇರುತ್ತವೆ. ನುಡಿ ಜಿಗಿತದಲ್ಲಿ ಒಂದು ವಾಕ್ಯವನ್ನು ಒಂದು ಭಾಷೆಯ ನಿಯಮನುಸಾರ ರಚಿಸಿ, ಮುಗಿಸಿ ಆನಂತರ ಹೊಸ ವಾಕ್ಯವನ್ನು ಇಡೀಯಾಗಿ ಇನ್ನೊಂದು ಭಾಷೆಯಲ್ಲಿ ರಚಿಸಿ ಬಳಸಲಾಗುತ್ತದೆ. ವಾಕ್ಯದ ಆಚೆಗಿನ ಹಂತದಲ್ಲಿ ಈ ಬೆರಕೆ ನಡೆಯುತ್ತದೆ. ದ್ವಿಭಾಷಿಕರಲ್ಲಿ ನಡೆಯುವ ನುಡಿಬೆರಕೆಯ ಪ್ರಮಾಣ, ಉದ್ದೇಶಗಳು ಭಿನ್ನವಾಗಿರುತ್ತವೆ.

ನುಡಿ ಜಿಗಿತ ಮಾತ್ರ ಬಹುಮಟ್ಟಿಗೆ ದ್ವಿಭಾಷಿಕರಲ್ಲೇ ನಡೆಯುವಂತಹದ್ದು, ನುಡಿ ಬೆರಕೆ ದ್ವಿಭಾಷಿಕರಲ್ಲೆ ನಡೆಯುತ್ತದೆ ಎನ್ನುವಂತಿಲ್ಲ. ಎಷ್ಟೋ ವೇಳೆ ದ್ವಿಭಾಷಿಕ ಸನ್ನಿವೇಶಗಳಲ್ಲಿ ನಡೆಯುವ ಭಾಷಾಂಶಗಳನ್ನು ತಮ್ಮ ಭಾಷಿಕ ಸಂಕಥನಗಳಲ್ಲಿ ಸೇರಿಸಿಕೊಳ್ಳುತ್ತಾರೆ.''(ಕೆ.ವಿ.ನಾರಾಯಣ ೧೯೮೮:೧೯) ಒಂದು ಭಾಷೆ ಇಲ್ಲವೆ ಒಂದಕ್ಕಿಂತ ಹೆಚ್ಚು ಭಾಷೆಗಳಲ್ಲಿ ಒಂದರ ಘಟಕಗಳನ್ನು ಇನ್ನೊಂದಕ್ಕೆ ರವಾನಿಸುತ್ತಾ ಮತ್ತೊಂದು ನಿಯಂತ್ರಿತ ಅಥವಾ ಅಷ್ಟೇನೂ ನಿಯಂತ್ರಿತವಲ್ಲದ ಹೊಸ ಭಾಷಿಕ ಪ್ರಕ್ರಿಯೆಯನ್ನು ರೂಪಿಸುವುದು ಭಾಷಾ ಮಿಶ್ರಣ'ವೆಂದು ಕಾಛ್ರು(೧೯೭೪) ಅವರು ಅಭಿಪ್ರಾಯಪಡುತ್ತಾರೆ. ಈ ನುಡಿ ಮಿಶ್ರಣ ಅಥವಾ ಭಾಷಾ ಮಿಶ್ರಣವು ರೂಪುಗೊಳ್ಳುವುದು ತೀರಾ ಹಿಂದಿನಿಂದಲೂ ಬಂದಿರುವುದು ಗಮನಿಸಬೇಕು. ಭಾಷಾ ವಿಜ್ಞಾನಿಗಳು ಸಾಮಾಜಿಕ ಭಾಷಾ ಶಾಸ್ತ್ರಜ್ಞರು ಇಂದಿನ ಹೊಸ ಶಿಸ್ತು ಆಗಿ ಅಧ್ಯಯನ ಮಾಡುತ್ತಿದ್ದಾರೆ.

ನುಡಿಬೆರಕೆ ಮತ್ತು ನುಡಿ ಮಿಶ್ರಣ ಏಕೆ ನಡೆಯುತ್ತದೆ? ಈ ಪ್ರಕ್ರಿಯೆ ನಡೆಯಲು ಉದ್ದೇಶವೇನು? ನುಡಿ ಮಿಶ್ರಣ ಅಥವಾ ಬೆರಕೆ ಇಲ್ಲದಿದ್ದರೆ ಬಳಕೆಯಲ್ಲಿ ಭಾಷಿಕ ವ್ಯತ್ಯಾಸಗಳಾಗುತ್ತವೆಯೇ? ಎಂದು ಯೋಚಿಸಿದಾಗ ಈ ಸಂದರ್ಭದಲ್ಲಿ ಭಾಷೆಯ ಆಯ್ಕೆ ಪ್ರಮುಖವಾಗುತ್ತದೆ. ದ್ವಿಭಾಷಾ ಸನ್ನಿವೇಶಗಳನ್ನು ಉಂಟುಮಾಡುವ ಈ ಭಾಷಾ ಪ್ರಕ್ರಿಯೇ ಹಿಂದೆ ಭಾಷಾ ಆಯ್ಕೆಯು ಪ್ರಧಾನವಾದದ್ದು. ಯಾವ ಸಂದರ್ಭದಲ್ಲಿ ಹೇಗೆ ಎಷ್ಟು ಭಾಷೆಯನ್ನು ಬಳಸಬೇಕೆಂಬುದನ್ನು ಹಾಗೂ ಭಾಷೆಯ ಸ್ಥಾನವನ್ನು ಗುರುತಿಸಬಹುದು. ಒಬ್ಬ ಭಾಷಿಕ ವ್ಯಕ್ತಿಯು ಭಾಷೆಯನ್ನು ತನಗೆ ತಕ್ಕಂತೆ ಸಮಾಜಕ್ಕೆ ಬೇಕಾಗಿರುವಂತ ಭಾಷೆಯನ್ನು ಆಯ್ಕೆ ಮಾಡಿಕೊಳ್ಳುವಾಗ ಭಾಷೆಯು ಆಯಾ ಪಾತ್ರಕ್ಕೆ ತಕ್ಕಂತೆ ಅಣಿಗೊಳ್ಳುತ್ತದೆ. "ಕನ್ನಡ ತೆಲುಗು ದ್ವಿಭಾಷಿಕರಲ್ಲಿ ಯಾವ ಯಾವ ಸಂದರ್ಭಗಳಲ್ಲಿ ಯಾವ ಭಾಷೆಯನ್ನು ಬಳಸಬೇಕೆಂಬುದರ ಬಗೆಗೆ ಬಹುಮಟ್ಟಿಗೆ ಖಚಿತತೆ ಇರುವಂತೆ ಕಾಣುತ್ತದೆ. ಈ ದ್ವಿಭಾಷಿಕರ ಭಾಷೆಯ ಆಯ್ಕೆಯನ್ನು ಇಲ್ಲಿ ಸಾಕ್ಷಿಯಾಗಿ ಹೇಳಬಹುದು. ಭಾಷೆಯ ಆಯ್ಕೆಯು ವಿವಿಧ ಸಾಮಾಜಿಕ ಸ್ಥಾನಮಾನಗಳಾದ ಲಿಂಗ, ಶಿಕ್ಷಣ, ಪ್ರತಿಷ್ಠೆ, ಆತ್ಮೀಯತೆ ಅಧಿಕಾರದ ಸಂಬಂಧಗಳು, ಸಮಾಜೋ ಆರ್ಥಿಕ ಸ್ಥಾನಮಾನಗಳು, ವಾಸಸ್ಥಳ ಹೀಗೆ ಹಲವು ಅಂಶಗಳನ್ನು ಆಧರಿಸಿರುತ್ತವೆ. ಬಹುಮಟ್ಟಿಗೆ ನುಡಿ ಮಿಶ್ರಣದ ಸಂದರ್ಭದಲ್ಲಿ ಇಂತಹ ಸನ್ನಿವೇಶದಲ್ಲಿ ಕಂಡುಬರುವುದು ಕೆಲವು ಕಡೆ ಮಾತ್ರ. ಕನ್ನಡದ ಭಾಷಿಕ ಸಂದರ್ಭಗಳಿಗೆ ಹೆಚ್ಚು ಒಳಗಾದ ತೆಲುಗು ಭಾಷಿಕರಲ್ಲಿ, ವ್ಯಾಪಾರದ ಸಂದರ್ಭಗಳಿಗೆ ಒಳಗಾದ ತೆಲುಗು ಭಾಷಿಕರಲ್ಲಿ ವಯಸ್ಕ ಭಾಷಾ ಕಲಿಕೆಯ ಹಂತ ದಾಟಿದ ಮೇಲೆ ಕನ್ನಡವನ್ನು ಕಲಿತು ದ್ವಿಭಾಷಿಕರಾದ ತೆಲುಗು ವಲಸಿಗರಲ್ಲಿ, ವೈವಾಹಿಕ ಸಂಬಂಧದಿಂದುಂಟಾದ ದ್ವಿಭಾಷಿಕತೆಯಲ್ಲಿ ನುಡಿಮಿಶ್ರಣ ಸಂದರ್ಭವನ್ನು ಮುಖ್ಯವಾಗಿ ಕಾಣಲಾಗಿದೆ.''(ಡಾ.ಎಂ.ಭಾಗ್ಯಲಕ್ಷ್ಮಿ, ೨೦೦೭:೧೯೧) ಕನ್ನಡ ತೆಲುಗು ದ್ವಿಭಾಷಿಕ ಸಂದರ್ಭಗಳಲ್ಲಿ ವಿವಿಧ ಸಂದರ್ಭಗಳಲ್ಲಿ ಭಾಷೆಯನ್ನು ಬಳಸುವುದರಿಂದ ಕನ್ನಡವನ್ನು ಮಾತಾಡುವ ಸಂದರ್ಭವಿದ್ದರೂ

ಅನೇಕ ತೆಲುಗು ಶಬ್ದಗಳು ಬಂದು ಮಧ್ಯೆ ಮಧ್ಯೆ ಸೇರಿಕೊಳ್ಳುತ್ತವೆ. ಇದು ಕನ್ನಡ-ತೆಲುಗು ಸಂದರ್ಭಗಳು ಮಾತ್ರವಲ್ಲದೆ, ಇತರ ದ್ವಿಭಾಷಿಕ ಸನ್ನಿವೇಶಗಳಲ್ಲಿ ನುಡಿ-ಮಿಶ್ರಣವಾಗುತ್ತದೆ. ಇಂತಹ ಸಂದರ್ಭಗಳು ಏಕೆ ಉಂಟಾಗುತ್ತದೆ ಎಂದು ಯೋಚಿಸಿದಾಗ ಅನೇಕ ಮಾಹಿತಿಗಳು ನಮಗೆ ಲಭ್ಯವಾಗುತ್ತವೆ. ದ್ವಿಭಾಷಿಕ ಸನ್ನಿವೇಶಗಳಲ್ಲಿ ಇಲ್ಲಿ ಎರಡು ಭಾಷೆಗಳನ್ನು ಬಲ್ಲವರಿರುವುದರಿಂದ ಒಂದು ಭಾಷೆಯನ್ನು ಮಾತಾಡುವ ಸನ್ನಿವೇಶಗಳಲ್ಲಿ ಇನ್ನೊಂದು ಭಾಷೆಯ ಪದಗಳು ಹೊಳೆಯದೇ ಇದ್ದಾಗ ಮಾತೃಭಾಷೆಯನ್ನೇ ಮಿಶ್ರಣ ಮಾಡಿಕೊಂಡು ಭಾಷೆಯನ್ನು ಬಳಸುವುದುಂಟು. ಬೇರೆ ಭಾಷಿಕರೊಂದಿಗೆ ಮಾತನಾಡುವಾಗ ಅಪರಿಚಿತ ವ್ಯಕ್ತಿಗಳೊಂದಿಗೆ ಸಂಭಾಷಣೆ ಮಾಡುವಾಗ ಬೇರೆ ಭಾಷೆಯ ಸಿನಿಮಾ, ಕತೆ, ನಾಟಕದಂತಹ ಸನ್ನಿವೇಶಗಳನ್ನು ಹೇಳುವಾಗ ನುಡಿಮಿಶ್ರಣವಾಗುತ್ತದೆ.

ಕೇವಲ ದ್ವಿಭಾಷಿಕ ಸಂದರ್ಭದಲ್ಲಿ ಮಾತ್ರವಲ್ಲದೆ ನುಡಿ-ಮಿಶ್ರಣವು ಏಕಭಾಷಿಕ ವ್ಯಕ್ತಿಗಳಲ್ಲಿಯೂ ಕೂಡಾ ನುಡಿ ಮಿಶ್ರಣವಾಗುತ್ತದೆ. ಆಧುನೀಕರಣದ ಪ್ರಭಾವದಿಂದ ಇಂಗ್ಲೀಶ್ ನ ಅನೇಕ ಪದಗಳು ಏಕಭಾಷಿಕರಲ್ಲಿ ಬಂದು ಸೇರಿಕೊಂಡಿವೆ. ದ್ವಿಭಾಷಿಕರಲ್ಲದವರು ಕೂಡಾ ನುಡಿ ಮಿಶ್ರಣ ಅಥವಾ ಭಾಷಾ ಮಿಶ್ರಣ ಮಾಡುತ್ತಾರೆ. ರಾಯಚೂರು ಪರಿಸರದ ಕೆಲವು ನುಡಿ ಮಿಶ್ರಣಕ್ಕೆ ಉದಾಹರಣೆಗಳನ್ನು ಇಲ್ಲಿ ಗಮನಿಸಬಹುದು.

೧. ನಾಲೆ ಏಲು ಗಂಟೆಗೆ ಎದ್ದು ಬಾಯ ಕೆಲಸಕ್ಕೆ ಹೋಗಬೇಕು.

೨. ರೈಚೂರಾಗ ಡಾಕಟ್ರು ಚಾಲ ಮಂದಿ ಐದಾರ

೩. ನಮ್ಮ ಮಗಳ್ದ ಅಲಿಯ ಅಲ್ಲೆ ಇರ್ತಾದೆ.

೪. ಅವ್ರು ಕೋಳಿ ಗುಡ್ಲು ತಿಂಬಂಗಿಲ್ಲ. ನೈಸ್ ಮಂದಿ ಐದಾರ

ವ್ಯಾಪಾರದಿಂದಾಗಿ, ವೈವಾಹಿಕ ಸಂಬಂಧದಿಂದಾಗಿ, ಉಂಟಾದ ದ್ವಿಭಾಷಿಕ ಪ್ರದೇಶದಲ್ಲಿ ನುಡಿಮಿಶ್ರಣದ ಸಂದರ್ಭಗಳು ಕಾಣಬಹುದು. ಕನ್ನಡ ತೆಲುಗು ದ್ವಿಭಾಷಿಕ ಪ್ರದೇಶದಲ್ಲಿ ಮಹಿಳಾ ವಲಯದಲ್ಲಿ ಹೆಚ್ಚಾಗಿ ನುಡಿ ಮಿಶ್ರಣ ಕಾಣಬಹುದಾಗಿದೆ. ಔಪಚಾರಿಕವಾಗಿ ಕನ್ನಡವನ್ನು ಕಲಿತು ಬಳಸುತ್ತಿರುವುದರಿಂದ ಮನೆ ಭಾಷೆ ಕಲಿತು ಅನೇಕ ವರ್ಷಗಳ ನಂತರದಲ್ಲಿ ಮತ್ತೊಂದು ಭಾಷೆಯನ್ನು ಕಲಿಯುವ ಸಂದರ್ಭ ಇಂತಹ ಮಹಿಳೆಯರಿಗೆ ಒದಗಿಬರುವುದರಿಂದ ಭಾಷಾ ಮಿಶ್ರಣಗಳು ಉಂಟಾಗುತ್ತವೆ. ಪುರುಷ ದ್ವಿಭಾಷಿಕರಲ್ಲಿ ಇಂತಹ ಭಾಷಾ ಮಿಶ್ರಣಗಳು ಕಡಿಮೆ. ಕೆಲವು ಸಮೂದಾಯಗಲಲ್ಲಿ ಪುರುಷ ಹಾಗೂ ಮಹಿಳಾ ಸಮೂದಾಯದಲ್ಲಿ ನುಡಿಮಿಶ್ರಣಗಳು ಆಗುತ್ತವೆ.

ಕನ್ನಡದ ಸಂದರ್ಭದಲ್ಲಿ ನುಡಿ ಮಿಶ್ರಣದ ಕುರಿತಂತೆ ಎಸ್ .ಎನ್ .ಶ್ರೀಧರ್ (೧೯೯೫:೧೦) ಅವರು ಚರ್ಚಿಸಿರುವ ಸಂದರ್ಭವೊಂದನ್ನು ಗಮನಿಸಬಹುದು. "ಒಬ್ಬ ದ್ವಿಭಾಷಿ ಅನೇಕ ಭಾರಿ ದ್ವಿಸಂಸ್ಕೃತನೂ, ಬಹುಸಂಸ್ಕೃತನೂ ಆಗಿರುವುದರಿಂದ ತನ್ನ ಎರಡು ಅಥವಾ ಹೆಚ್ಚು ಸಂಸ್ಕೃತಿಗಳನ್ನೊಳಗೊಂಡ

ಹೆಚ್ಚು ಶ್ರೀಮಂತ ಹೆಚ್ಚು ಸಂಕೀರ್ಣ ವ್ಯಕ್ತಿತ್ವ ಸಂವೇದನೆಯನ್ನು ಅಭಿವ್ಯಕ್ತಗೊಳಿಸಲು ಒಂದಕ್ಕಿಂತ ಹೆಚ್ಚು ಭಾಷೆಗಳ ಸಂಪನ್ಮೂಲಗಳನ್ನು ತೊಡಗಿಸಬೇಕಾಗುತ್ತದೆ. ತಾಂತ್ರಿಕ ವಿಷಯಗಳ ಚರ್ಚೆಯಲ್ಲಿ ಅವಶ್ಯಕವಾದ ಪರಿಭಾಷೆಯು ಇಲ್ಲದಿರುವಾಗ ಅಥವಾ ಒಬ್ಬ ಭಾಷಿಕನಿಗೆ ತಾತ್ಕಾಲಿಕವಾಗಿ ಆ ಪರಿಭಾಷೆಯು ಸಿದ್ಧಿಸದೇ ಇರುವಾಗ ನುಡಿಬೆರಕೆ ಉಪಯೋಗಕ್ಕೆ ಬರುತ್ತದೆ. ಒಂದು ಭಾಷೆಯ ಅರ್ಥದ ತೆರಪುಗಳನ್ನು ಅಥವಾ ವೈಯಕ್ತಿಕ ಮರೆವನ್ನು ಮೀರಲು ಇನ್ನೊಂದು ಭಾಷೆಯನ್ನು ಬೆರೆಸುವುದು ಸಾಮಾನ್ಯ. ಭಾಷಾ ಮರ್ಯಾದೆಯ ದೃಷ್ಟಿಯಿಂದ ನಿಷಿದ್ಧವಾದ ಪದ ಅಥವಾ ಅರ್ಥಗಳನ್ನು ವ್ಯಕ್ತಪಡಿಸಲು ಒಂದು ಭಾಷೆಯಲ್ಲಿನ ರೂಢಿಗತ ಪದಗಳ ಸ್ಥಾನದಲ್ಲಿ ಫ್ಯಾಶನೆಬಲ್ ಪದಗಳನ್ನು ಉಪಯೋಗಿಸಿ ತಮ್ಮ ಆಧುನಿಕತೆಯನ್ನು ಸೂಚಿಸಲು, ಭಾಷಿಕರ ಮಧ್ಯೆ ಇರುವ ಅಂತರವನ್ನು ಕಡಿಮೆ ಮಾಡಲು ನುಡಿಬೆರಕೆಯನ್ನು ದ್ವಿಭಾಷಿಕರು ಉಪಯೋಗಿಸುವಾಗ ಅವರ ಭಾಷೆಗಳ ರಚನಾತ್ಮಕ ಎಲ್ಲೆಗಳು ಸಡಿಲವಾಗತೊಡಗುತ್ತವೆ ಎಂದು ಭಾಷೆಯ ವಾಕ್ಯಾತ್ಮಕ ಲಕ್ಷಣಗಳು ಇನ್ನೊಂದು ಭಾಷೆಗೆ ವರ್ಗಾಯಿಸಲ್ಪಡುತ್ತವೆ.''

ನುಡಿಜಗಿತ ಮತ್ತು ನುಡಿಬೆರಕೆ ಪ್ರಕ್ರಿಯೆಗಳ ಉದ್ದೇಶಗಳನ್ನು ಕುರಿತಂತೆ ''ಒಂದು ಭಾಷೆಯಲ್ಲಿ ಕೊರತೆ ಇರುವ ಭಾಷಾಂಶಗಳನ್ನು ಇನ್ನೊಂದು ಭಾಷೆಯಿಂದ ಎರವಲು ಪಡೆದು ತುಂಬಿಕೊಳ್ಳುವುದೇ ಈ ಭಾಷಾ ಪ್ರಕ್ರಿಯೆಗಳ ಉದ್ದೇಶವೆಂದು ಸಾಮಾನ್ಯವಾಗಿ ತಿಳಿಯಲಾಗುತ್ತದೆ. ನುಡಿಬೆರಕೆಗೆ ಇಂಥ ಕಾರಣಗಳಿರುತ್ತವೆ. ಆದರೆ ಇವು ಕನಿಷ್ಠ ನೆಲೆಯ ಕಾರಣಗಳು ಮಾತ್ರ. ಭಾಷಾಂಶಗಳ ಕೊರತೆ ಇಲ್ಲದಿರುವ ಸಂದರ್ಭಗಳಲ್ಲೂ ನುಡಿಬೆರಕೆ ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತದೆ. ಭಾಷೆಯನ್ನು ಬಳಸುತ್ತಿರುವ ಸಂದರ್ಭ ಭಾಗಿಗಳಾಗಿರುವ ಜನರು ಚರ್ಚಿಸುತ್ತಿರುವ ವಿಷಯ, ಚರ್ಚೆಯ ಸಂಭಾಷಣೆಯ ಉದ್ದೇಶ ಇವೆಲ್ಲವೂ ಒಂದಿಲ್ಲೊಂದು ರೀತಿಯಲ್ಲಿ ನುಡಿ ಬೆರಕೆಗೆ ಕಾರಣವಾಗುತ್ತವೆಂದು ಅಧ್ಯಯನಗಳು ತೋರಿಸಿಕೊಟ್ಟಿವೆ. ಗುಂಪುಗಳಲ್ಲಿ ಸಂಭಾಷಿಸುವಾಗ ಇತರರೊಡನೆ ತಮ್ಮನ್ನು ಗುರುತಿಸಿಕೊಳ್ಳಲು ಈ ಭಾಷಾ ಪ್ರಕ್ರಿಯೆಗಳು ನಡೆಯುತ್ತವೆ.''

ಆದ್ದರಿಂದ ಎಸ್ .ಎನ್ .ಶ್ರೀಧರ್ (೧೯೯೫:೦೭) ಅವರು ಹೇಳುವಂತೆ ಭಾಷಾ ಮಿಶ್ರಣ ನುರಿತ ದ್ವಿಭಾಷಿಕರ ಸಹಜವಾದ ವರ್ತನೆಯೇ ಹೊರತು ಭಾಷೆಯ ಅಜ್ಞಾನದ ಪರಿಣಾಮವಲ್ಲ. ಇದು ಭಾಷಿಕರ ಭಾಷಾಜ್ಞಾನಕ್ಕೂ ಮಿಗಿಲಾದ ಸೂಕ್ಷ್ಮ, ಸೃಷ್ಟಿಶೀಲ ಸಂಕೀರ್ಣ ನಿಯಮಬದ್ಧ ವ್ಯಾಪಾರ. ''ಪ್ರವರ್ಧಮಾನದ ಸಮಾಜಗಳಲ್ಲಿ ಒಂದು ಪ್ರಮುಖ ನಿಯೋಗವನ್ನು ಮಿಶ್ರಭಾಷೆಗಳು ಹೊಂದಿರುತ್ತವೆ. ಮಿಶ್ರ ಭಾಷೆಗಳು ವ್ಯಕ್ತಿ ಭಾಷೆಯ ಲಕ್ಷಣಗಳಾಗಿರದೆ, ಸಾಮಾಜಿಕ ವರ್ತನೆಯ ಭಾಗವಾಗಿರುತ್ತವೆ. ಈ ಮಿಶ್ರಭಾಷೆಯನ್ನು ಇಡೀ ಸಮಾಜ ಭಾಷಾ ಕಲಿಕೆಯ ಮೂಲಕ ಪಡೆಯುವ ಸಾಮಾಜೀಕರಣದ ಭಾಗವಾಗಿ ತನ್ನ ಭಾಷಾ ಸಾಮಾರ್ಥ್ಯದ ಅಂಶವನ್ನಾಗಿ ಸೇರಿಕೊಳ್ಳುತ್ತದೆ.''

ದ್ವಿಭಾಷಿಕ ಪರಿಸರಗಳಂತ ಪ್ರದೇಶಗಳಾದ ಬಳ್ಳಾರಿ, ರಾಯಚೂರು, ಕೋಲಾರದಂತಹ ಗಡಿ ಪ್ರದೇಶಗಳಲ್ಲಿ ನುಡಿ ಜಿಗಿತವೂ ಸಹ ಕಾಣಿಸಿಕೊಳ್ಳುತ್ತದೆ. ಈ ನುಡಿ ಜಿಗಿತವೂ ದ್ವಿಭಾಷಿಕ ಪ್ರದೇಶದಲ್ಲಿ ಇದರ ಪ್ರಕ್ರಿಯೆ ಹೆಚ್ಚು ಕಾಣುತ್ತದೆ. ವ್ಯಾಪಾರದ ಸಂದರ್ಭಗಳಲ್ಲಿ, ವ್ಯಾಪಾರಿಗಳ ಭಾಷೆ ಕನ್ನಡವೇ ಆಗಿದ್ದರೂ ವ್ಯವಹಾರಿಕರು ಎಲ್ಲಾ ಭಾಷೆಯನ್ನು ಬಲ್ಲವರಾಗಿರುತ್ತಾರೆ. ಅವರ ಎರಡನೇ ಭಾಷೆ ತೆಲುಗು ಆಗಿದ್ದರೂ, ಅವರ ಸಂದರ್ಭದಲ್ಲಿ ವಿವರಿಸುವಾಗ ತೆಲುಗನ್ನೆ ಉಪಯೋಗಿಸುತ್ತಾರೆ. ಅಷ್ಟೇ ಅಲ್ಲ ಚುನಾವಣೆ ಭಾಷಣ ಮಾಡುವಾಗ, ಸಿನಿಮಾ ಕತೆಯನ್ನು ಹೇಳುವಾಗ, ಇನ್ನೊಬ್ಬರನ್ನು ಅಣುಕಿಸುವಾಗ, ರಹಸ್ಯ ಮಾತುಗಳನ್ನು ಆಡುವಾಗ ಬ್ಯಾಂಕುಗಳಲ್ಲಿ ಬಳಸುವ ಸಂದರ್ಭಗಳು, ಆತ್ಮೀಯರೊಡನೆ ಮಾತನಾಡುವಾಗ, ಅನ್ಯಭಾಷಿಕರೊಂದಿಗೆ ವ್ಯವಹರಿಸುವಾಗ ನುಡಿ ಜಿಗಿತ ಉಂಟಾಗುತ್ತದೆ.

(ಡಾ.ವಿ.ನಾರಾಯಣ ೧೯೯೮:೨೨) ಅವರು "ಈ ನುಡಿ ಬೆರಕೆ ನುಡಿ ಜಿಗಿತಗಳು ದ್ವಿಭಾಷಿಕ ಸನ್ನಿವೇಶಗಳಲ್ಲಿ ಸಹಜವಾಗಿ ನಡೆಯುತ್ತಿದ್ದರು ಭಾಷಿಕರು ಇವುಗಳನ್ನು ಉತ್ತಮ ಭಾಷಾ ಬಳಕೆಯ ನಿದರ್ಸನಗಳೆಂದು ಭಾವಿಸುವುದಿಲ್ಲ. ನುಡಿಬೆರಕೆಯಲ್ಲಿ ತೊಡಗಿದವರು ಭಾಷೆಯನ್ನು ಕೆಡಿಸುತ್ತಾರೆಂದು ಭಾಷೆಯ ಸೂಕ್ತ ಬಳಕೆ ತಿಳಿಯದೆ ತಮ್ಮ ಕೊರತೆಗಳನ್ನು ತುಂಬಿಕೊಳ್ಳಲು ಹೀಗೆ ಬೆರಕೆ ಮಾಡುತ್ತಾರೆಂದು ಭಾವಿಸುತ್ತಾರೆ. ನುಡಿ ಬೆರಕೆಯ ಸನ್ನಿವೇಶಗಳನ್ನು ದೂರವಿರುಸುವುದು ಭಾಷೆಯ ಶುದ್ದತೆಯನ್ನು ಕಾಯ್ದುಕೊಳ್ಳುವ, ಭಾಷೆಯನ್ನು ಬೆಳೆಸುವ ಮಾರ್ಗವೆಂದು ವಾದಿಸುತ್ತಾರೆ. ಇಂಥ ಚಿಂತನೆಗಳು ದ್ವಿಭಾಷಿಕ ಸನ್ನಿವೇಶದಲ್ಲಿ ಏಕಮುಖಿಯಾದ ಬೆರಕೆ ನಡೆಯುವಾಗ ಮಂಡಿತವಾಗುತ್ತವೆ. ಕನ್ನಡ-ತೆಲುಗು, ತಮಿಳು-ಮಲೆಯಾಳಂ, ಹಿಂದು-ಉರ್ದುಗಳ ನಡುವೆ ನುಡಿಬೆರಕೆ ನಡೆದರೆ ಆಗ ಯಾರು ಈ ಶುದ್ಧತೆಯನ್ನು ಮುಂದಿಡುವುದಿಲ್ಲ. ಎಷ್ಟೋ ವೇಳೆ ಈ ಭಾಷೆಗಳ ದ್ವಿಭಾಷಿಕರಲ್ಲಿ ನುಡಿ-ಬೆರಕೆ ನಡೆಯುವುದು ಅರಿವಿಗೆ ಬರುವುದಿಲ್ಲ. ಏಕೆಂದರೆ ಈ ಬೆರಕೆ ಎರಡು ಭಾಷೆಗಳ ನಡುವೆ ನಡೆಯುತ್ತಿರುತ್ತದೆ'' ಎಂದಿದ್ದಾರೆ.

ರಾಯಚೂರು ಪ್ರದೇಶವು ದ್ವಿಭಾಷಿಕ ಪ್ರದೇಶವಾಗಿರುವುದರಿಂದ ಇಲ್ಲಿ ಭಾಷಾ ಮಿಶ್ರಣದೊಂದಿಗೆ ಭಾಷಾ ಪಲ್ಲಟವೂ ಸಾಮಾನ್ಯವಾಗಿ ಆಗಿದೆ. ಅನೇಕ ಸಂದರ್ಭಗಳಲ್ಲಿ ಸಾಮಾಜಿಕ ಭಾಷಿಕರೊಂದಿಗೆ ಮಾತಾಡುವಾಗ ಸನ್ನಿವೇಶಗಳನ್ನು ವಿವರಿಸುವಾಗಿ ನುಡಿ ಪಲ್ಲಟ ಅಥವಾ ನುಡಿ ಜಿಗಿತವಾಗಿರುವುದು ಮಹತ್ವದ ಸಂಗತಿ. ರಾಯಚೂರು ಪ್ರದೇಶವು ಕೇವಲ ದ್ವಿಭಾಷಿಕ ಪರಿಸರ ಮಾತ್ರವಲ್ಲ ಬಹುಭಾಷಿಕ ಸನ್ನಿವೇಶಗಳನ್ನು ನಗರ ಪ್ರದೇಶದಲ್ಲಿ ಉಂಟು ಮಾಡುತ್ತದೆ. ಇಂತಹ ಪರಿಸರದಲ್ಲಿ ಭಾಷಾ ಪಲ್ಲಟವಾಗಿರುವುದು ಸಹಜವೇ.

ರಾಯಚೂರು ಮಾನ್ವಿ ಪರಿಸರದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅನೇಕ ಅಂಶಗಳು ಭಾಷಾ ಪಲ್ಲಟವನ್ನು ಕುರಿತಿವೆ. ನುಡಿ ಪಲ್ಲಟಗಳ ಸಂದರ್ಭಗಳು ಇಲ್ಲಿ ಅನೇಕ ಕಾರಣಗಳಿಂದ ಉಂಟಾಗಿದೆ. ಅನ್ಯಭಾಷಿಕರ ಬಳಿ ಅವರ ಭಾಷೆಯಲ್ಲೆ ವಿವರಿಸುವಾಗ, ಸಿನಿಮಾ, ನಾಟಕ ಹಾಗೂ ಇತರೆ ಸಂಭಾಷಣೆ

ಮಾಡುವಾಗ, ವ್ಯಾಪರದ ಸಂದರ್ಭದಲ್ಲಿ, ಬೇರೆ ಭಾಷಿಕರೊಂದಿಗೆ ಅರ್ಥವಾಗದ ಮಾತನ್ನು ಆಡುವಾಗ ಹಾಗೂ ಸಾಮಾಜಿಕ ಸಂದರ್ಭಗಳಲ್ಲಿ ತೆರೆದುಕೊಂಡಾಗ ಇಲ್ಲಿ ನುಡಿಪಲ್ಲಟ ಅಥವಾ ಭಾಷಾ ಪಲ್ಲಟವಾಗಿವೆ. ಭಾಷಾ ಪಲ್ಲಟಕ್ಕೆ ರಾಯಚೂರು ಪರಿಸರದಲ್ಲಿ ಈ ರೀತಿ ನೋಡಬಹುದು.

ಉದಾ. ೧. ಪೊದಾಮ ರಾ ಮಾರಪ್ಪ, ಹೋಗಮ ಬಾ ಮಾರಪ್ಪ

೨. ರಾ ಅಕ್ಕ ಪಿಲ್ಲಲು ಅಂದರೂ ಬಾಗುಂಡರಾ ಮನೇಲಿ ಎಲ್ರೂ ಬೇಸದ್ಯೆರೆನಕ್ಕಾ

೩. ಸೆನಿಕಿ ಪೊದಮರಾ ಪನಿವುಂದಿ ಹೊಲಕ ಹೊಗಾಮ ಬಾ ಕೆಲಸ ಐತೆ.

ಅಡಿಟಿಪ್ಪಣಿ

೧. ಕೃಷ್ಣ ಪರಮೇಶ್ವರ ಭಟ್ಟ್, ಕನ್ನಡ-ತೆಲುಗು ದ್ವಿಭಾಷಿಕತೆಯ ಅಧ್ಯಯನ, ೧೯೯೫, ಪು.೧

೨. ಡಾ.ಎಂ.ಭಾಗ್ಯಲಕ್ಷ್ಮಿ, ದ್ವಿಭಾಷಿಕರು, ೨೦೦೭, ಪು.೧೫೯

೩. ಅದೇ, ಪು.೧೯೧

೪. ಡಾ.ಕೆ.ವಿ.ನಾರಾಯಣ, ದ್ವಿಭಾಷಿಕರು, ೧೯೯೮, ಪು.೧೯

೫. ಶ್ರೀಧರ್ ಎನ್.ಎಸ್., ಇಂದಿನ ಕನ್ನಡ ರಚನೆ ಮತ್ತು ಬಳಕೆ, ೧೯೯೫, ಪು.೧೦

೬. ಡಾ.ಕೆ.ವಿ.ನಾರಾಯಣ, ಭಾಷೆಯ ಸುತ್ತಮುತ್ತ, ೧೯೯೮, ಪು.೩೦

೭. ಅದೇ, ೧೯೯೮, ಪು.೩೩

ಅಧ್ಯಾಯ ೭

ಸಮಾರೋಪ

೭

ಸಮಾರೋಪ

ಸಮಾಜದಲ್ಲಿ ಭಾಷೆಯಿಲ್ಲದ ಸಮುದಾಯವೊಂದನ್ನು ಕಲ್ಪಿಸಿಕೊಳ್ಳುವುದು ಕೂಡಾ ಅಸಾಧ್ಯ. ಒಂದೊಂದು ಸಮಾಜವು ತನ್ನದೇ ಆದ ಜೀವಂತ ಭಾಷೆಯನ್ನು ಒಳಗೊಂಡಿರುವುದು ಕಾಣಬಹುದಾಗಿದೆ. ಇಂತಹ ಜೀವಂತ ಭಾಷೆಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡುವುದರ ಮೂಲಕ ಸಮಾಜದ ಅನೇಕ ಸಾಂಸ್ಕೃತಿಕ ವಿಚಾರಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಯಾವುದೇ ಸಮಾಜದ ಸಂಸ್ಕೃತಿಯೂ ಅಧ್ಯಯನವಾಗಬೇಕಾದರೆ, ಅದರ ಭಾಷೆಯನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಕನ್ನಡದಲ್ಲಿ ಸಮಾಜೋ ಭಾಷಿಕ ನೆಲೆಯಲ್ಲಿ ಅಧ್ಯಯನ ಮಾಡಲು ಅಧ್ಯಯನದ ಸಿದ್ಧ ಮಾದರಿಗಳನ್ನು, ವಿಧಿ ವಿಧಾನಗಳನ್ನು ಮಾಡಿಕೊಂಡು ಅಧ್ಯಯನ ಮಾಡಲಾಗುತ್ತಿದೆ. ಅಂತೆಯೇ ರಾಯಚೂರು ಪರಿಸರದ ಕನ್ನಡ ತೆಲುಗು ದ್ವಿಭಾಷಿಕತೆಯ ಸಂದರ್ಭದಲ್ಲಿ ಅಧ್ಯಯನ ಕೈಗೊಂಡಾಗ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅನೇಕ ಪೂರಕ ಮಾಹಿತಿಗಳು ದೊರಕಿರುತ್ತವೆ. ಚಲನಶೀಲವಾದ ಭಾಷಾ ಪ್ರಕ್ರಿಯೆಯಲ್ಲಿ ಕನ್ನಡ ತೆಲುಗು ದ್ವಿಭಾಷಿಕರ ಭಾಷಾ ಕಲಿಕೆ, ಬಳಕೆಯ ನೆಲೆಗಳನ್ನು ಇಟ್ಟುಕೊಂಡು ಕ್ಷೇತ್ರಕಾರ್ಯದ ಮೂಲಕ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಯ ಆಧಾರದ ಮೇಲೆ ಸಮಾಜೋ ಭಾಷಿಕ ಅಂಶಗಳನ್ನು, ದ್ವಿಭಾಷಿಕರ ಭಾಷೆ ಕಲಿಕೆ, ಬಳಕೆ ನೆಲೆಗಳನ್ನು ಭಿನ್ನವಾಗಿರುವುದನ್ನು ಗುರುತಿಸಲಾಗಿದೆ. ಈ ದ್ವಿಭಾಷಾ ಸಂದರ್ಭದಲ್ಲಿ ಕನ್ನಡಿಗರಿಗಿಂತ ತೆಲುಗು ಭಾಷಿಕರಿಗೆ ಕನ್ನಡವನ್ನು ಕಲಿತು ದ್ವಿಭಾಷಿಕರಾಗುವ ಅವಶ್ಯಕತೆಗಳು ಇದ್ದಂತೆ, ಕನ್ನಡಿಗರಿಗೆ ತೆಲುಗು ಭಾಷೆಯನ್ನು ಕಲಿತು ಇಲ್ಲಿ ದ್ವಿಭಾಷಿಕರಾಗುವ ಅವಶ್ಯಕತೆಗಳು ಇಲ್ಲದಿರುವುದು ಕಾಣುತ್ತೇವೆ. ಇದನ್ನ ಕೆಲವು ಪ್ರಶ್ನಾವಳಿಗಳ ಮೂಲಕ ಅಧ್ಯಯನದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ.

ಪ್ರಸ್ತುತ ನನ್ನ ಅಧ್ಯಯನವು ಈವರೆಗೆ ನಡೆದ ಅಧ್ಯಯನ ಮಾದರಿಗಿಂತ ಭಿನ್ನವಾಗಿದೆ. ಈ ಅಧ್ಯಯನವನ್ನು ಸಾಮಾಜಿಕ ಭಾಷಾಶಾಸ್ತ್ರದ ನೆಲೆಯಲ್ಲಿ ಚರ್ಚಿಸಿದ್ದೇನೆ. ಅನೇಕ ಸಮುದಾಯಗಳಲ್ಲಿ

ಬಳಕೆಯಾಗುವ ಕನ್ನಡ ತೆಲುಗು ದ್ವಿಭಾಷಿಕತೆಯ ಹಿನ್ನೆಲೆಯಲ್ಲಿ ಭಾಷೆಗಳನ್ನು ಸಾಮಾಜಿಕ ಭಿನ್ನಾಂಶಗಳಾದ ಲಿಂಗ, ಶಿಕ್ಷಣ, ವಯಸ್ಸು, ವೃತ್ತಿ ಮತ್ತು ಮೊದಲಾದವುಗಳಿಂದ ಇಲ್ಲಿ ವಿಶ್ಲೇಷಿಸಲಾಗಿದೆ.

ಚಾರಿತ್ರಿಕವಾಗಿ ರಾಯಚೂರು ಪರಿಸರವು ಕೆಲವು ರಾಜಮನೆತನಗಳು ಇಲ್ಲಿ ಆಡಳಿತ ನಡೆಸಿರುವುದನ್ನು ಕಾಣುತ್ತೇವೆ. ಈ ಹಿಂದೆ ಇದ್ದ ಆಡಳಿತಾತ್ಮಕ ನಿರ್ಧಾರಗಳು, ಹೈದ್ರಾಬಾದ್ ಕರ್ನಾಟಕ ವಿಮೋಚನಾ ನಂತರ ಆಗಿರುವಂತ ಆಡಳಿತಾತ್ಮಕ ನಿರ್ಧಾರಗಳು ರಾಯಚೂರು ಪರಿಸರದ ಭಾಷೆಯ ಮೇಲೆ ಸಾಕಷ್ಟು ಬದಲಾವಣೆಗಳನ್ನು ತಂದಿದೆ. ಈ ಆಡಳಿತಾತ್ಮಕ ನಿರ್ಧಾರಗಳಿಂದ ತೆಲುಗು, ಉರ್ದು, ಹಿಂದಿ ಮುಂತಾದ ಭಾಷೆಗಳು ಸಮಾಜದ ಮೇಲ್ಮುಖ ಚಲನೆಯಿಂದ ಕನ್ನಡ ಭಾಷೆಯ ಕಡೆಗೆ ಪಲ್ಲಟವಾಗುತ್ತಿರುವುದು ಇಲ್ಲಿ ಗಮನಿಸಬಹುದಾಗಿದೆ. ರಾಯಚೂರು ಪರಿಸರದಲ್ಲಿ ಕೆಳವರ್ಗದ ತೆಲುಗು ಭಾಷಿಕರು ಕನ್ನಡದ ಕಡೆಗೆ ಹೆಚ್ಚು ಪಲ್ಲಟವಾಗುತ್ತಿದ್ದಾರೆ. ಉನ್ನತ ವರ್ಗದ ತೆಲುಗು ಭಾಷಿಕರು ಇಂಗ್ಲಿಶ್ ಕಡೆಗೆ ಪಲ್ಲಟವಾಗುತ್ತಿದ್ದಾರೆ. ಮತ್ತು ತೆಲುಗು ಕನ್ನಡ ಭಾಷೆಯನ್ನು ಮೌಖಿಕ ನೆಲೆಯಲ್ಲಿ ಉಳಿಸಿಕೊಂಡಿದ್ದಾರೆ. ಈ ಅಧ್ಯಯನದಿಂದ ತಿಳಿದಿರುವ ಇನ್ನೊಂದು ಮಾಹಿತಿ ಎಂದರೆ ವಲಸೆಬಂದ ತೆಲುಗು ಭಾಷಿಕರು ಕನ್ನಡದಲ್ಲಿ ಶಿಕ್ಷಣ ಪಡೆಯುವುದು ಹೆಚ್ಚಾಗಿದೆ. ಕನ್ನಡದ ಔಪಚಾರಿಕ ಸಂದರ್ಭಗಳಲ್ಲಿ ತೆಲುಗು ಭಾಷಿಕರೇ ಬೇಗ ಕನ್ನಡಕ್ಕೆ ನುಡಿ ಪಲ್ಲಟವಾಗುತ್ತಿದ್ದಾರೆ. ಹೊರತು ಕನ್ನಡಿಗರು ತೆಲುಗಿಗೆ ನುಡಿ ಪಲ್ಲಟವಾಗುವ ಸಂದರ್ಭಗಳು ಕಡಿಮೆಯಾಗಿವೆ ಎನ್ನುವ ಅಂಶ ಇಲ್ಲಿ ಗುರುತಿಸಲಾಗಿದೆ.

ರಾಯಚೂರು ಮತ್ತು ಮಾನ್ವಿ ಪ್ರದೇಶಗಳು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸ್ಥಾನಮಾನ ಮತ್ತು ಶಿಕ್ಷಣದಿಂದ ಸಮಾಜವು ವರ್ಗೀಕೃತವಾಗಿದೆ. ಇಲ್ಲಿನ ಬ್ರಾಹ್ಮಣರು ಮತ್ತು ಬಹುತೇಕ ಲಿಂಗಾಯತರು ಆರ್ಥಿಕವಾಗಿ ಶೈಕ್ಷಣಿಕವಾಗಿ ಮುಂದುವರಿದವರಾಗಿದ್ದಾರೆ. ಕುರುಬರು, ಬ್ಯಾಡರು (ನಾಯಕ), ಹರಿಜನರು ಇತ್ಯಾದಿ ಸಣ್ಣಪುಟ್ಟ ಸಮುದಾಯವರು ಹಿಂದುಳಿದವರಾಗಿದ್ದಾರೆ. ಬ್ರಾಹ್ಮಣರು ಪ್ರತಿಷ್ಠಿತವರ್ಗದವರಾಗಿದ್ದರಿಂದ ಅವರು ತಮ್ಮದೇ ಆದ ಪ್ರಭೇದವನ್ನು ಬೆಳಸಿಕೊಂಡಿದ್ದಾರೆ. ಹರಿಜನ ಇತ್ಯಾದಿ ದಲಿತವರ್ಗಕ್ಕೆ ಸೇರಿದವರು ಕೆಲವು ಊರುಗಳಲ್ಲಿ ಹರಿಜನರು ಊರಿನಿಂದ ಸುಮಾರು ದೂರದಲ್ಲಿ ಹರಜನ ಕೇರಿಗಳಲ್ಲಿ ವಾಸಿಸುತ್ತಾರೆ. ಸಾಮಾಜಿಕ ಅಂತರವೂ ಹೆಚ್ಚಾದ್ದರಿಂದ ಅವರಿಬ್ಬರ ಭಾಷೆಯ ಅಂತರವೂ ಹೆಚ್ಚು. ಬ್ರಾಹ್ಮಣರ ಮತ್ತು ಲಿಂಗಾಯತರ ಸಾಮಾಜಿಕ ಅಂತರ ಕಡಿಮೆಯಾಗಿದ್ದರಿಂದ ಅವರಿಬ್ಬರ ಭಾಷೆಯ ಅಂತರವೂ ಕಡಿಮೆ.

ಕನ್ನಡ ತೆಲುಗು ಭಾಷಾ ಬಳಕೆಯ ಆವರಣಗಳಲ್ಲಿ ತೆಲುಗು ವಲಸಿಗರು ಎಲ್ಲಾ ಸಂದರ್ಭಗಳಲ್ಲಿ ತೆಲುಗು ಬಳಸುವುದಿಲ್ಲ. ಮನೆಯ ಆವರಣದಲ್ಲಿ ತೆಲುಗು ಭಾಷೆಯನ್ನು, ಸಾರ್ವಜನಿಕ ಸ್ಥಳಗಳಲ್ಲಿ

ಕಚೇರಿ, ಮನೋರಂಜನಾ ಸ್ಥಳಗಳು, ಸಿನಿಮಾ ಮಂದಿರ, ಹೋಟೆಲುಗಳ ಪರಿಸರದಲ್ಲಿ ಕನ್ನಡ ಮಿಶ್ರಿತ ತೆಲುಗು ಭಾಷಿಕ ರೂಪಗಳನ್ನು ಬಳಸುತ್ತಾರೆ. ತೆಲುಗು ಭಾಷಿಕರು ಸನ್ನಿವೇಶ ಸಂದರ್ಭಗಳಿಗೆ ತಕ್ಕಂತೆ ಅನಿವಾರ್ಯವಾಗಿ ಕನ್ನಡವನ್ನು ರಾಯಚೂರು ಪ್ರದೇಶದಲ್ಲಿ ಬಳಸುತ್ತಾರೆ.

ಪ್ರಸ್ತುತ ಈ ಅಧ್ಯಯನವು ರಾಯಚೂರು ಪ್ರದೇಶದಲ್ಲಿ ಆಗಿರುವಂತ ಅನ್ಯ ಭಾಷೆಯ ಪ್ರಭಾವದಿಂದ ಅಂದರೆ ಉರ್ದು, ತೆಲುಗು, ಹಿಂದಿ ಮುಂತಾದ ಭಾಷೆಗಳ ಒತ್ತಡದಲ್ಲಿ ಕನ್ನಡ ಭಾಷೆ ಯಾವ ರೀತಿ ಸಂಗೋಪನೆಯಾಗುತ್ತಿದೆ ಎನ್ನುವುದನ್ನು ತಿಳಿಸುತ್ತದೆ. ಹಾಗೂ ಭಾಷಿಕ ವ್ಯತ್ಯಾಸಗಳನ್ನು ಗುರುತಿಸುವುದರೊಂದಿಗೆ ಕನ್ನಡ ಭಾಷೆಯಲ್ಲಿ ಆಗಿರುವಂತ ನುಡಿಬೆರಕೆ, ನುಡಿಪಲ್ಲಟಗಳನ್ನು ತಿಳಿಸುತ್ತದೆ. ಆಡಳಿತಾತ್ಮಕವಾಗಿ ಭಾಷೆಯ ಬಳಕೆಯು ಯಾವ ರೀತಿಯಾಗುತ್ತಿದೆ ಎಂಬುದನ್ನು ತಿಳಿಸುತ್ತದೆ. ರಾಯಚೂರು ಮಾನ್ವಿ ಪ್ರದೇಶದ ಗಡಿ ಪ್ರದೇಶದಲ್ಲಿ ತೆಲುಗು ಪ್ರಭಾವ ಇರುವುದರಿಂದ, ಕನ್ನಡಿಗರ ಭಾಷಾ ಮನೋಭಾವವನ್ನು ಕುರಿತು ಚರ್ಚಿಸುವುದಲ್ಲದೆ ಸಾಕ್ಷರತೆಯ ಕೌಶಲ್ಯಗಳನ್ನು ತಿಳಿಸುತ್ತದೆ. ಒಟ್ಟಾರೆಯಾಗಿ ಈ ಅಧ್ಯಯನ ಫಲಿತಾಂಶಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಅಧ್ಯಯನದ ಫಲಿತಗಳು

೧. ರಾಯಚೂರು ಪರಿಸರವನ್ನು ಅನೇಕ ಅರಸು ಮನೆತನಗಳು ಆಡಳಿತ ನಡೆಸಿರುವುದರಿಂದ ತೆಲುಗು, ಉರ್ದು, ಹಿಂದಿ, ಇಂಗ್ಲಿಶ್ ಇತ್ಯಾದಿ ಭಾಷೆಗಳ ಪ್ರಭಾವ ರಾಯಚೂರಿನ ಮೇಲೆ ಆಗಿದ್ದರೂ ಕೂಡಾ (ಭಾಷಾ ಬಳಕೆಯ ಕೆಲವು ಆವರಣಗಳಲ್ಲಿ) ಕನ್ನಡ ಭಾಷೆಯು ಸಂಗೋಪನೆಯಾಗುತ್ತಿರುವುದು ಸ್ಪಷ್ಟವಾಗುತ್ತದೆ. ಭಾಷಾವಾರು ಪ್ರಾಂತ್ಯಗಳು ರಚನೆಯಾದ ಮೇಲೆ ರಾಜಕೀಯವಾಗಿ, ಆಡಳಿತಾತ್ಮಕ, ಶೈಕ್ಷಣಿಕ ಹಂತದಲ್ಲಿಯೂ ಕನ್ನಡ ಭಾಷೆ ಸಂಗೋಪನೆಯಾಗುತ್ತಿದೆ.

೨. ಸಾಕ್ಷರತೆಯ ಕೌಶಲಗಳು ಕನ್ನಡದ ಕಡೆಗೆ ವಾಲುತ್ತಿರುವುದು.

೩. ಬೇರೆ ದ್ವಿಭಾಷಿಕ ಪರಿಸರಗಳಿಗೆ ಹೋಲಿಸಿದರೆ, ಕನ್ನಡ ಭಾಷೆಯ ಸಂಗೋಪನೆಯು ರಾಯಚೂರು ಪರಿಸರದಲ್ಲಿ ಹೆಚ್ಚಾಗಿರುವುದು ಕಾಣುತ್ತದೆ.

೪. ತೆಲುಗು ಏಕ ಭಾಷಿಕರು ರಾಯಚೂರಿನ ಗಡಿ ಭಾಗಗಳಲ್ಲಿ ಸಂಪೂರ್ಣವಾಗಿ ಕನ್ನಡದ ಕಡೆಗೆ ಸಾಗುತ್ತಿರುವುದು ಕಂಡುಬರುತ್ತದೆ.

೫. ೧೯೫೬ರಲ್ಲಿ ಭಾಷಾವಾರು ಪ್ರಾಂತ್ಯಗಳಾಗಿ ವಿಭಜನೆಯಾಗುವುದಕ್ಕಿಂತ ಮುಂಚೆ ಇದ್ದ ಭಾಷಿಕ ಪರಿಸರಕ್ಕೂ ಹಾಗೂ ಕಾಲಾಂತರದಲ್ಲಿ ಇತ್ತೀಚೆಗೆ ಆಗಿರುವಂತ ಭಾಷಿಕ ಬದಲಾವಣೆಗಳಲ್ಲಿ ಕನ್ನಡ ಭಾಷಿಕರ ಮನೋಭಾವ ಹೆಚ್ಚಾಗಿರುವುದು ಈ ಅಧ್ಯಯನದಿಂದ ತಿಳಿದುಬರುತ್ತದೆ.

೬. ತೆಲುಗು ಭಾಷಿಕರೇ ಕನ್ನಡಕ್ಕೆ ಬೇಗ ನುಡಿ ಪಲ್ಲಟವಾಗುತ್ತಿರುವುದು ಕಂಡುಬಂದರೆ, ಕನ್ನಡಿಗರು ತೆಲುಗು ಭಾಷೆಗೆ ನುಡಿ ಪಲ್ಲಟವಾಗಿದ್ದು ಅತ್ಯಂತ ಕಡಿಮೆಯಾಗಿದ್ದು ಕಾಣುತ್ತದೆ.

೭. ಪ್ರಸ್ತುತ ಈ ಅಧ್ಯಯನದಿಂದ ಹೊಸ ತಲೆಮಾರಿನವರು ಆಡಳಿತಾತ್ಮಕ ನಿರ್ಧಾರಗಳಿಂದ ರಾಜಕೀಯ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಒತ್ತಡಗಳಿಂದ ಮೂಲ ಸೌಲಭ್ಯವನ್ನು ಪಡೆಯುವ ಸಲುವಾಗಿ ಕನ್ನಡ ಭಾಷೆಗೆ ಪಲ್ಲವಾಗುತ್ತಿರುವುದು ಕಂಡುಬರುತ್ತದೆ.

ಪರಾಮರ್ಶನ ಗ್ರಂಥಗಳು

೧. ಅಶೋಕ ಕುಮಾರ ರಂಜೇರೆ, ೨೦೦೬, ಗುಲಬರ್ಗಾ ರಾಯಚೂರು ಕನ್ನಡ ಭಾಷೆಯ ಸಾಮಾಜಿಕ ಪ್ರಭೇದಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨. ಕರ್ನಾಟಕ ರಾಜ್ಯ ಗೆಜೆಟಿಯರ್, ಗೆಜೆಟಿಯರ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು

೩. ಕೃಷ್ಣಪರಮೇಶ್ವರಭಟ್ಟ, ೧೯೯೫, ಕನ್ನಡ-ತೆಲಗು ದ್ವಿಭಾಷಿಕತೆ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೪. ಗಿರಿಧರ ಪಿ.ಪಿ., ೧೯೭೬, ಕರ್ನಾಟಕ ಭಾರತಿ, ರಾಯಚೂರು ಕನ್ನಡ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫. ನಾರಾಯಣ ಕೆ.ವಿ., ೧೯೯೮, ದ್ವಿಭಾಷಿಕತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬. ನಾರಾಯಣ ಕೆ.ವಿ., ೨೦೦೬, ಕನ್ನಡ ಜಗತ್ತು ಅರ್ಧಶತಮಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭. ನಾರಾಯಣ ಕೆ.ವಿ.(ಸಂ), ೨೦೦೬, ಭಾಷೆ ವಿಶ್ವಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೮. ನಾರಾಯಣ ಕೆ.ವಿ., ಭಾಷೆಯ ಸುತ್ತಮುತ್ತ, ಕ್ರೈಸ್ಟ್ ಕಾಲೇಜು, ಬೆಂಗಳೂರು

೯. ನಮ್ಮಕನ್ನಡ ನಿಯತಕಾಲಿಕೆ, ೧೯೯೮, ಕನ್ನಡ ಭಾಷಾಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦. ಭಾಗಲಕ್ಷ್ಮಿ ಎಂ., ೨೦೦೭, ದ್ವಿಭಾಷಿಕರು, ಸಖಿ ಪ್ರಕಾಶನ, ಹೊಸಪೇಟೆ

೧೧. ಬಿಳಿಗಿರಿ ಎಚ್.ಎಸ್., ೧೯೯೫, ವರಸೆಗಳು, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು

೧೨. ಭೀಮಸೇನರಾವ್ ಡಿ.ಕೆ., ಗುಲಬರ್ಗಾ ರಾಯಚೂರು ಕನ್ನಡ, ಸುವರ್ಣ ಸಂಚಯ

೧೩. ಮಹಾದೇವಯ್ಯ ಪಿ., ೨೦೦೬, ದಲಿತರು ಭಾಷೆ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೪. ಮಹಾದೇವಯ್ಯ ಪಿ., ೧೯೯೯, ಬಳ್ಳಾರಿ ಜಿಲ್ಲೆಗೆ ತೆಲುಗರ ವಲಸೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೫. ಮಹಾದೇವಯ್ಯ ಪಿ., ೧೯೯೦, ಸಾಮಾಜಿಕ ಉಪಭಾಷೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೬. ಮಹಾದೇವಯ್ಯ ಪಿ., ೨೦೦೮, ಕನ್ನಡ ಶಾಸನಗಳ ಭಾಷೆಯ ಪ್ರಾದೇಶಿಕ ಭಿನ್ನತೆಗಳು, ಅಪ್ರಕಟಿತ ಲೇಖನ

೧೭. ಮೃತ್ಯುಂಜಯ ಹೊರಕೇರಿ, ೨೦೦೫, ರಾಯಚೂರು ಜಿಲ್ಲಾ ದರ್ಶನ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೧೮. ಶಂಕರಭಟ್ಟ ಡಿ.ಎನ್., ೨೦೦೬, ಕನ್ನಡ ನುಡಿಯ ಬಗೆಗೆ ಚಿಂತನೆ, ಸುವರ್ಣ ಸಾಹಿತ್ಯ ಗ್ರಂಥಮಾಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೧೯. ಶಂಕರಭಟ್ಟ ಡಿ.ಎನ್., ೧೯೯೫, ಕನ್ನಡ ಭಾಷೆ ಕಲ್ಪಿತ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦. ಶಂಕರಭಟ್ಟ ಡಿ.ಎನ್., ೧೯೬೮, ಮೈಸೂರು ಜಿಲ್ಲೆಯ ಜಾತಿ ಪ್ರಭೇದಗಳ ಅಧ್ಯಯನ, ಲೇಖನ

೨೧. ಶಿವಾನಂದ ವಿ., ೧೯೯೦, ಶಬ್ದಮಣಿದರ್ಪಣದಲ್ಲಿ ಗ್ರಂಥಿಕ ವ್ಯವಹಾರಿಕ ಶೈಲಿಗಳು : ಒಂದು ಸಮಾಜೋ ಭಾಷಿಕ ವಿಶ್ಲೇಷಣೆ, ವಿದ್ಯಾನಿಧಿ ಪ್ರಕಾಶನ, ಮೈಸೂರು

೨೨. ಶಿವಾನಂದ ವಿರಕ್ತಮಠ, ಶ್ರೀಮತಿ ಎಚ್.ಎಸ್., ೨೦೦೬, ಹೆಣ್ಣು ಮತ್ತು ಭಾಷೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೩. ಶ್ರೀಧರ ಎಸ್.ಎನ್., ೧೯೯೫, ಇಂದಿನ ಕನ್ನಡ ರಚನೆ ಮತ್ತು ಬಳಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೪. ಸಂಗಮೇಶ ಸವದತ್ತಿಮಠ, ೧೯೯೮, ಭಾಷಾಲೇಖ, ರೂಪರಶ್ಮಿ ಪ್ರಕಾಶನ, ಗುಲಬರ್ಗಾ

೨೫. ಸಂಗಮೇಶ ಸವದತ್ತಿಮಠ, ೧೯೯೮, ಕನ್ನಡ ಭಾಷಾ ಪ್ರಭೇದಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೬. ಸಂಗಮೇಶ ಸವದತ್ತಿಮಠ, ೧೯೯೧, ಕಲಬುರ್ಗಿ ಮುಸಲ್ಮಾನರ ಕನ್ನಡ, ಚಿದಾನಂದಮೂರ್ತಿ ಗೌರವ ಸಂಪುಟ, ಬೆಂಗಳೂರು

೨೭. ಸೋಮಶೇಖರ ಗೌಡ, ೨೦೦೦, ಭಾಷೆ ರಚನೆ ಮತ್ತು ಬಳಕೆ, ತುಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು

೨೮. ಹೆದ್ದೊರೆ, ಹೈದ್ರಾಬಾದ್ ಕರ್ನಾಟಕದ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ, ೨೦೦೬, ಜಿಲ್ಲಾ ಸಾಹಿತ್ಯ ಪರಿಷತ್ತು ರಾಯಚೂರು

೨೯. Apte M.L and Maharotra, 1998, Interrogation indian Bilirgnilism in a Gupta R.S., and Kailash, 1998 **studies of Indian Socialinguestics**, Creative book, New Delhi

೩೦. website raichur.nic.in/raichur.htm

ಮಹಿಳೆಯರಲ್ಲಿ ಭಾಷಾ ಬಳಕೆಯ ಆವರಣಗಳು

ಕ್ರ. ಸಂ.	ವಯಸ್ಸು	ಜಾತಿ	ಶಿಕ್ಷಣ	ವೃತ್ತಿ	ವರ್ಗವಿಧಾನ	ಕುಟುಂಬ	ಮನೆ	ಅಕ್ಕ ಪಕ್ಕ	ಸಂಬಂಧಿ ಕರು	ಶಾಲೆ ಯಲ್ಲಿ	ಕೆಲಸ ಮಾಡುವ ಕಡೆ	ಮಾರು ಕಟ್ಟೆ	ಪ್ರಾರ್ಥನೆ	ಟಿ.ವಿ. ನೋಡು ವುದು	ಕಚೇರಿ ಗಳಲ್ಲಿ	ಸ್ನೇಹಿ ತರು
೧	೧೦	ಪ.ಜಾ	ಅವಿದ್ಯಾವಂತ	ಮನೆಗೆಲಸ	ಕೆಳವರ್ಗ	ಅವಿಭಕ್ತ	ತೆ	ತೆ	ತೆ	ಕ	ಕ	ಕ	ಕ	ಕತೆ	ಕ	ಕತೆ
೨	೧೪	ಪ.ಪಂ.	ಅವಿದ್ಯಾವಂತ	ಮನೆಗೆಲಸ	ಕೆಳವರ್ಗ	ಅವಿಭಕ್ತ	ತೆ	ತ	ತೆ	ಕ	ಕತೆ	ತೆಕ	-	ಕತೆ	ಕ	ಕತೆ
೩	೧೮	ಅಗಸ	ಅವಿದ್ಯಾವಂತ	ಮನೆಗೆಲಸ	ಕೆ.ಮಧ್ಯಮ	ಅವಿಭಕ್ತ	ತೆಕ	ಕತೆ	ತೆಕ	-	-	-	-	-	-	-
೪	೨೦	ಕುರುಬ	ವಿದ್ಯಾವಂತ	ಮನೆಗೆಲಸ	ಮಧ್ಯಮ	ಅಣು	ತೆಕ	ತೆಕ	ತೆಕ	ಕ	ಕ	ಕ	ಕ	ಕ	ಕ	ಕ
೫	೨೨	ಸಿಳ್ಳ್ಯಾಕ್ಯಾತ	ಅವಿದ್ಯಾವಂತ	ಕೂಲಿ	ಕೆ.ಮಧ್ಯಮ	ಅಣು	ಕ	ತೆಕ	ಕ	ಕ	ಕ	ಕ	ಕ	ಕ	ಕ	ಕ
೬	೨೫	ಗಾಣಿಗ	ವಿದ್ಯಾವಂತ	ಮನೆಗೆಲಸ	ಮೇ ಮಧ್ಯಮ	ಅಣು	ಕತೆ	ಕತೆ	ಕತೆ	ಕ	-	ಕ	-	ಕ	ಕ	ಕ
೭	೨೮	ಮು.ಕಾಪು	ವಿದ್ಯಾವಂತ	ಬ್ಯಾಂಕನೌಕರ	ಉನ್ನತ	ಅಣು	ತೆ	ತೆ	ತೆ	ಕ	ಕತೆ	ತೆಕ	ತೆ	ತೆಕ	ಕತೆ	ತೆಕ
೮	೩೧	ರೆಡ್ಡಿ	ವಿದ್ಯಾವಂತೆ	ಗೃಹಿಣಿ	ಮೇ.ಮಧ್ಯಮ	ಅವಿಭಕ್ತ	ತೆ	ತೆ	ತೆ	ಕ	ತೆಕ	ತೆಕ	ತೆ	ತೆಕ	ಕತೆ	ತೆಕ
೯	೩೫	ಲಿಂಗಾಯತ	ಅವಿದ್ಯಾವಂತ	ವ್ಯವಸಾಹಯ	ಮಧ್ಯಮ	ಅವಿಭಕ್ತ	ಕತೆ	ಕತೆ	ಕತೆ	-	ಕತೆ	ಕ	-	ಕ	ಕ	ಕ
೧೦	೩೮	ಕುರುಬ	ವಿದ್ಯಾವಂತ	ಶಿಕ್ಷಕಿ	ಉನ್ನತ	ಅಣು	ಕತೆ	ಕತೆ	ಕತೆ	ಕ	ಕ	ಕ	-	ಕ	ಕ	ಕ
೧೧	೫೫	ಕಾಪು	ಅವಿದ್ಯಾವಂತ	ಕೂಲಿ	ಕೆಳ	ಅವಿಭಕ್ತ	ತೆ	ಕತೆ	ತೆ	-	ತೆ	ತೆ	ಕತೆ	ತೆ	ತೆಕ	ತೆ
೧೨	೫೯	ಪ.ಪಂ.	ಅವಿದ್ಯಾವಂತ	ಕೂಲಿ	ಕೆಳ	ಅವಿಭಕ್ತ	ತೆ	ಕ	ತೆ	-	ಕತೆ	ತೆ	-	ತೆ	ಕತೆ	ತೆ
೧೩	೬೨	ಕುರುಬ	ಅವಿಭಕ್ತ	--	ಮಧ್ಯಮ	ಅವಿಭಕ್ತ	ಕ	ಕತೆ	ಕ	-	ಕತೆ	ತೆ	ಕ	ತೆಕ	ಕ	ತೆಕ
೧೪	೬೬	ಬ್ರಾಹ್ಮಣ	ವಿದ್ಯಾವಂತ	ಖಾಸಗಿ	ಮೇ.ಮಧ್ಯಮ	ಅವಿಭಕ್ತ	ಕ	ಕತೆ	ಕ	ಕ	ತೆಕ	ತೆ	ಕ	ಕ	ಕ	ಕ
೧೫	೬೮	ಮುಸ್ಲಿಂ	ವಿದ್ಯಾವಂತ	ನಿವೃತ್ತ ಶಿಕ್ಷಕ	ಮಧ್ಯಮ	ಅವಿಭಕ್ತ	ಹಿಕತೆ	ಕಹಿ	ಹಿಕತೆ	ಹಿತೆ	ಹಿತೆಕ	ಹಿತೆ	ಹಿಕ	ಹಿತೆ	ಹಿಕ	ಹಿಕತೆ

ಪುರುಷರಲ್ಲಿ ಭಾಷಾ ಬಳಕೆಯ ಆವರಣಗಳು

ಕ್ರ. ಸಂ.	ವಯಸ್ಸು	ಜಾತಿ	ಶಿಕ್ಷಣ	ವೃತ್ತಿ	ವರ್ಗವಿಧಾನ	ಕುಟುಂಬ	ಮನೆ	ಅಕ್ಕ ಪಕ್ಕ	ಸಂಬಂಧಿ ಕರು	ಶಾಲೆ ಯಲ್ಲಿ	ಕೆಲಸ ಮಾಡುವ ಕಡೆ	ಮಾರು ಕಟ್ಟೆ	ಪ್ರಾರ್ಥನೆ	ಟಿ.ವಿ. ನೋಡು ವುದು	ಕಚೇರಿ ಗಳಲ್ಲಿ	ಸ್ನೇಹಿ ತರು
೧	೧೦	ಈಡಿಗರು	ವಿದ್ಯಾವಂತ	ಕೂಲಿ	ಕೆಳ	ಅಣು	ತೆ	ಕತೆ	ತೆ	ಕ	ಕತೆ	ತೆ	ಕತೆ	ತೆಕ	-	ತೆ
೨	೧೨	ರೆಡ್ಡಿ	ವಿದ್ಯಾವಂತ	ವಿದ್ಯಾರ್ಥಿ	ಮಧ್ಯಮ	ಅಣು	ತೆ	ಕ	ತೆ	ಕ	ತೆ	ತೆ	-	ತೆ	-	ಕ
೩	೧೪	ಪ.ಜಾತಿ	ವಿದ್ಯಾವಂತ	ವಿದ್ಯಾರ್ಥಿ	ಮೇ.ಮಧ್ಯಮ	ಅಣು	ಕ	ಕತೆ	ಕ	ಕ	ಕತೆ	ತೆ	-	ತೆಕ	-	ಕ
೪	೧೯	ಕಾಪು	ವಿದ್ಯಾವಂತ	ಖಾಸಗಿ	ಉನ್ನತ	ಅವಿಭಕ್ತ	ತೆ	ಕತೆ	ತೆ	-	ಕತೆ	ತೆಕ	-	ತೆಕ	-	ಕ
೫	೨೫	ಕುರುಬ	ವಿದ್ಯಾವಂತ	ಶಿಕ್ಷಕ	ಮಧ್ಯಮ	ಅಣು	ತೆ	ಕ	ತೆ	ಕ	ಕ	ತೆಕ	ಕ	ತೆಕ	ಕ	ಕ
೬	೩೧	ಪ.ಜಾತಿ	ಅವಿದ್ಯಾವಂತ	ಕೂಲಿ	ಕೆಳ	ಅವಿಭಕ್ತ	ತೆ	ಕತೆ	ತೆ	-	ತೆ	ತೆ	-	ತೆ	-	ತೆಕ
೭	೪೦	ಒಕ್ಕಲಿಗ	ವಿದ್ಯಾವಂತ	ಒಕ್ಕಲುತನ	ಕೆಳಮಧ್ಯಮ	ಅವಿಭಕ್ತ	ಕ	ಕತೆ	ಕ	-	ಕತೆ	ತೆಕ	ಕ	ಕತೆ	ಕ	ತೆಕ
೮	೪೫	ಬ್ರಾಹ್ಮಣ	ವಿದ್ಯಾವಂತ	ಬ್ಯಾಂಕನೌಕರ	ಮೇ ಮಧ್ಯಮ	ಅಣು	ಕ	ತೆಕ	ತೆಕ	ಕ	ಕತೆ	ಕತೆ	ಕ	ತೆಕ	ಕತೆ	ಕ
೯	೪೯	ಬೋವಿ	ಅವಿದ್ಯಾವಂತ	ಕೂಲಿ	ಕೆಳ	ಅವಿಭಕ್ತ	ತೆ	ತೆಕ	ಕತೆ	-	ತೆಕ	ಕತೆ	ಕ	ತೆ	ಕತೆ	ತೆ
೧೦	೫೩	ವೈಶ್ಯ	ವಿದ್ಯಾವಂತ	ವ್ಯಾಪಾರ	ಮಧ್ಯ	ಅವಿಭಕ್ತ	ತೆ	ಕತೆ	ತೆಕ	ಕ	ತೆಕ	ತೆಕ	ಕ	ತೆಕ	ತೆಕ	ತೆಕ
೧೧	೫೫	ಸಿಳ್ಳ್ಯಾಕ್ಯಾತ	ಅವಿದ್ಯಾವಂತ	ಕೂಲಿ	ಮಧ್ಯಮ	ಅವಿಭಕ್ತ	ತೆ	ಕತೆ	ತೆಕ	ಕ	ತೆಕ	ತೆಕ	ಕ	ತೆಕ	ತೆಕ	ತೆಕಮ
೧೨	೪೦	ಬ್ರಾಹ್ಮಣ	ವಿದ್ಯಾವಂತ	ಮ.ಕೆಲಸ	ಕೆಳ	ಅಣು	ಕ	ಕ	ಕ	ಕ	ಕತೆ	ಕ	ಕ	ಕ	ಕ	ಕತೆ
೧೩	೪೫	ವೈಶ್ಯ	ವಿದ್ಯಾವಂತ	ಗೃಹಿಣಿ	ಮಧ್ಯಮ	ಅಣು	ತೆ	ಕ	ತೆ	ಕ	ತೆಕ	ಕತೆ	ಕ	ಕ	ಕ	ತೆಕ
೧೪	೫೦	ಪ.ಪಂ.	ವಿದ್ಯಾವಂತ	ಕೂಲಿ	ಕೆಳಮಧ್ಯಮ	ಅವಿಭಕ್ತ	ತೆಕ	ಕ	ತೆಕ	ಕ	ತೆಕ	ಕತೆ	ಕ	ತೆಕ	ಕ	ತೆಕ
೧೫	೫೮	ಕಬ್ಬೇರ	ಅವಿದ್ಯಾವಂತ	ಮ.ಕೆಲಸ	ಮಧ್ಯಮ	ಅವಿಭಕ್ತ	ತೆಕ	ಕತೆ	ಕತೆ	ಕ	ಕ	ಕ	ಕ	ಕ	ಕ	ಕ